Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 183
ಶುಕ್ರವಾರ, 3 ಜುಲೈ 2026 | ಪುಟಗಳು: 13+4 | ಬೆಲೆ: ₹ 5.00
c
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ವಿಜಯ ಕರ್ನಾಟಕ

ತ.ನಾಡು ಸಿಎಂ ವಿಜಯ್ ನಟನೆಯ ಕೊನೆಯ ಚಿತ್ರ ಜನನಾಯಗನ್‌ಗೆ ಸೆನ್ಸಾರ್ ಕ್ಲಿಯರೆನ್ಸ್

ಈ ಮೇಷ್ಟ್ರ 'ಅಮೆರಿಕಾ'ವೇ ಬೇರೆ: 90ರ ದಶಕದ ಚಿತ್ರದ ಸೀಕ್ವೆಲ್‌ಗೆ ನಾಗತಿಹಳ್ಳಿ ಚಂದ್ರಶೇಖರ್ ಸಜ್ಜು
ಲವಲVK ನೋಡಿ

ಭಾರತ ಭೇಟಿಯಲ್ಲಿರುವ ಜಪಾನ್ ಪ್ರಧಾನಿ ತಕ್ಕೈಚಿ ಅವರನ್ನು 'ನನ್ನ ತಂಗಿ' ಎಂದು ಬಣ್ಣಿಸಿದ ನರೇಂದ್ರ ಮೋದಿ

G SQUARE 13 YEARS OF BUILDING Trust SINCE 2012

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.
ಜಿ ಸ್ಕ್ವೇರ್ ಅಲ್ಕೆಮಿ

ಹೊಸ ಹಂತದ ಉದ್ಘಾಟನೆ
ರಾಜರಾಜೇಶ್ವರಿ ನಗರ, ಮೈಸೂರು
ಈಗಲೇ ಬುಕ್ ಮಾಡಿ & ತಕ್ಷಣ ನೋಂದಾಯಿಸಿ

PRM/KA/RERA/1268/378/PR/020125/007342

ಹಂತ 1 & ಹಂತ 2 - ಮಾರಾಟವಾಗಿದೆ | 350+ ಸಂತೋಷದ ಕುಟುಂಬಗಳು

LAUNCHING NEW PHASE
G SQUARE Alchemy

ಪ್ರೀಮಿಯಂ ವಿಲ್ಲಾ ಪ್ಲಾಟ್‌ಗಳು ರಾಜರಾಜೇಶ್ವರಿ ನಗರದಲ್ಲಿ

MARKET PRICE ₹ ~~7500~~ PER SQ. FT.
LAUNCH PRICE ₹ 5999 PER SQ. FT. ONWARDS (FIRST 25 BOOKINGS ONLY)

ಮೈಸೂರಿನ ಏಕೈಕ ಹೆಗ್ಗುರುತು ಪ್ಲಾಟೆಡ್ ಕಮ್ಯುನಿಟಿ ₹74 ಲಕ್ಷದಿಂದ ₹20 ಕೋಟಿಯವರೆಗೆ

ಪ್ರೈಮ್ ವಾಣಿಜ್ಯ ಭೂಮಿ

ದೊಡ್ಡದಾಗಿ ಖರೀದಿಸಿ. ದೊಡ್ಡದಾಗಿ ಉಳಿಸಿ.
ಆಫರ್ ಕೇವಲ 7 ದಿನಗಳವರೆಗೆ ಮಾತ್ರ ಮಾನ್ಯ

MARKET PRICE ₹ ~~9000~~ PER SQ. FT.
G SQUARE PRICE ₹ ~~7499~~ PER SQ. FT.
LAUNCH PRICE ₹ 7199 PER SQ. FT. ONWARDS

80 ಅಡಿ ನ್ಯೂ ಕಾಂತರಾಜ್ ಅರಸ್ ರಸ್ತೆಯ ಮೇಲೆ
3000-9000 ಚ.ಅಡಿ ವರೆಗಿನ ವ್ಯಾಪ್ತಿ

PLOT SIZE	PRICE
1200 SQ. FT.	₹74 L
2400 SQ. FT.	₹1.60 CR
3000 SQ. FT.	₹2.24 CR
4000 SQ. FT.	₹2.90 CR
6000 SQ. FT.	₹4.49 CR
9000 SQ. FT.	₹6.74 CR
25,000 + SQ. FT.	

Up To 80% Bank Loan Available
Canara Bank | ICICI Bank | HDFC BANK | AXIS BANK | punjab national bank | LIC HFL
ZERO BROKERAGE. DISPUTES. MAINTENANCE.
MEMBER CREDAI
CASH NOT ACCEPTED
89701 28000
www.gsquarehousing.com

G SQUARE 13 YEARS OF BUILDING Trust SINCE 2012

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

ಜಿ ಸ್ಕ್ವೇರ್ ಅಲ್ಕೆಮಿ

SHOT AT THE PROJECT LOCATION

35+ ವಿಶ್ವ ದರ್ಜೆಯ ಸೌಲಭ್ಯಗಳು

ಪ್ಲಾಟ್ + ವಿಲ್ಲಾ ಖರೀದಿಸಿ ಮತ್ತು ₹25 ಲಕ್ಷದವರೆಗೆ ಉಳಿಸಿ

BUILD YOUR VILLA AND GET DISCOUNT UP TO
₹5 LAKHS*

OFFICIAL VILLA CONSTRUCTION PARTNER
Brick & Bolt
HOME & COMMERCIAL CONSTRUCTION

EXPERIENCE VILLA LIVING, SPECIALLY CRAFTED FOR YOU

PLOT + 2 BHK VILLA
BUILT UP AREA: 1162 SQ.FT
ಮಾರುಕಟ್ಟೆ ಬೆಲೆ
~~₹1 CR~~
ಜಿ ಸ್ಕ್ವೇರ್ ಬೆಲೆ
₹75L

PLOT + 3 BHK VILLA
BUILT UP AREA: 2522 SQ.FT
ಮಾರುಕಟ್ಟೆ ಬೆಲೆ
~~₹1.95 CR~~
ಜಿ ಸ್ಕ್ವೇರ್ ಬೆಲೆ
₹1.63CR

PLOT + 4 BHK VILLA
BUILT UP AREA: 3487 SQ.FT
ಮಾರುಕಟ್ಟೆ ಬೆಲೆ
~~₹2.51 CR~~
ಜಿ ಸ್ಕ್ವೇರ್ ಬೆಲೆ
₹2.26 CR

ಎರಡು ಯಶಸ್ವಿ ಹಂತಗಳು ಮಾರಾಟವಾಗಿವೆ.

ಈಗ ಪ್ರಾರಂಭವಾಗುತ್ತದೆ ಮುಂದಿನ ಹೆಗ್ಗುರುತು.

LAND WANTED ACROSS KARNATAKA

5 TO 100 ACRES | JOINT VENTURE FOR CONVERTED PLOTTED DEVELOPMENT APPROVED OR UNDER APPROVAL LAYOUTS
FOR ENQUIRY: 99629 83004

Up To 80% Bank Loan Available | Canara Bank | ICICI Bank | HDFC BANK | AXIS BANK | punjab national bank | LIC HFL

G SQUARE BUILD ASSIST
A POST-PURCHASE GUIDANCE PROGRAM

MEMBER CREDAI

CASH NOT ACCEPTED

89701 28000
www.gsquarehousing.com

Bennett & Coleman
THE TIMES OF INDIA
ಶುಕ್ರವಾರ, 3 ಜುಲೈ 2026 | ಪುಟಗಳು: 13+4 | ಬೆಲೆ: ₹ 5.00
www.vijaykarnataka.com
ಸಂಪುಟ: 27 | ಸಂಚಿಕೆ: 183
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ವಿಜಯ ಕರ್ನಾಟಕ

ರಜನಿಕಾಂತ್ ಅಭಿನಯದ ಜೈಲರ್-2 ಅಕ್ಟೋಬರ್ 15ಕ್ಕೆ ಬಿಡುಗಡೆ, ಚಿತ್ರತಂಡದಿಂದ ಅಧಿಕೃತ ಪ್ರಕಟಣೆ

ರಕ್ಕಸ ಕ್ವಾರಿಯಲ್ಲಿ ಸಿಲುಕಿ ಉಸಿರುಗಟ್ಟಿದ ಶ್ರಮಿಕರು | ಬೆಂಗಳೂರು ದಕ್ಷಿಣದ ಮಾದಪಟ್ಟಣ ಬಳಿ ದುರಂತ | ಕ್ವಾರಿ ಮಾಲೀಕ ಸಹಿತ ನಾಲ್ವರ ಬಂಧನ

ಬಂಡೆಗೆ 7 ಕಾರ್ಮಿಕರು ಬಲಿ

ವಿಕ ಸುದ್ದಿಲೋಕ ರಾಮನಗರ (ಬೆಂ.ದಕ್ಷಿಣ)

ಅವರೆಲ್ಲಾ ಹೊಟ್ಟೆಪಾಡಿಗಾಗಿ ನೂರಾರು ಮೈಲು ದೂರದಿಂದ ಇಲ್ಲಿಗೆ ಬಂದಿದ್ದವರು. ಬೃಹತ್ ಗಾತ್ರದ ಬಂಡೆಯನ್ನೇ ನಂಬಿ, ಅದರ ಅಡಿಯಲ್ಲೇ ಬದುಕು ಸಾಗಿಸುತ್ತಿದ್ದವರು. ಆದರೆ ಆ ಬಡಕಾರ್ಮಿಕರ ಪಾಲಿಗೆ ವಿಧಿಯೇ ಬಂಡೆಯ ರೂಪದಲ್ಲಿ ಕರಗಿ ಬಂದಿದ್ದು, 7 ಕಾರ್ಮಿಕರು ರಕ್ಕಸ ಗಾತ್ರದ ಬಂಡೆಯಡಿ ಸಿಲುಕಿ ಅಪ್ಪಚ್ಚಿಯಾಗಿ ಹೋಗಿದ್ದಾರೆ.

ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆ ಬಳಿಯ ಮಾದಪಟ್ಟಣದ ಬಳಿ ಇರುವ ಕ್ವಾರಿಯಲ್ಲಿ ಗುರುವಾರ ಮುಂಜಾನೆ ಬೃಹತ್ ಗಾತ್ರದ ಬಂಡೆ ಕುಸಿದು ಸಂಭವಿಸಿದ ಘೋರ ದುರಂತದಲ್ಲಿ 7 ಕಾರ್ಮಿಕರು ಮೃತಪಟ್ಟು, ಐವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ರಾಮ ನಾಯ್ಕ (46) ಮಧ್ಯಪ್ರದೇಶದ ರಾಜಪಾಲ್ ಸಿಂಗ್ (35) ಸತ್ಯನಾರಾಯಣ ಸಿಂಗ್ (31), ರಾಮವತಾರ ಸಿಂಗ್ (31) ರಾಜೇಶ್ ಪ್ರಸಾದ್ (32) ಧರ್ಮೇಶ್ ಸಿಂಗ್ (30) ಛತ್ತೀಸ್‌ಗಡ ಮೂಲದ ಸಿಮ್ರಾನ್ ಖಾನ್ ಪರ್ದು (34) ಮೃತ ದುರ್ದೈವಿಗಳು. ವಿಜಯಪುರದ ಆನಂದ್ ಸೇರಿದಂತೆ ಗಾಯಗೊಂಡ ಐವರನ್ನು ಕೆಂಗೇರಿ ಬಳಿಯ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಕ್ವಾರಿಯಲ್ಲಿ ಬಂಡೆ ಕಳಚಿ ಬಿದ್ದು ಅವಘಡ ಸಂಭವಿಸಿರುವುದು.

ಬಂಡೆ ಬಿದ್ದ ರಭಸಕ್ಕೆ ನಜ್ಜುಗುಜ್ಜಾಗಿರುವ ಟ್ರ್ಯಾಕ್ಟರ್‌ಗಳು.

ವಿವರ»02

ದುರಂತ ನಡೆದಿದ್ದು ಹೇಗೆ?

ಬೆಂಗಳೂರು ಮೂಲದ ಉದ್ಯಮಿ ಉದಯ್ ಶಂಕರ್ ಅವರಿಗೆ ಸೇರಿದ 'ಕಾವೇರಿ ಕನ್‌ಸ್ಟ್ರಕ್ಷನ್' ಕ್ವಾರಿಯಲ್ಲಿ ಬಿಹಾರ, ಮಧ್ಯಪ್ರದೇಶ ಹಾಗೂ ಯಾದಗಿರಿ ಮೂಲದ 16ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಗುರುವಾರ ಮುಂಜಾನೆ ಬಂಡೆಯನ್ನು ಬ್ಲಾಸ್ಟ್ ಮಾಡಲು ಡ್ರಿಲ್ಲಿಂಗ್ ಕೆಲಸದಲ್ಲಿ ನಿರತರಾಗಿದ್ದರು. ಇದೇ ವೇಳೆ, ಇದಕ್ಕೆ ಹೊಂದಿಕೊಂಡೇ ಇರುವ ಆನಂದ ಸ್ವಾಮಿ ಎಂಬುವವರಿಗೆ ಸೇರಿದ ಪಕ್ಕದ ಕ್ವಾರಿಯಲ್ಲಿ ಹಿಟ್ಯಾಚಿ ಹೈಡ್ರಾಲಿಕ್ ರಾಕ್ ಬ್ರೇಕರ್ ಯಂತ್ರದ ಮೂಲಕ ಬಂಡೆಗಳನ್ನು ಸಡಿಲಗೊಳಿಸುವ ಕೆಲಸ ನಡೆಯುತ್ತಿತ್ತು. ಈ ವೇಳೆ ಹಿಟ್ಯಾಚಿ ಚಾಲಕನ ನಿರ್ಲಕ್ಷ್ಯದಿಂದಾಗಿ ಬೃಹತ್ ಗಾತ್ರದ ಬಂಡೆಯೊಂದು ಕಳಚಿ, ಸುಮಾರು 20 ಅಡಿ ಆಳದಲ್ಲಿ ಕೆಲಸ ಮಾಡುತ್ತಿದ್ದ ಕಾವೇರಿ ಕ್ವಾರಿಯ ಕಾರ್ಮಿಕರ ಮೇಲೆಯೇ ಉರುಳಿ ಬಿದ್ದಿದೆ. ಬಂಡೆಯ ರಭಸಕ್ಕೆ ಕಾರ್ಮಿಕರು ಅದರಡಿಯಲ್ಲೇ ಸಿಲುಕಿ, ಉಸಿರುಗಟ್ಟಿ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ಮೂರು ಟ್ರ್ಯಾಕ್ಟರ್‌ಗಳು, ನಜ್ಜುಗುಜ್ಜಾಗಿವೆ.

ಘಟನೆಗೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ತಾವರೆಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕ್ವಾರಿ ಮಾಲೀಕರಾದ ಬೆಂಗಳೂರಿನ ಎ. ಆನಂದಸ್ವಾಮಿ, ಉದಯಶಂಕರ್, ಮೇಸ್ತ್ರಿ ಪಾಂಡು ಹಾಗೂ ಹಿಟ್ಯಾಚಿ ಆಪರೇಟರ್ ತಿರುಪತಿಯನ್ನು ಸಂಜೆ ವಶಕ್ಕೆ ಪಡೆದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

55 ಕ್ವಾರಿಗಳು ತಾತ್ಕಾಲಿಕ ಬಂದ್

ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಆಯುಕ್ತ ರಂಗಪ್ಪ, ''ರಾಮನಗರ ಸುತ್ತಮುತ್ತಲ 55 ಕಲ್ಲು ಕ್ರಷರ್‌ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಮೃತಪಟ್ಟ ಕಾರ್ಮಿಕರಿಗೆ ತಲಾ 10 ಲಕ್ಷ ರೂಪಾಯಿ ಹಾಗೂ ಗಾಯಗೊಂಡ ಕಾರ್ಮಿಕರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು,'' ಎಂದರು.

ಕೌಟುಂಬಿಕ ಕಾನೂನು ತೊಡಕಿಗೆ
ಇಲ್ಲಿದೆ ಪರಿಹಾರ
ನಿಮ್ಮ ಪ್ರಶ್ನೆಗೆ ಹಿರಿಯ ನ್ಯಾಯವಾದಿ
ಮೀರಾ ಫಡಕೆ ಉತ್ತರ
ಹೊಸ ಅಂಕಣ
ಕಾನೂನು-ಕನ್ನಡಿ
ಇಂದಿನಿಂದ...
»13

ಸಾರಿಗೆ ನೌಕರರ ಮೂಲ ವೇತನ ಹೆಚ್ಚಳ ಜಾರಿ

ಬೆಂಗಳೂರು: ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ಶೇ. 12.5ರಷ್ಟು ಮೂಲ ವೇತನ ಹೆಚ್ಚಳವು 2025ರ ಏಪ್ರಿಲ್‌ನಿಂದ ಪೂರ್ವಾನ್ವಯವಾಗಿ ಜಾರಿಯಾಗಲಿದ್ದು, ಪರಿಷ್ಕೃತ ವೇತನವು ಆಗಸ್ಟ್ ಮೊದಲ ವಾರದಲ್ಲಿ ಸಿಗಲಿದೆ.

ರಾಜ್ಯ ಸರಕಾರ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ಎನ್‌ಡಬ್ಲ್ಯೂಕೆಆರ್‌ಟಿಸಿ ನೌಕರರ ವೇತನ ಪರಿಷ್ಕರಿಸಿ ಮೇ 12ರಂದು ಆದೇಶ ಹೊರಡಿಸಿತ್ತು. ಪರಿಷ್ಕೃತ ವೇತನವನ್ನು ಶ್ರೇಣಿಗಳಿಗೆ ಸರಿಯಾಗಿ ನಿಗದಿ ಮಾಡುವ ವಿಧಾನದ ಬಗ್ಗೆ ಕೆಎಸ್‌ಆರ್‌ಟಿಸಿಯ ಮುಖ್ಯ ಲೆಕ್ಕಾಧಿಕಾರಿ ಆಂತರಿಕ ಸುತ್ತೋಲೆ ಹೊರಡಿಸಿದ್ದಾರೆ.

''2025ರ ಮಾ.31ರಲ್ಲಿದ್ದ ಮೂಲ ವೇತನಕ್ಕೆ ಶೇ. 12.50ರಷ್ಟನ್ನು ಕುಟುಂಬ ಯೋಜನೆಯ ವಿಶೇಷ ಭತ್ಯೆ ಹೊರತುಪಡಿಸಿ ಹೊಂದಾಣಿಕೆ ಮಾಡಲಾಗುವುದು. ವಾರ್ಷಿಕ ವೇತನ ಬಡ್ತಿ ಲಭ್ಯವಿದ್ದಲ್ಲಿ ಅದಕ್ಕೆ ಅನುಗುಣವಾಗಿ ಮೊತ್ತ ಸೇರಿಸಲಾಗುವುದು. ಪರಿಷ್ಕೃತ ಮೊತ್ತ ಸೇರಿ ಕನಿಷ್ಠ ಮೂಲ ವೇತನಕ್ಕಿಂತ ಕಡಿಮೆಯಿದ್ದರೆ, ಅಂತಹವರ ವೇತನವನ್ನು ಕನಿಷ್ಠ ಮೂಲ ವೇತನಕ್ಕೆ ಸರಿದೂಗಿಸಲಾಗುವುದು. ಮೊತ್ತವು ಹುದ್ದೆಯ ಹಂತದಲ್ಲಿ ಅಥವಾ ಎರಡು ಹಂತಗಳ ಮಧ್ಯದಲ್ಲಿದ್ದರೆ ವೇತನ ಶ್ರೇಣಿಯನ್ನು ಮುಂದಿನ ಹಂತಕ್ಕೆ ನಿಗದಿಪಡಿಸಲಾಗುವುದು,'' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ.ಶಿವಕುಮಾರ್ ತಿಳಿಸಿದ್ದಾರೆ.

ವೇತನ ಪರಿಷ್ಕರಣೆಯ ಹಿಂಬಾಕಿ, ಉಪಧನ, ನಿವೃತ್ತಿ, ಗಳಿಕೆ ರಜೆ ನಗದೀಕರಣದ ವ್ಯತ್ಯಾಸದ ಮೊತ್ತವನ್ನು ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ಪಾವತಿಸಲು ಪ್ರತ್ಯೇಕ ಆದೇಶ ಹೊರಡಿಸಲಾಗುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ತಹಶೀಲ್ದಾರ್‌ಗೆ 99 ಸಾವಿರ ರೂ. ವಂಚಿಸಿದ ಸೈಬರ್ ವಂಚಕರು

ಕುಮಾರಕೃಪಾ ಗೆಸ್ಟ್‌ಹೌಸ್ ಹೆಸರಲ್ಲಿ ನಕಲಿ ವೆಬ್‌ಸೈಟ್ ಸೃಷ್ಟಿ

■ **ಮಂಜುನಾಥ್ ಲಗುಮೇನಹಳ್ಳಿ** ಬೆಂಗಳೂರು
manjunatha.s@timesofindia.com

ರಾಜ್ಯದಲ್ಲಿ ಸೈಬರ್ ವಂಚಕರ ಆಟಾಟೋಪ ಮುಂದುವರಿದಿದ್ದು, ಆನ್‌ಲೈನ್ ಮೂಲಕ ಕುಮಾರಕೃಪಾ ಅತಿಥಿ ಗೃಹದಲ್ಲಿ ಕೊಠಡಿ ಕಾಯ್ದಿರಿಸಲು ಪ್ರಯತ್ನಿಸಿದ ತಹಶೀಲ್ದಾರ್‌ವೊಬ್ಬರಿಂದ 99 ಸಾವಿರ ರೂ. ವರ್ಗಾಯಿಸಿಕೊಂಡು ವಂಚಿಸಿರುವುದು ಬೆಳಕಿಗೆ ಬಂದಿದೆ.

■ ಸ್ಕ್ಯಾನರ್ ಕಳುಹಿಸಿ ಹಣ ವರ್ಗಾಯಿಸಿಕೊಂಡ ವಂಚಕರು

ಈ ಕುರಿತು ಇಂಡಿ ತಾಲೂಕಿನ ಹಿಂದಿನ ತಹಶೀಲ್ದಾರ್ ಬಿ.ಎಸ್. ಕಡಕಭಾವಿ ಅವರು ನಗರದ ಸೈಬರ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಇದರನ್ವಯ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಇಂಡಿ ತಾಲೂಕಿನಿಂದ ವರ್ಗಾವಣೆಗೊಂಡಿರುವ ಕಡಕಭಾವಿ ಅವರು ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗುವ ಸಲುವಾಗಿ ಪತ್ನಿ ಜತೆ ಜೂ.23ರಂದು ಬೆಂಗಳೂರಿಗೆ ಆಗಮಿಸಿದ್ದರು. ವಾಸ್ತವ್ಯದ ಸಲುವಾಗಿ ಕುಮಾರಕೃಪಾ ಅತಿಥಿ ಗೃಹದಲ್ಲಿ ಕೊಠಡಿ ಕಾಯ್ದಿರಿಸುವ ಸಲುವಾಗಿ ಆನ್‌ಲೈನ್ ಮೊರೆಹೋಗಿದ್ದರು.

ಗೂಗಲ್‌ನಲ್ಲಿ 'ಕುಮಾರಕೃಪಾ ಗೆಸ್ಟ್‌ಹೌಸ್' ಎಂದು ಟೈಪ್ ಮಾಡಿದ ಕೂಡಲೇ ವ್ಯಾಟ್ಸಾಪ್ ಲಿಂಕ್ ಕಾಣಿಸಿಕೊಂಡಿದ್ದು, ಅದನ್ನು ಕ್ಲಿಕ್ ಮಾಡಿದ್ದರು. ಬಳಿಕ ಅಪರಿಚಿತ ವ್ಯಕ್ತಿಯು ಕೊಠಡಿ ಬುಕ್ಕಿಂಗ್ ಕುರಿತ ಮಾಹಿತಿ ಹಾಗೂ ಹಣ ಪಾವತಿಗೆ ಸ್ಕ್ಯಾನರ್ ಕಳುಹಿಸಿಕೊಟ್ಟಿದ್ದಾನೆ. ಹಣ ಪಾವತಿ ಬಳಿಕ ಕೊಠಡಿ ಕಾಯ್ದಿರಿಸಲಾಗುವುದು ಎಂದು ತಿಳಿಸಿದ್ದಾನೆ.

ಇದನ್ನು ನಂಬಿದ ಕಡಕಭಾವಿ ಅವರು, ಮೊದಲಿಗೆ 14,238 ರೂ.ಗಳನ್ನು ಸ್ಕ್ಯಾನರ್ ಮೂಲಕ ವರ್ಗಾಯಿಸಿದ್ದರು. ವಂಚಕನು ಹಣ ಪಾವತಿಯಾಗಿಲ್ಲ ಎಂದು ತಿಳಿಸಿದ್ದಾನೆ. ಹೀಗಾಗಿ, ಮತ್ತೊಮ್ಮೆ 13,560 ರೂ. ವರ್ಗಾಯಿಸಿದ್ದಾರೆ. ಬಳಿಕ ಕ್ರಮವಾಗಿ 28,476 ರೂ. ಹಾಗೂ 42,714 ರೂ.ವರ್ಗಾಯಿಸಿದ್ದಾರೆ.

ಬೆಳಗ್ಗೆ 10.20 ರಿಂದ ಸಂಜೆ 5.25ರವರೆಗೆ ಐದು ಹಂತಗಳಲ್ಲಿ 99,666 ರೂ. ವರ್ಗಾಯಿಸಿದ್ದಾರೆ. ಆನಂತರವೂ ವಂಚಕನು, ಹಣ ಪಾವತಿಯಾಗಿಲ್ಲವೆಂದು ತಿಳಿಸಿದ್ದಾನೆ. ಇದರಿಂದ ಎಚ್ಚೆತ್ತ ಕಡಕಭಾವಿ ಅವರು ವಂಚಕನನ್ನು ತರಾಟೆ ತೆಗೆದುಕೊಂಡಿದ್ದಾರೆ. ಬಳಿಕ ಆತ ಸಂಪರ್ಕ ಕಡಿತಗೊಳಿಸಿದ್ದಾನೆ.

ಆನಂತರ ಅವರು ಕುಮಾರಕೃಪಾ ಅತಿಥಿ ಗೃಹದ ಬಳಿ ತೆರಳಿ, ಅಲ್ಲಿನ ಸಿಬ್ಬಂದಿಯನ್ನು ವಿಚಾರಿಸಿದ್ದಾರೆ. ಅತಿಥಿ ಗೃಹಕ್ಕೆ ಸಂಬಂಧಿಸಿದಂತೆ ಯಾವುದೇ ವೆಬ್‌ಸೈಟ್ ಇಲ್ಲ, ಕೊಠಡಿಗಳ ಬುಕ್ಕಿಂಗ್‌ಗೂ ಅವಕಾಶವಿಲ್ಲವೆಂದು ತಿಳಿಸಿದ್ದಾರೆ.

ಇದರಿಂದ ತಾನು ಮೋಸ ಹೋಗಿರುವುದನ್ನು ಅರಿತ ತಹಶೀಲ್ದಾರ್ ಕಡಕಭಾವಿ, ಜೂ.24ರಂದು ಸೈಬರ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಹಣ ವರ್ಗಾವಣೆಯ ವಿವರ ಪಡೆದು ಪತ್ತೆಗೆ ಕ್ರಮ ವಹಿಸಿದ್ದಾರೆ.

ಅಪರಿಚಿತರನ್ನು ನಂಬಬೇಡಿ

ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಹತ್ತಾರು ಮಾರ್ಗಗಳಲ್ಲಿ ಸೈಬರ್ ವಂಚನೆ ನಡೆಯುತ್ತಿದೆ. ಈ ಪೈಕಿ ಸ್ಕ್ಯಾನರ್ ವಂಚನೆಯೂ ಸೇರಿಕೊಂಡಿದೆ. ಅಪರಿಚಿತರು ಸ್ಕ್ಯಾನ್ ಮಾಡುವಂತೆ ಬೇಡಿಕೆ ಇಟ್ಟಾಗ ಸ್ಪಷ್ಟವಾಗಿ ನಿರಾಕರಿಸಬೇಕು. ಒಮ್ಮೆ ಸ್ಕ್ಯಾನ್ ಮಾಡಿದ ಬಳಿಕ ಹಣ ಪಾವತಿಯಾಗಿಲ್ಲವೆಂದು ತಿಳಿಸಿದರೆ, ವಂಚಕರು ಮೋಸ ಮಾಡುತ್ತಿದ್ದಾರೆಂಬುದನ್ನು ಅರಿತುಕೊಳ್ಳಬೇಕು. ತಕ್ಷಣವೇ 1930 ಸಂಖ್ಯೆಗೆ ಕರೆ ಮಾಡಿ ದೂರು ನೀಡಬೇಕು. ಗೋಲ್ಡನ್ ಅವರ್‌ನಲ್ಲಿ ಪೊಲೀಸರಿಗೆ ಮಾಹಿತಿ ನೀಡಿದರೆ ವಂಚಕರು ವರ್ಗಾಯಿಸಿಕೊಂಡಿರುವ ಹಣವನ್ನು ಬ್ಯಾಂಕ್ ಖಾತೆಗಳಲ್ಲಿ ಫ್ರೀಜ್ ಮಾಡಿಸಬಹುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸಲಹೆ ನೀಡಿದರು.

ಅಚಾನಕ್ ಆಗಿ ಯಾಮಾರಿದೆ

''ಖಾಸಗಿ ಕಾರ್ಯಕ್ರಮದ ಸಲುವಾಗಿ ನಗರಕ್ಕೆ ಆಗಮಿಸಿದ್ದೆ. ಸರಕಾರಿ ಅತಿಥಿ ಗೃಹದಲ್ಲಿ ಕೊಠಡಿ ಕಾಯ್ದಿರಿಸಲು ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಿದೆ. ಈ ವೇಳೆ ಖದೀಮರು ವಂಚಿಸಿದರು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದು, ತನಿಖೆ ನಡೆಯುತ್ತಿದೆ,'' ಎಂದು ಕಡಕಭಾವಿ 'ವಿಜಯ ಕರ್ನಾಟಕ'ಕ್ಕೆ ತಿಳಿಸಿದರು.

ಮಹಾ ಟಿಇಟಿ ಕನ್ನಡದಲ್ಲಿ ಬರೆಯಲು ಅವಕಾಶ ಕೊಡಿ

ಬೆಂಗಳೂರು: ಮಹಾರಾಷ್ಟ್ರ ಸರಕಾರ ಟಿಇಟಿ ಪರೀಕ್ಷೆಯನ್ನು ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಬೇಕೆಂಬ ಆಗ್ರಹ ಕೇಳಿ ಬಂದಿದೆ.

■ ಪರೀಕ್ಷಾ ಪ್ರಾಧಿಕಾರದ ಧೋರಣೆಗೆ ಕರವೇ ಖಂಡನೆ

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್‌ಸಿಟಿಇ) ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ನಿಯಮಾವಳಿಗಳ ಪ್ರಕಾರ, ಪ್ರಾದೇಶಿಕ ಭಾಷೆಗಳಿಗೂ ಆದ್ಯತೆ ನೀಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಪರೀಕ್ಷೆಯನ್ನು ಕೇವಲ ಮರಾಠಿ ಭಾಷೆಯಲ್ಲಿ ನಡೆಸುವುದರಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂದು ಪ್ರೊ.ಬಿ.ಕೆ.ಆರ್.ರಾವ್ ಬೈಂದೂರು ಹಾಗೂ ಕನ್ನಡಪರ ಸಂಘಟನೆಗಳ ಮುಖಂಡರು ಆರೋಪಿಸಿದ್ದಾರೆ.

ಮಹಾರಾಷ್ಟ್ರ ಸರಕಾರ ಮತ್ತು ಪರೀಕ್ಷಾ ಪ್ರಾಧಿಕಾರದ ಧೋರಣೆಯನ್ನು ಖಂಡಿಸಿರುವ ಕರವೇ, ಕನ್ನಡಿಗರಿಗೂ ಸಹಕಾರಿಯಾಗುವಂತೆ ಪರೀಕ್ಷೆ ನಡೆಸಲು ಆಗ್ರಹಿಸಿದೆ.

ಇಸ್ರೊ ಕೇಂದ್ರ ಕಚೇರಿಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ಆರ್‌ಎಂವಿ ಎರಡನೇ ಹಂತದಲ್ಲಿನ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯನ್ನು (ಇಸ್ರೊ) ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಅಪರಿಚಿತನೊಬ್ಬ ಇ-ಮೇಲ್ ಸಂದೇಶ ಕಳಿಸಿ ಗುರುವಾರ ಕಿಡಿಗೇಡಿತನ ಮೆರೆದಿದ್ದಾನೆ. ಪೊಲೀಸರ ತಪಾಸಣೆ ಬಳಿಕ ಅದು ಹುಸಿಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿದೆ.

ಇಸ್ರೊ ಮುಖ್ಯಸ್ಥರ ಕಚೇರಿ ಸೇರಿ ಹಲವು ಉನ್ನತ ಅಧಿಕಾರಿಗಳ ಇ-ಮೇಲ್‌ಗೆ ಬಾಂಬ್ ಸ್ಫೋಟದ ಬೆದರಿಕೆ ಸಂದೇಶ ಬಂದಿತ್ತು. ಬೆಳಗ್ಗೆ 12 ಗಂಟೆ ಸುಮಾರಿಗೆ ಸಂದೇಶ ಗಮನಿಸಿದ ಸಿಬ್ಬಂದಿಯು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸ್ಥಳಕ್ಕೆ ದೌಡಾಯಿಸಿದ್ದ ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಹಾಗೂ ಪೊಲೀಸರು ಇಸ್ರೊದ ಸಂಪೂರ್ಣ ಆವರಣ ಹಾಗೂ ಕಟ್ಟಡವನ್ನು ಇಂಚಿಂಚೂ ತಪಾಸಣೆ ನಡೆಸಿದ ಬಳಿಕ ಹುಸಿ ಬೆದರಿಕೆ ಸಂದೇಶ ಎಂಬುದು ದೃಢಪಟ್ಟಿತ್ತು. ಬಳಿಕ ಇಸ್ರೋ ಆಡಳಿತ ಸಿಬ್ಬಂದಿ ಹಾಗೂ ಪೊಲೀಸರು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಇಸ್ರೊ ಅಧಿಕಾರಿಗಳಿಂದ ದೂರು ಪಡೆದು ಪ್ರಕರಣ ದಾಖಲಿಸಲಾಗಿದೆ. ಅಪರಿಚಿತನು ಅನಾಮಧೇಯ ಪ್ರಾಕ್ಸಿ ಮೇಲ್‌ನಿಂದ ಸಂದೇಶ ಕಳಿಸಿದ್ದಾನೆ. ಇ-ಮೇಲ್ ಕಳಿಸಿರುವ ಸರ್ವರ್ ಹಾಗೂ ಐಪಿ ವಿಳಾಸದ ಬಗ್ಗೆ ಮಾಹಿತಿ ಕ್ರೋಡೀಕರಿಸಬೇಕಿದೆ. ಈ ಹಿಂದೆ ನಗರದ ಹಲವು ಸಂಸ್ಥೆಗಳಿಗೆ ಕಳಿಸಿದ್ದ ಹುಸಿ ಬಾಂಬ್ ಸ್ಫೋಟ ಬೆದರಿಕೆ ಸಂದೇಶದ ಮೇಲ್‌ಗಳಿಗೂ ಇದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆದರೂ, ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕ್ಷಮೆ ಕೇಳಲು ಪ್ರದೀಪ್ ಈಶ್ವರ್, ಎಸ್‌ಆರ್‌ವಿಗೆ ಒಕ್ಕಲಿಗರ ಸಂಘ ಆಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ತುಚ್ಛವಾಗಿ ಮಾತನಾಡಿರುವ ಶಾಸಕ ಪ್ರದೀಪ್ ಈಶ್ವರ್ ಹಾಗೂ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಯಾವ ಒಕ್ಕಲಿಗ ಎಂದಿರುವ ಶಾಸಕ ಎಸ್.ಆರ್. ವಿಶ್ವನಾಥ್ ಕ್ಷಮೆ ಕೇಳಬೇಕು ಎಂದು ರಾಜ್ಯ ಒಕ್ಕಲಿಗರ ಸಂಘ ಒತ್ತಾಯಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್, ''ಎಚ್.ಡಿ.ಕುಮಾರಸ್ವಾಮಿ ಅವರನ್ನು ಬೈದರೆ, ನಾನು ದೊಡ್ಡವನಾಗುತ್ತೇನೆ ಎಂಬ ಭ್ರಮೆ ಪ್ರದೀಪ್ ಈಶ್ವರ್‌ಗೆ ಇರಬಹುದು. ಇದೇ ರೀತಿಯ ಉದ್ಧಟತನದಿಂದ ಸಮುದಾಯದ ನಾಯಕರ ಬಗ್ಗೆ ಮಾತನಾಡಿದರೆ ಎಫ್‌ಐಆರ್ ದಾಖಲಿಸಿ, ಸಂಘವು ಪ್ರದೀಪ್ ಈಶ್ವರ್ ವಿರುದ್ಧ ಹೋರಾಟ ಮಾಡಲಿದೆ,'' ಎಂದು ಎಚ್ಚರಿಸಿದರು.

''ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಇಬ್ಬರೂ ಒಕ್ಕಲಿಗರೇ. ತಮ್ಮ ನಡುವಿನ ರಾಜಕೀಯ ಭಿನ್ನಾಭಿಪ್ರಾಯದಿಂದ ಸಮುದಾಯದ ಹೆಸರು ತಂದು ಮಾತನಾಡುವುದು ಸರಿಯಲ್ಲ. ಡಿ.ವಿ.ಸದಾನಂದಗೌಡರನ್ನು 'ಯಾವ ಒಕ್ಕಲಿಗ' ಎಂದು ಕೇಳಿರುವುದು ದಕ್ಷಿಣ ಕನ್ನಡ ಭಾಗದ ಸಮುದಾಯದ ಜನರ ಮನಸ್ಸಿಗೆ ಧಕ್ಕೆ ಮಾಡಿದೆ. ಹಾಗಾಗಿ, ಈ ಹೇಳಿಕೆಯನ್ನು ಹಿಂಪಡೆಯುವ ಮೂಲಕ ವಿಶ್ವನಾಥ್ ಅವರು ಕ್ಷಮೆಯಾಚಿಸಬೇಕು,''ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಪುಟ್ಟಸ್ವಾಮಿ, ರಮೇಶ್, ಗಂಗಾಧರ್, ನಲ್ಲಿಗೆರೆ ಬಾಬು, ರೇಣುಕಾ ಪ್ರಸಾದ್, ಹನುಮಂತರಾಯಪ್ಪ ಉಪಸ್ಥಿತರಿದ್ದರು.

ಹೋರಾಟದ ಎಚ್ಚರಿಕೆ

ಯಲಹಂಕ: ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದಗೌಡರ ಬಗ್ಗೆ ಶಾಸಕ ಎಸ್.ಆರ್. ವಿಶ್ವನಾಥ್ ಅವರು ನೀಡಿರುವ ಹೇಳಿಕೆಯನ್ನು ಹಿಂಪಡೆದು, ಒಕ್ಕಲಿಗ ಸಮುದಾಯದ ಕ್ಷಮೆ ಯಾಚಿಸಬೇಕು ಎಂದು ಬೆಂಗಳೂರು ಉತ್ತರ ತಾಲೂಕು ಒಕ್ಕಲಿಗರ ಸಂಘ ಆಗ್ರಹಿಸಿದೆ.

ನಾಡಪ್ರಭು ಕೆಂಪೇಗೌಡರ 517 ನೇ ಜಯಂತಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಮುಖಂಡ ರನ್ನು ಅಭಿನಂದಿಸುವ ಸಲುವಾಗಿ ಕರೆದಿದ್ದ ಸಭೆಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಿ.ಕೃಷ್ಣಪ್ಪ, ''ವಿಶ್ವನಾಥ್ ಅವರು ಹೇಳಿಕೆ ಹಿಂಪಡೆದು, ಕ್ಷಮೆ ಕೇಳದಿದ್ದಲ್ಲಿ ಹೋರಾಟ ನಡೆಸಲಾಗುವುದು,'' ಎಂದು ಎಚ್ಚರಿಸಿದರು.

ಬಮುಲ್ ನಿರ್ದೇಶಕ ಕಡತನಮಲೆ ಸತೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಅದ್ದೆ, ಬಿಜೆಪಿ ಮುಖಂಡ ಎಚ್.ಬಿ.ಹನುಮಯ್ಯ, ಕಾಂಗ್ರೆಸ್ ಮುಖಂಡರಾದ ಚಂದ್ರಪ್ಪ, ವೈ.ಎನ್. ಅಶ್ವತ್, ದಾನೇಗೌಡ ಸೇರಿದಂತೆ ಒಕ್ಕಲಿಗ ಸಮುದಾಯದ ಹಲವು ಮುಖಂಡರು ಭಾಗವಹಿಸಿದ್ದರು.

ಲೋಕಾಯುಕ್ತ ಬಲೆಗೆ ಬಿದ್ದ ಆರೋಗ್ಯ ಇಲಾಖೆ ಅಧಿಕಾರಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ (ಕೆಪಿಎಂಇ) ಪರವಾನಗಿ ನೀಡಲು ಯುನಾನಿ ವೈದ್ಯರಿಂದ 15 ಸಾವಿರ ರೂ. ಲಂಚ ಪಡೆದ ಬೆಂಗಳೂರು ನಗರ ಜಿಲ್ಲಾ ಕುಷ್ಠರೋಗ ಅಧಿಕಾರಿ ಡಾ.ಭುಜಬಲಿ ಡಿ. ಯಾಲಗುದ್ರಿ ಅವರು ಗುರುವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

30 ಸಾವಿರ ರೂ. ಲಂಚಕ್ಕೆ ಬೇಡಿಕೆ

ಎಚ್‌ಬಿಆರ್ ಲೇಔಟ್ ನಿವಾಸಿ ಯುನಾನಿ ವೈದ್ಯ ಮುಘಾಸಿರ್ ಅಹಮದ್ ಮುಜಾಮಿಲ್ ಅವರು ಸ್ವಂತ ಕ್ಲಿನಿಕ್ ಆರಂಭಿಸಲು ಕೆಪಿಎಂಇ ಪರವಾನಗಿ ನೀಡುವಂತೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಅನುಮೋದಿಸಿ ಪರವಾನಗಿ ನೀಡಲು ಡಾ.ಭುಜಬಲಿ ಅವರು 30 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರಿಂದ ನೊಂದ ಮುಘಾಸಿರ್ ಲೋಕಾಯುಕ್ತ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು. ಗುರುವಾರ ದೂರುದಾರರಿಂದ ಮುಂಗಡವಾಗಿ 15 ಸಾವಿರ ರೂ. ಲಂಚ ಸ್ವೀಕರಿಸುವಾಗಲೇ ಟ್ರ್ಯಾಪ್ ಮಾಡಿ ಡಾ.ಭುಜಬಲಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಲೋಕಾಯುಕ್ತ ಎಸ್ಪಿ ಶಿವಪ್ರಕಾಶ್ ದೇವರಾಜು ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಪಿ.ಎಂ ಪ್ರದೀಪ್‌ಕುಮಾರ್, ಇನ್‌ಸ್ಪೆಕ್ಟರ್‌ಗಳಾದ ವಿ.ಎಸ್. ಕೃಷ್ಣಕುಮಾರ್, ಶಂಕರಪ್ಪ ನೇತೃತ್ವದ ತಂಡಗಳು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು.

ಆರೋಪಗಳ ಆಧಾರದಲ್ಲಿ ಕೇಸ್ ದಾಖಲಿಸಲಾಗದು

■ **ವಿಕ ಸುದ್ದಿಲೋಕ** ಬೆಂಗಳೂರು

ವಿದೇಶದಲ್ಲಿ ನೆಲೆಸಿರುವ ಮಹಿಳೆ (ನಾದಿನಿ) ಫೋನ್ ಕರೆಗಳ ಮೂಲಕ ವರದಕ್ಷಿಣೆ ಕಿರುಕುಳ ನೀಡುತ್ತಿರುವ ಆರೋಪದ ಮೇರೆಗೆ ಪ್ರಕರಣ ದಾಖಲಿಸುವುದು ಕಾನೂನಿನ ದುರುಪಯೋಗವಾಗಲಿದೆ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಲಕ್ಸಂಬರ್ಗ್‌ನಲ್ಲಿ ನೆಲೆಸಿರುವ ನಾದಿನಿ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಲಕ್ಸೆಂಬರ್ಗ್‌ನಲ್ಲಿ ನೆಲೆಸಿರುವ ಬೆಂಗಳೂರು ಮೂಲದ ಎನ್. ವಿದ್ಯಾಶ್ರೀ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ, ಈ ಆದೇಶ ನೀಡಿದೆ.

''ಅಲ್ಲದೆ, ನಿಖರವಾದ ಪುರಾವೆಗಳಿಲ್ಲದೆ ಕೇವಲ ಸಾಮಾನ್ಯ ಆರೋಪಗಳ ಆಧಾರದ ಮೇಲೆ ಕ್ರಿಮಿನಲ್ ಮೊಕದ್ದಮೆ ಮುಂದುವರಿಸಲು ಸಾಧ್ಯವಿಲ್ಲ, ನಾದಿನಿಯು 2017ರಲ್ಲೇ ವಿವಾಹವಾಗಿ ಲಕ್ಸೆಂಬರ್ಗ್‌ನಲ್ಲಿ ನೆಲೆಸಿದ್ದಾರೆ. ಕೇವಲ ಫೋನ್ ಕರೆಗಳ ಮೂಲಕ ಪ್ರಚೋದನೆ ನೀಡುತ್ತಿದ್ದರು ಎಂಬುದು ಐಪಿಸಿ ಸೆಕ್ಷನ್ 498 'ಎ' ಅಡಿ ಅಪರಾಧವಾಗುವುದಿಲ್ಲ, ಇಂತಹ ಆರೋಪಗಳನ್ನು ಒಪ್ಪಿಕೊಂಡರೆ, ಸಂಬಂಧಿಕರು ಮಾಡುವ ಪ್ರತಿಯೊಂದು ದೂರವಾಣಿ ಸಂಭಾಷಣೆಯನ್ನೂ ಕ್ರಿಮಿನಲ್ ಅಪರಾಧ ಎಂದು ಬಿಂಬಿಸುವ ಅಪಾಯವಿರುತ್ತದೆ,'' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

''ಅರ್ಜಿದಾರರ ವಿರುದ್ಧದ ಆರೋಪಗಳಲ್ಲಿ ಐಪಿಸಿ ಸೆಕ್ಷನ್ 498 'ಎ' (ವರದಕ್ಷಿಣೆ ಕಿರುಕುಳ), 312 (ಗರ್ಭಪಾತ), 504 (ಉದ್ದೇಶಪೂರ್ವಕವಾಗಿ ಅವಮಾನಿಸಿ ಶಾಂತಿ ಭಂಗ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿ ಯಾವುದೇ ಪ್ರಾಥಮಿಕ ಅಂಶಗಳು ಕಂಡು ಬಂದಿಲ್ಲ, ಆದ್ದರಿಂದ ತನಿಖೆ ಮುಂದುವರಿಸಲು ಅನುಮತಿ ನೀಡುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಲಿದೆ. ಹೀಗಾಗಿ, ಅರ್ಜಿದಾರರ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಲಾಗುತ್ತಿದೆ. ಆದರೆ, ಇತರೆ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಯಲಿದೆ,'' ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಅರ್ಜಿಯಲ್ಲಿ ಎರಡನೇ ಪ್ರತಿವಾದಿಯಾಗಿರುವ ದೂರುದಾರ ಮಹಿಳೆ ಲಾವಣ್ಯ ಎಂಬುವರು ರಾಕೇಶ್ ಎಂಬುವವರನ್ನು 2022ರ ಜುಲೈ 23ರಂದು ವಿವಾಹವಾಗಿದ್ದರು. ವಿವಾಹದ ಒಂದು ವರ್ಷದ ನಂತರ ದಂಪತಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಲಾವಣ್ಯ ಅವರು ಪತಿ, ಅತ್ತೆ, ಮಾವ ಹಾಗೂ ಲಕ್ಸೆಂಬರ್ಗ್‌ನಲ್ಲಿ ವಾಸವಾಗಿರುವ ನಾದಿನಿ ವಿದ್ಯಾಶ್ರೀ (ಅರ್ಜಿದಾರರು) ವಿರುದ್ಧ ವರದಕ್ಷಿಣೆ ಕಿರುಕುಳ, ಬಲವಂತದ ಗರ್ಭಪಾತ ಹಾಗೂ ಜೀವಬೆದರಿಕೆ ಆರೋಪದಡಿ ದೂರು ದಾಖಲಿಸಿದ್ದರು.

ತಮಗೆ ಹೆಚ್ಚಿನ ವರದಕ್ಷಿಣೆ ತರುವಂತೆ ನಾದಿನಿ ಲಕ್ಸೆಂಬರ್ಗ್‌ನಿಂದಲೇ ಪೋಷಕರಿಗೆ ಫೋನ್ ಮಾಡಿ ಪ್ರಚೋದಿಸುತ್ತಿದ್ದರು ಮತ್ತು ತಮಗೂ ಬೆದರಿಕೆ ಹಾಕುತ್ತಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಪ್ರಕರಣ ಸಂಬಂಧ ಪೊಲೀಸರು ತನಿಖೆ ಪ್ರಾರಂಭಿಸಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿದೇಶದಲ್ಲಿರುವ ನಾದಿನಿ ವಿರುದ್ಧದ ಪ್ರಕರಣ ರದ್ದುಪಡಿಸಿದ ಹೈಕೋರ್ಟ್

Bennett & Coleman
THE TIMES OF INDIA
www.vijaykarnataka.com
ಶುಕ್ರವಾರ, 3 ಜುಲೈ 2026 | ಪುಟಗಳು: 13+4 | ಬೆಲೆ: ₹ 5.00
c
ಸಂಪುಟ: 27 | ಸಂಚಿಕೆ: 183
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ



‘ದೇಶ ವಿಭಜನೆಯ ಬಳಿಕ ಭಾರತಕ್ಕೆ ಬಂದವರು ನಿರಾಶ್ರಿತರಲ್ಲ, ಹೋರಾಟದ ಯೋಧರು’: ಮೋಹನ್ ಭಾಗವತ್

₹13,180	₹14,378	₹2,45,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಬೆಂಗಳೂರು ದರ

ರಾಮಮಂದಿರ ಕಾಣಿಕೆ ಲೂಟಿ ಪ್ರಕರಣದಲ್ಲಿ ಟೆನ್ನು ಯಾದವ್ ಕಿಂಗ್‌ಪಿನ್: ಚಂಪತ್ ರಾಯ್ ಬಹಿರಂಗ

ವಿಕ ಹೊಂಗಿರಣ

ತಪ್ಪು ಎನ್ನುವುದು ಜೀವನದ ಒಂದು ಪುಟ ಅಷ್ಟೇ, ಆದರೆ ಸಂಬಂಧ ಎನ್ನುವುದು ಒಂದು ಪುಸ್ತಕವಿದ್ದಂತೆ. ಒಂದು ಪುಟಕ್ಕಾಗಿ ಇಡೀ ಪುಸ್ತಕವನ್ನು ಕಳೆದುಕೊಳ್ಳಬಾರದು.

\- ಅನಾಮಿಕ

SBI
The banker to every Indian
ತ್ವರಿತ ಬ್ಯಾಂಕಿಂಗ್ ಪರಿಹಾರಗಳಿಗಾಗಿ ವಾಟ್ಸ್‌ಪ್‌ನಲ್ಲಿ Hi ಎಂದು ಹೇಳಿ
ಸೇವೆಗಳು
- ನಿಮ್ಮ ಬ್ಯಾಲೆನ್ಸ್, ಮಿನಿ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಿ
- ಖಾತೆ ಸ್ಟೇಟ್‌ಮೆಂಟ್, ಪಿಂಚಣಿ ಸ್ಲಿಪ್ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಿ.
- ನಿಮ್ಮ ಕೆವೈಸಿ ಅನ್ನು ಪರಿಷ್ಕರಿಸಿ
- ಉತ್ಪನ್ನ ಮಾಹಿತಿಯನ್ನು ಮತ್ತು ಇನ್ನೂ ಹೆಚ್ಚಿನದನ್ನು ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹139/- ಕೋಲಾರ 139/- ತುಮಕೂರು 137/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹179/-
ಕೋಲಾರ 179/- ತುಮಕೂರು 177/-
ವಿಥ್ ಸ್ಕಿನ್ ₹252/- ಕೋಲಾರ 252/- ತುಮಕೂರು 250/-
ವಿಥೌಟ್ ಸ್ಕಿನ್ ₹288/- ಕೋಲಾರ 288/- ತುಮಕೂರು 285/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ಅನುಮತಿ ಇಲ್ಲ »05

1,800 ರೂ.ಗಿಂತ ಹೆಚ್ಚಿನ ಪಿಎಫ್ ಪಾಲು ಐಚ್ಛಿಕ »08

ಮೋಂಗ್ಲಾ ಮುತ್ತಿಗೆ ವಿಕ ಫೋಕಸ್ »06

ಬರಗಾಲ ಮುನ್ಸೂಚನೆ, ಜಲಾಶಯ ನೀರು ನಂಬಿ ಕೈ ಸುಟ್ಟುಕೊಳ್ಳದಿರಿ: ರೈತರಿಗೆ ಮನವಿ

ಕುಡಿಯುವ ನೀರು, ವಿದ್ಯುತ್ ಅಭಾವ ಕೊರತೆ ಸಾಧ್ಯತೆ | ಸಚಿವರ ಜಿಲ್ಲಾ ಪರಿಹಾರ ಪ್ರವಾಸ ಫಿಕ್ಸ್

ಸದ್ಯಕ್ಕೆ ಬಿತ್ತನೆ ಬೇಡ: ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು, ಮುಂಬರುವ ದಿನಗಳಲ್ಲಿ ನೀರು ಮತ್ತು ವಿದ್ಯುತ್‌ಗೆ ತೀವ್ರ ಅಭಾವ ಎದುರಾಗಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ. ಪ್ರಮುಖ ಜಲಾಶಯಗಳಿಗೆ ನೀರಿನ ಒಳಹರಿವು ಸಂಪೂರ್ಣ ಶೂನ್ಯಕ್ಕೆ ತಲುಪಿರುವ ಹಿನ್ನೆಲೆಯಲ್ಲಿ, ಅಚ್ಚುಕಟ್ಟು ಪ್ರದೇಶದ ರೈತರು ಸದ್ಯಕ್ಕೆ ಬೆಳೆ ಹಾಕಿ ನಷ್ಟ ಅನುಭವಿಸಬೇಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಕುಡಿಯುವ ನೀರು, ಜಾನುವಾರು ಮೇವು, ಉದ್ಯೋಗ ಸೃಷ್ಟಿ ಸೇರಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಜಿಲ್ಲಾ ಪ್ರವಾಸ ಕೈಗೊಳ್ಳುವಂತೆ ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ನಿರ್ದೇಶನ ನೀಡಿದ್ದು, ತಾವೂ ಸದ್ಯದಲ್ಲೇ ವಿಭಾಗವಾರು ಪ್ರವಾಸ ನಡೆಸುವುದಾಗಿ ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಕೇಂದ್ರದ ಮುನ್ಸೂಚನೆ ಹಾಗೂ ಪ್ರಧಾನಿಯವರು ಈ ಮೊದಲೇ ಹೇಳಿರುವಂತೆ ದೇಶದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಎದುರಾಗುತ್ತಿದ್ದು, ರಾಜ್ಯವೂ ಅನಾವೃಷ್ಟಿಯ ತೆಕ್ಕೆಗೆ ಜಾರಿದೆ. ತುಂಗಭದ್ರಾ, ಮಲಪ್ರಭಾ, ಘಟಪ್ರಭಾ, ಆಲಮಟ್ಟಿ, ವಾಣಿವಿಲಾಸ ಸಾಗರ ಸೇರಿ ಪ್ರಮುಖ ಜಲಾಶಯಗಳಿಗೆ ಒಳಹರಿವು ಶೂನ್ಯಕ್ಕೆ ತಲುಪಿದ್ದು, ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳಿಗೆ ಸುಮಾರು ಶೇ.20ರಷ್ಟು ಮಾತ್ರವೇ ಒಳಹರಿವು ಇದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ತಗ್ಗುತ್ತಿರುವ ಕಾರಣ ವಿದ್ಯುತ್ ಮತ್ತು ಕುಡಿಯುವ ನೀರಿನ ಅಭಾವ ಎದುರಾಗುವ ಆತಂಕ ಕಾಡುತ್ತಿದೆ,'' ಎಂದು ಹೇಳಿದರು.

ರೈತರಿಗೆ ಸೂಚನೆ: ''ಡ್ಯಾಂಗಳಲ್ಲಿ ನೀರಿನ ಸಂಗ್ರಹ ತಗ್ಗಿರುವ ಹಿನ್ನೆಲೆಯಲ್ಲಿ ಬೆಳೆಗಳಿಗೆ ನೀರು ಕೊಡುವ ಪರಿಸ್ಥಿತಿಯಂತೂ ಇಲ್ಲ. ಹಾಗಾಗಿ, ಜಲಾಶಯಗಳ ನೀರನ್ನು ನಂಬಿಕೊಂಡು ರೈತರು ಬೆಳೆ ಹಾಕುವುದು ಬೇಡ. ಉತ್ತಮ ಮಳೆಯಾಗಿ ಜಲಾಶಯಗಳಲ್ಲಿ ನೀರಿನ ಸಂಗ್ರಹ ಸುಧಾರಿಸಿದರೆ, ಸಮಸ್ಯೆ ಇಲ್ಲ. ಆದರೆ, ಈಗಿನ ಸ್ಥಿತಿಯಲ್ಲಿ ಬೆಳೆ ಹಾಕಿ ರೈತರು ತೊಂದರೆ ತೆಗೆದುಕೊಳ್ಳಬಾರದು,'' ಎಂದು ಸಿಎಂ ಮನವಿ ಮಾಡಿದರು

ಸಚಿವರ ಜಿಲ್ಲಾ ಪ್ರವಾಸ: ''ಬರಗಾಲ ಪರಿಸ್ಥಿತಿ ಹಿನ್ನೆಲೆಯಲ್ಲಿ ನೀರು, ಜಾನುವಾರು ಮೇವು ಸೇರಿ ತುರ್ತು ಪರಿಹಾರ ಕಾರ್ಯಗಳ ಉಸ್ತುವಾರಿಗಾಗಿ ಜಿಲ್ಲಾ ಪ್ರವಾಸ ಕೈಗೊಳ್ಳಲು ಸಚಿವರುಗಳಿಗೆ ಸೂಚನೆ ನೀಡಲಾಗಿದೆ. ಕ್ಯಾಬಿನೆಟ್ ವಿಸ್ತರಣೆಯಾಗುವವರೆಗೆ ಒಬ್ಬೊಬ್ಬ ಸಚಿವರಿಗೆ 2–3 ಜಿಲ್ಲೆಗಳ ಉಸ್ತುವಾರಿ ನೀಡಲಾಗಿದ್ದು, ಸಂಬಂಧಿತ ಜಿಲ್ಲೆಗಳಲ್ಲಿ ಸಚಿವರು ಪ್ರವಾಸ ಕೈಗೊಂಡು ಪರಿಸ್ಥಿತಿ ನಿಭಾಯಿಸಲು ನಿರ್ದೇಶನ ನೀಡಲಾಗಿದೆ. ನಾನೂ ವಿಭಾಗವಾರು ಪ್ರವಾಸ ಕೈಗೊಳ್ಳಲಿದ್ದು, ಮುಂದಿನ ಹಂತದಲ್ಲಿ ಜಿಲ್ಲೆಗಳಿಗೂ ಭೇಟಿ ಕೊಟ್ಟು ಪರಿಸ್ಥಿತಿ ಅವಲೋಕನ ಮಾಡುತ್ತೇನೆ,'' ಎಂದು ಸಿಎಂ ಹೇಳಿದರು.

ಕಲ್ಲಿದ್ದಲು ದಾಸ್ತಾನಿಗೆ ತುರ್ತು ಆದೇಶ

ಜಲವಿದ್ಯುತ್ ಉತ್ಪಾದನೆಗೆ ಅಣೆಕಟ್ಟೆಗಳಲ್ಲಿ ನೀರಿಲ್ಲದ ಕಾರಣ, ರಾಜ್ಯವು ಸಂಪೂರ್ಣವಾಗಿ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಮೇಲೆ ಅವಲಂಬಿತವಾಗಬೇಕಿದೆ. ಈ ಹಿನ್ನೆಲೆಯಲ್ಲಿ, ಇಂಧನ ಇಲಾಖೆಯ ಅಧಿಕಾರಿಗಳು ತುರ್ತಾಗಿ ಅವಶ್ಯಕ ಕಲ್ಲಿದ್ದಲು ದಾಸ್ತಾನು ಮಾಡಿಕೊಳ್ಳಲು ಸೂಚನೆ ನೀಡಿದರು. ಬೆಂಗಳೂರಿನ ಹೊರವಲಯದಲ್ಲಿರುವ 340 ಮೆಗಾವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಸ್ಥಾವರವನ್ನು ಕಾರ್ಯಾಚರಣೆಗೆ ಸಜ್ಜುಗೊಳಿಸಲು ನಿರ್ದೇಶಿಸಲಾಗಿದೆ ಎಂದರು.

ಪ್ರತಿಪಕ್ಷ ನಾಯಕ ಪತ್ರ

ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರ ಪರಿಸ್ಥಿತಿ ನಿರ್ವಹಣೆಗಾಗಿ ರಾಜ್ಯ ಸರಕಾರ ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ. ಈ ಸಂಬಂಧ ಅವರು ಗುರುವಾರ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಬಿಎಲ್‌ಒ ಭೇಟಿ ಕಡ್ಡಾಯ

ಮನೆಮನೆಗೆ ತೆರಳಿ ನಮೂನೆ ನೀಡಲು ಸಿಎಂ ಕಟ್ಟಪ್ಪಣೆ

ಎಸ್‌ಐಆರ್ ದುರ್ಬಳಕೆ ಆರೋಪಕ್ಕೆ ತಿರುಗೇಟು

■ **ವಿಕ ಸುದ್ದಿಲೋಕ** ಬೆಂಗಳೂರು

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯಲ್ಲಿ 'ಬಿಎಲ್‌ಒ'ಗಳು ಮನೆಮನೆಗೆ ತೆರಳಿ ಎನ್ಯುಮರೇಶನ್ ಫಾರಂ (ಗಣತಿ ನಮೂನೆ) ವಿತರಿಸುವುದು ಕಡ್ಡಾಯ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟ ಸೂಚನೆ ನೀಡಿದ್ದಾರೆ.

ರಾಮನಗರ, ಚಾಮರಾಜಪೇಟೆ ಮತ್ತಿತರ ಕಡೆಗಳಲ್ಲಿ ಕಲ್ಯಾಣ ಮಂಟಪಗಳಲ್ಲಿ ಗಣತಿ ನಮೂನೆ ವಿತರಣೆಯಂತಹ ಘಟನೆಗಳಿಂದಾಗಿ ಆರಂಭದಲ್ಲೇ ಗೊಂದಲ ಸೃಷ್ಟಿಯಾಗಿರುವ ಬಗ್ಗೆ ಸಿಎಂ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

''ಇದು ಕಾನೂನುಬಾಹಿರ. ಈ ರೀತಿ ಯಾರೇ ಮಾಡಿದರೂ ತಪ್ಪು. ನಮ್ಮ ಪಕ್ಷದ ಶಾಸಕರು ಮಾಡಿದರೂ, ಅದಕ್ಕೆ ಅವಕಾಶ ಕೊಡುವುದಿಲ್ಲ'' ಎಂದು ಸ್ಪಷ್ಟಪಡಿಸಿದರು.

''ಜುಲೈ 29ರವರೆಗೆ ಕಾಲಾವಕಾಶವಿದ್ದು, 'ಬಿಎಲ್‌ಒ'ಗಳೇ ಮನೆ ಮನೆಗೆ ಹೋಗಿ ಅರ್ಜಿಗಳನ್ನು ತಲುಪಿಸಬೇಕು. ಮನೆಯಲ್ಲಿ ಯಾರೂ ಇಲ್ಲದಿದ್ದರೆ ಮತ್ತೊಮ್ಮೆ ಭೇಟಿ ನೀಡುವಂತೆ ಸೂಚನೆ ನೀಡಲಾಗಿದೆ. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಬೂತ್ ಮಟ್ಟದ ಸಹಾಯಕರು ಜನರಿಂದ ಸಂಗ್ರಹಿಸಿ 'ಬಿಎಲ್‌ಒ'ಗಳಿಗೆ ನೀಡಲು ಅವಕಾಶವಿದೆ. ಆದರೆ, ಅರ್ಜಿಗಳನ್ನು 'ಬಿಎಲ್‌ಒ'ಗಳೇ ಮನೆಗಳಿಗೆ ತಲುಪಿಸುವುದು ಕಡ್ಡಾಯ,'' ಎಂದು ಹೇಳಿದರು. »05

ಎಚ್‌ಡಿಕೆ ಆರೋಪ ಚರ್ಚೆಗೆ ಗ್ರಾಸ

ರಾಮನಗರದಲ್ಲಿ ಮುಖ್ಯಮಂತ್ರಿ ಅವರ ನೇರ ಪ್ರಭಾವ ಬಳಸಿ ಬಾಂಗ್ಲಾದೇಶದ ಅಕ್ರಮ ವಲಸಿಗರು ಸೇರಿದಂತೆ ಸಾವಿರಾರು ನಕಲಿ ಮತದಾರರಿಗೆ ದಾಖಲೆ ಸೃಷ್ಟಿಸುವ ಯತ್ನ ನಡೆದಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಇದೇವೇಳೆ ಕೇಂದ್ರ ಚುನಾವಣಾ ಆಯೋಗ ಕೂಡಲೇ ಮಧ್ಯ ಪ್ರವೇಶಿಸಿ ಈ ಅಕ್ರಮಕ್ಕೆ ಕಡಿವಾಣ ಹಾಕಬೇಕು ಎಂದು ಮನವಿ ಮಾಡಿದ್ದಾರೆ. ರಾಮನಗರ ಟಿಪ್ಪುನಗರದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆ ಆರೋಪಿಸಿ ವಿಡಿಯೊ ಬಿಡುಗಡೆ ಮಾಡಿ ಅವರು ಮಾಡಿರುವ ಆರೋಪವು ಚರ್ಚೆಗೆ ಗ್ರಾಸವಾಗಿದೆ.

ಎಸ್‌ಐಆರ್ ಬಳಿಕ ಅಧಿವೇಶನ

ಜುಲೈನಲ್ಲಿ ನಡೆಯಬೇಕಿದ್ದ ವಿಧಾನಮಂಡಲದ ಮುಂಗಾರು ಅಧಿವೇಶನವನ್ನು ಮುಂದೂಡಲಾಗಿದೆ. ರಾಜ್ಯದಲ್ಲಿ ಪ್ರಸ್ತುತ 'ಎಸ್‌ಐಆರ್' ಪ್ರಕ್ರಿಯೆ ನಡೆಯುತ್ತಿರುವುದರಿಂದ, ಶಾಸಕರು ತಮ್ಮ ಕ್ಷೇತ್ರದ ಮತದಾರರ ರಕ್ಷಣೆಗೆ ಧಾವಿಸಬೇಕಿದೆ. ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಬಿಡುಗಡೆಯಾದ ಬಳಿಕ ಅಧಿವೇಶನದ ಹೊಸ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

52 ಕ್ರಿಮಿನಲ್ ಕೇಸ್ ವಾಪಸ್‌ಗೆ ತಡೆ



ಹೈಕೋರ್ಟ್ ಮಹತ್ವದ ಆದೇಶ

ಬೆಂಗಳೂರು: ಕಲಬುರಗಿ ಜಿಲ್ಲೆ ಆಳಂದ ತಾಲೂಕಿನ ಲಾಡ್ಲೆ ಮಶಾಕ್ ದರ್ಗಾ ಗಲಭೆ, ಕೆಲವು ಕೋಮು ಗಲಭೆ ಪ್ರಕರಣಗಳೂ ಸೇರಿದಂತೆ ಹಲವು ರಾಜಕಾರಣಿಗಳು, ರೈತಪರ, ಕನ್ನಡಪರ ಹಾಗೂ ಸಾಮಾಜಿಕ ಹೋರಾಟಗಾರರ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿರುವ ರಾಜ್ಯ ಸರಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಸರಕಾರದ ಆದೇಶ ಪ್ರಶ್ನಿಸಿ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಆದೇಶ ಹೊರಡಿಸಿದೆ. ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಪ್ರಾಸಿಕ್ಯೂಷನ್ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆ. 28ಕ್ಕೆ ಮುಂದೂಡಿದೆ.

ಪೆಟ್ರೋಲ್, ಡೀಸೆಲ್ ದರ ಇಳಿಕೆ ಸದ್ಯಕ್ಕಿಲ್ಲ: ಇಂಧನ ಸಚಿವ



ಹೊಸದಿಲ್ಲಿ: ಹರ್ಮುಜ್ ಬಿಕ್ಕಟ್ಟು ಶಮನವಾದರೂ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಸದ್ಯಕ್ಕೆ ಯಾವುದೇ ಇಳಿಕೆ ಸಾಧ್ಯವಿಲ್ಲ ಎಂದು ಕೇಂದ್ರ ಸರಕಾರ ಗುರುವಾರ ಸ್ಪಷ್ಟಪಡಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಭಾರಿ ಮಟ್ಟದಲ್ಲಿ ಇಳಿಕೆಯಾದ ಬೆನ್ನಲ್ಲೇ ಖಾಸಗಿ ತೈಲ ಕಂಪನಿ 'ನಯಾರಾ' ಪೆಟ್ರೋಲ್, ಡೀಸೆಲ್ ಬೆಲೆಯನ್ನು ಇಳಿಕೆ ಮಾಡಿದೆ. ಹೀಗಾಗಿ ಸರಕಾರಿ ಸ್ವಾಮ್ಯದ ಕಂಪನಿಗಳೂ ಇದೇ ಹಾದಿ ತುಳಿಯಬಹುದೆಂಬ ನಿರೀಕ್ಷೆ ಮೂಡಿತ್ತು. ಆದರೆ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ತೈಲ ಕಂಪನಿಗಳು ನಷ್ಟದಲ್ಲಿವೆ ಎಂದು ಹೇಳುವ ಮೂಲಕ ಈ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ.

74,781 ಕೋಟಿ ರೂ. ನಷ್ಟದಲ್ಲಿ ತೈಲ ಕಂಪನಿಗಳು

''ಭಾರತದ ತೈಲ ಮಾರಾಟ ಕಂಪನಿಗಳು ಅಸಲು ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಮಾರಾಟ ಮಾಡಿದ್ದರಿಂದ ಜೂನ್ 30ರವರೆಗಿನ ಅವಧಿಗೆ ಒಟ್ಟು 74,781 ಕೋಟಿ ರೂ. ನಷ್ಟ ಅನುಭವಿಸಿವೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳು ಈಗ ಇಳಿಕೆಯಾಗಿವೆ. ಆದರೆ, ತೈಲ ಕಂಪನಿಗಳು ಸಾಮಾನ್ಯವಾಗಿ ಕಚ್ಚಾ ತೈಲವನ್ನು ಕನಿಷ್ಠ ಎರಡು ತಿಂಗಳು ಮುಂಚಿತವಾಗಿಯೇ ಖರೀದಿಸುತ್ತವೆ. ಅಂದರೆ ಈಗ ಕಂಪನಿಗಳು ಸಂಸ್ಕರಿಸುತ್ತಿರುವ ತೈಲವು ಏಪ್ರಿಲ್ ಅಥವಾ ಮೇ ತಿಂಗಳ ಆರಂಭದಲ್ಲಿ, ಅಂದರೆ ಪಶ್ಚಿಮ ಏಷ್ಯಾ ಬಿಕ್ಕಟ್ಟು ಉತ್ತುಂಗದಲ್ಲಿದ್ದಾಗ ದುಬಾರಿ ಬೆಲೆಗೆ ಖರೀದಿಸಿದ್ದಾಗಿದೆ. ಹೀಗಾಗಿ ಜಾಗತಿಕವಾಗಿ ದರ ಇಳಿಕೆಯಾಗಿದ್ದರೂ ಅದರ ಲಾಭ ತಕ್ಷಣಕ್ಕೆ ಸಿಗುತ್ತಿಲ್ಲ,'' ಎಂದು ಸಚಿವರು ವಿವರಿಸಿದ್ದಾರೆ.

ಸರ್ಚಾರ್ಜ್ ತಗ್ಗಿಸಿದ ಏರ್ ಇಂಡಿಯಾ

ವಿಮಾನ ಇಂಧನ ಬೆಲೆ ಇಳಿಕೆ ಬೆನ್ನಲ್ಲೇ, ಏರ್ ಇಂಡಿಯಾ ಸಂಸ್ಥೆಯು ಅಮೆರಿಕ, ಆಸ್ಟ್ರೇಲಿಯಾ ಯೂರೋಪ್ ಸೇರಿದಂತೆ ವಿದೇಶಿ ವಿಮಾನಯಾನದ ಮೇಲೆ ವಿಧಿಸುತ್ತಿದ್ದ ಹೆಚ್ಚುವರಿ 'ಇಂಧನ ಸರ್ಚಾರ್ಜ್' ಅನ್ನು ಅಲ್ಪ ಮಟ್ಟದಲ್ಲಿ ಕಡಿತಗೊಳಿಸಿದೆ. ಜುಲೈ 1ರಿಂದ ಹೊಸ ದರಗಳು ಅನ್ವಯ ಎಂದು ಸಂಸ್ಥೆಯು ತಿಳಿಸಿದೆ.

ಕ್ವಾರಿ ಮಾಲೀಕರಿಂದ ನಿಯಮ ಉಲ್ಲಂಘನೆ?

ಹಣದ ಮುಂದೆ ಎಂಎಲ್‌ಎ ಪವರ್ ನಡೆಯುತ್ತಿಲ್ಲ: ಅಧಿಕಾರಿಗಳ ವಿರುದ್ಧ ಎಸ್.ಟಿ.ಸೋಮಶೇಖರ್ ಆಕ್ರೋಶ

■ **ವಿಕ ಸುದ್ದಿಲೋಕ** ರಾಮನಗರ (ಬೆಂ.ದಕ್ಷಿಣ)

ಬೆಂಗಳೂರು ದಕ್ಷಿಣ ತಾಲೂಕಿನ ತಾವರೆಕೆರೆ ಬಳಿಯ ಮಾದಪಟ್ಟಣದಲ್ಲಿ ನಡೆದ ಭೀಕರ ದುರಂತಕ್ಕೆ ಕ್ವಾರಿ ಮಾಲೀಕರು ನಿಯಮ ಉಲ್ಲಂಘನೆ ಮಾಡಿದ್ದೇ ಕಾರಣ ಎಂದು ಸ್ಥಳೀಯರು ದೂರಿದ್ದಾರೆ.

ದುರಂತ ಸಂಭವಿಸಿದ ಸ್ಥಳದಲ್ಲಿ ಅಕ್ಕಪಕ್ಕದಲ್ಲೇ ಎರಡು ಕ್ವಾರಿಗಳಿದ್ದು, ಬಸವೇಶ್ವರ ಸ್ಟೋನ್ ಕ್ರಷರ್ ಮಾಲೀಕ ಆನಂದಸ್ವಾಮಿ ಮತ್ತು ಕಾವೇರಿ ಕ್ರಷರ್ ಮಾಲೀಕ ಉದಯ್ ಎನ್ನುವವರಿಗೆ ಪರವಾನಗಿ ನೀಡಲಾಗಿತ್ತು. ಆದರೆ ಈ ಪರವಾನಗಿ 2025ರಲ್ಲಿ ಅಂತ್ಯವಾಗಿದೆ ಎಂದು ತಿಳಿದು ಬಂದಿದೆ. ಗಣಿಗಾರಿಕೆ ನಡೆಸುವಾಗ ಕಡ್ಡಾಯವಾಗಿ ಬಿಡಬೇಕಾದ 'ಬಫರ್‌ಜೋನ್' ನಿಯಮವನ್ನು ಸಂಪೂರ್ಣವಾಗಿ ಗಾಳಿಗೆ ತೂರಿ, ಬೇಕಾಬಿಟ್ಟಿ ಆಳವಾಗಿ ಅಗೆದಿದ್ದೇ ಈ ಭೀಕರ ಅವಘಡಕ್ಕೆ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಸಕರ ಮಾತು ಕೇಳುತ್ತಿಲ್ಲ: ಕ್ವಾರಿ ದುರಂತದ ಹಿನ್ನೆಲೆ ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಮಾತನಾಡಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ ,ಅರಣ್ಯ ಇಲಾಖೆ ಈ ದುರಂತಕ್ಕೆ ನೇರ ಹೊಣೆಗಾರರಾಗಿದ್ದಾರೆ. ಅಧಿಕಾರಿಗಳ ಮೇಲೆ ಎಫ್ಐಆರ್ ಮಾಡಬೇಕು. ಇಲ್ಲದಿದ್ದರೆ ಪ್ರಕರಣವನ್ನು ಮುಚ್ಚಿ ಹಾಕುತ್ತಾರೆ. ಕೂಡಲೇ ತಪ್ಪಿತಸ್ಥರನ್ನು ಬಂಧಿಸಬೇಕು. ಮಾಲೀಕರು ಯಾವುದೇ ಮುಂಜಾಗ್ರತ ಕ್ರಮಕೈಗೊಳ್ಳದೆ ಇರುವುದೆ ಈ ದುರ್ಘಟನೆ ನಡೆದಿದೆ. ನನ್ನ ಕ್ಷೇತ್ರದಲ್ಲಿರುವ ಈ ಕ್ರಷರ್‌ಗಳು ಅಕ್ರಮವಾಗಿ ನಡೆಯುತ್ತಿವೆ, ರಾಜ್ಯ ಕ್ರಷರ್ ಮಾಲೀಕರ ಸಂಘದ ಅಧ್ಯಕ್ಷರ ಸಂಬಂಧಿಕರ ಕ್ರಷರ್ ಇದಾಗಿದೆ. ಹಣದ ಪವರ್ ಮುಂದೆ ಶಾಸಕನ ಪವರ್ ಕೂಡ ನಡೆಯುತ್ತಿಲ್ಲ ಎಂದು ಸೋಮಶೇಖರ್ ವ್ಯಕ್ತಪಡಿಸಿದರು.

> ಕ್ವಾರಿ ದುರಂತ ಅತ್ಯಂತ ನೋವಿನ ಸಂಗತಿ. ಈ ನೋವಿನ ಸಂದರ್ಭದಲ್ಲಿ ಸರಕಾರ ಮೃತರ ಕುಟುಂಬದೊಂದಿಗೆ ನಿಲ್ಲುತ್ತದೆ. ದುರ್ಘಟನೆ ಬಗ್ಗೆ ತನಿಖೆ ಮಾಡಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು.
> **- ಈಶ್ವರ ಖಂಡ್ರೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

> ಕ್ವಾರಿ ದುರಂತದ ವಿಚಾರ ತಿಳಿದು ತೀವ್ರ ಆಘಾತವಾಯಿತು. ಇದೊಂದು ಅತ್ಯಂತ ದುರದೃಷ್ಟಕರ ಘಟನೆ. ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದ್ದೇನೆ. ಸರಕಾರ ಮೃತ ಕಾರ್ಮಿಕರ ಕುಟುಂಬಗಳ ಜತೆಗಿದ್ದು, ಎಲ್ಲಾ ರೀತಿಯ ನೆರವು ಮತ್ತು ಸಹಕಾರ ನೀಡುತ್ತೇವೆ.
> **- ಕೃಷ್ಣ ಬೈರೇಗೌಡ,** ಬೆಂಗಳೂರು ನಗರ ಅಭಿವೃದ್ಧಿ ಸಚಿವ

> ಕ್ರಷರ್ ಮಾಲೀಕರನ್ನು 24 ಗಂಟೆಯೊಳಗೆ ಬಂಧಿಸಬೇಕು. ಮೃತರ ಕುಟುಂಬಗಳಿಗೆ ಕ್ರಷರ್‌ಗಳಿಂದ ತಲಾ 1 ಕೋಟಿ ರೂಪಾಯಿ ಪರಿಹಾರ ಕೊಡಿಸಬೇಕು. ಇಲ್ಲಿ ಚಿರತೆ ಮೃತಪಟ್ಟಾಗಲೇ ಗಣಿಗಾರಿಕೆ ನಿಲ್ಲಿಸುವಂತೆ ಅಧಿಕಾರಿಗಳನ್ನು ಒತ್ತಾಯಿಸಿದ್ದೆ. ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ.
> **-ಎಸ್.ಟಿ.ಸೋಮಶೇಖರ್** ಯಶವಂತಪುರ ಶಾಸಕ

> ಕ್ರಷರ್ ಮಾಲೀಕರ ನಿರ್ಲಕ್ಷ್ಯದಿಂದಲೇ ಈ ದುರಂತ ನಡೆದಿದೆ. ಮೇಲ್ನೋಟಕ್ಕೆ ನಿಯಮ ಉಲ್ಲಂಘನೆ ಆಗಿರುವುದು ಕಂಡು ಬಂದಿದ್ದು. ಎರಡೂ ಕ್ರಷರ್ ಪರವಾನಗಿ ರದ್ದು ಮಾಡುತ್ತೇವೆ.
> **-ಕೃಷ್ಣವೇಣಿ** ಉಪನಿರ್ದೇಶಕಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ನಿರ್ದಾಕ್ಷಿಣ್ಯ ಕ್ರಮ: ಸಿಎಂ ಡಿ.ಕೆ.ಶಿವಕುಮಾರ್

■ **ವಿಕ ಸುದ್ದಿಲೋಕ** ಬೆಂಗಳೂರು

''ಮಾದಪಟ್ಟಣದ ಕಲ್ಲು ಕ್ವಾರಿ ದುರಂತ ಸಂಬಂಧ ನಿಯಮ ಉಲ್ಲಂಘಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಚೌಕಟ್ಟಿನಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇವೆ,'' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಗಾಯಾಳುಗಳ ಆರೋಗ್ಯ ವಿಚಾರಿಸಿ ಮಾತನಾಡಿ, ''ದುರಂತ ಸಂಬಂಧ ಅಧಿಕಾರಿಗಳ ವಿರುದ್ಧ ಏನು ಕ್ರಮ ಜರುಗಿಸಲು ಸಾಧ್ಯ? ಗಣಿಗಾರಿಕೆ ಕಾರ್ಯಸೂಚಿ ಬಗ್ಗೆ ಶೀಘ್ರದಲ್ಲೇ ಸಭೆ ಕರೆದು ಮಾತನಾಡುತ್ತೇನೆ. ಈ ಕಾರ್ಯಸೂಚಿ ಅನ್ವಯ ಕ್ವಾರಿಗಳು ಕೆಲಸ ಮಾಡಬೇಕಾಗುತ್ತದೆ,'' ಎಂದರು.

''ಅಧಿಕಾರಿಗಳ ಪ್ರಕಾರ ಗಣಿಗಾರಿಕೆ ಕಾರ್ಯಸೂಚಿ ಮಾಡುತ್ತಿದ್ದೇವೆ. ಭವಿಷ್ಯದಲ್ಲಿ ಎಲ್ಲಾ ಕ್ವಾರಿಗಳಿಗೂ ನಿಯಮ ತರುತ್ತೇವೆ. ಈಗ ದುರ್ಘಟನೆ ನಡೆದಿದೆ. ಮುಂದೆ ಇಂತಹ ಘಟನೆಗಳು ನಡೆಯಬಾರದೆಂದು ಮಾರ್ಗದರ್ಶನ ನೀಡುತ್ತೇವೆ. ಎಲ್ಲಾ ವರದಿ ತರಿಸಿಕೊಳ್ಳುತ್ತೇವೆ. ಏನೇನು ಉಲ್ಲಂಘನೆ ಮಾಡಲಾಗಿದೆ ಎಂದು ಪರಿಶೀಲಿಸುತ್ತೇವೆ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಬೇರೆಯವರಿಗೆ ಹೇಗೆ ಕಾನೂನಿನಡಿ ಕ್ರಮ ತೆಗೆದುಕೊಳ್ಳಲಾಗುವುದೋ ಅದೇ ರೀತಿ ಇಲ್ಲೂ ಮಾಡುತ್ತೇವೆ,'' ಎಂದು ಸ್ಪಷ್ಟಪಡಿಸಿದರು.



ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಗಾಯಾಳುಗಳ ಆರೋಗ್ಯವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಚಾರಿಸಿದರು.

> ರಾಜ್ಯ ಸರಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಯಾರು ಕಾನೂನುಬಾಹಿರವಾಗಿ ಕೆಲಸ ಮಾಡುತ್ತಿದ್ದಾರೋ ಅವರ ಮೇಲೆ ನಿರ್ಬಂಧ ಹೇರಬೇಕು. ಎಲ್ಲಾ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಈ ರೀತಿಯ ದುರ್ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸಬೇಕು. ಮೃತಪಟ್ಟ (ಹೊರರಾಜ್ಯದವರು ಸೇರಿ) ಎಲ್ಲರಿಗೂ ಸರಕಾರ ಪರಿಹಾರ ನೀಡಬೇಕು.
> **- ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

> ಎರಡು ಮೂರು ವರ್ಷದಿಂದ ಅಕ್ರಮ ಕ್ವಾರಿಗಳ ಸಂಖ್ಯೆ ಜಾಸ್ತಿ ಆಗಿದೆ. ಇಡೀ ಸರಕಾರವೇ ನಿಯಮಬಾಹಿರ. ಎಲ್ಲರೂ ಅವರ ಕಡೆಯವರೇ ಮಾಡುತ್ತಾ ಇರೋದಲ್ಲವೇ? ಎಲ್ಲಾ ಕಡೆ ಅಕ್ರಮ ಗಣಿಗಾರಿಕೆ ಎನ್ನುವುದಕ್ಕೆ ಅವರ ಬಳಿ ದಾಖಲೆ ಏನಿದೆ? ಅವರೆಲ್ಲಾ ಒಂದೆರಡು ವರ್ಷದಿಂದ ಮಾಡಿರುವ ಕೆಲಸವೇ? 20-30 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಸರಕಾರಗಳ ಕಾಲದಲ್ಲೂ ಕೆಲಸ ಮಾಡುತ್ತಿದ್ದಾರೆ.
> **- ಆರ್. ಅಶೋಕ್** ವಿಧಾನಸಭೆ ಪ್ರತಿಪಕ್ಷ ನಾಯಕ

ತಾ.ಪಂ, ಗ್ರಾಪಂ ಕಚೇರಿ ಮೇಲೆ ಲೋಕಾ ದಾಳಿ

ಶ್ರೀರಂಗಪಟ್ಟಣ (ಮಂಡ್ಯ): ತಾಲೂಕಿನ ಮಹದೇವಪುರ ಗ್ರಾಮ ಪಂಚಾಯಿತಿ ಹಾಗೂ ಪಟ್ಟಣದ ತಾಲೂಕು ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಪೊಲೀಸರ ಒಂದು ತಂಡ ಮಹದೇವಪುರ ಗ್ರಾ.ಪಂ. ಕಚೇರಿಗೆ ಬೆಳಗ್ಗೆ 11ರಿಂದ ಸಂಜೆ 7ರವರೆಗೂ ಕಡತಗಳನ್ನು ಪರಿಶೀಲಿಸಿತು. ಮತ್ತೊಂದು ತಂಡ ಶ್ರೀರಂಗಪಟ್ಟಣ ತಾಲೂಕು ಕಚೇರಿಯಲ್ಲೂ ಶೋಧ ನಡೆಸಿತು.

''ಮಹದೇವಪುರ ಗ್ರಾ.ಪಂ. ಕಚೇರಿಯಲ್ಲಿ 33 ಅಕ್ರಮ ದಾಖಲಾತಿಗಳು ಲಭ್ಯವಾಗಿವೆ. ಸರಕಾರಿ ಗೋಮಾಳ ಜಮೀನನ್ನು ವ್ಯವಸಾಯ ಉದ್ದೇಶಕ್ಕೆ ನೀಡಿದ್ದ ಅಲ್ಲಿ ಮನೆ ನಿರ್ಮಾಣಕ್ಕೆ ಇ-ಸ್ವತ್ತು ಮಾಡಿರುವುದು ಸೇರಿ, 33 ಪ್ರಕರಣಗಳಲ್ಲಿ ಲೋಪ ಕಂಡು ಬಂದಿದೆ,'' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ತಾಲೂಕಿನ ಮಹದೇವಪುರ ಬಳಿ ಇರುವ ಸರ್ವೆ ನಂ.411ರಲ್ಲಿ 200ಕ್ಕೂ ಹೆಚ್ಚು ಎಕರೆ ಗೋಮಾಳ ಹಾಗೂ ಸರಕಾರಿ ಜಮೀನು ಲಭ್ಯವಿದ್ದು, ಆ ಜಮೀನಿನ ಪೈಕಿ ಕೆಲವು ಮಂದಿ ರೈತರಿಗೆ ಸಾಗುವಳಿ ಚೀಟಿ ವಿತರಣೆ ಮಾಡಲಾಗಿದೆ. 'ಇನ್ನುಳಿದ 30 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ಅದೇ ಜಮೀನಿನಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿರುವವರಿಗೆ ಗ್ರಾ.ಪಂ. ವತಿಯಿಂದ ಇ-ಖಾತೆ ಮಾಡಿಕೊಡಲಾಗಿದೆ ಎಂದು ಉಪ ಲೋಕಾಯುಕ್ತ ಬಿ.ವೀರಪ್ಪ ಅವರಿಗೆ ಸಾರ್ವಜನಿಕರು ದೂರು ನೀಡಿದ್ದರು. ಇದರ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು.

ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾ.ಪಂ. ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರ ತಂಡ ದಾಳಿ ನಡೆಸಿ ಕಡತ ಪರಿಶೀಲನೆ ನಡೆಸಿತು.

ಮರಳು ಅಕ್ರಮ ಅಡ್ಡೆ ಮೇಲೆ ದಾಳಿ

ಕೊಪ್ಪಳ: ಕನಕಗಿರಿ ತಾಲೂಕಿನ ನವಲಿ ಬಳಿಯ ಎರಡು ಅಕ್ರಮ ಮರಳು ಅಡ್ಡೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ಗುರುವಾರ ದಾಳಿ ನಡೆಸಿ, ಅಪಾರ ಪ್ರಮಾಣದ ಮರಳು ಹಾಗೂ ಯಂತ್ರೋಪಕರಣಗಳನ್ನು ವಶಪಡಿಸಿಕೊಂಡಿದೆ.

ಕೊಪ್ಪಳ ಲೋಕಾಯುಕ್ತ ಡಿವೈಎಸ್ಪಿ ಲೋಕೇಶ್ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳೂ ಭಾಗವಹಿಸಿದ್ದರು. ಲೋಕಾಯುಕ್ತಕ್ಕೆ ಸ್ಥಳೀಯರು ಸಲ್ಲಿಸಿದ ದೂರು ಆಧರಿಸಿ, ಜಿಲ್ಲೆಯ ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸುವಂತೆ ಸೂಚನೆ ನೀಡಲಾಗಿತ್ತು. ಅಧಿಕಾರಿಗಳು ಸ್ಥಳಕ್ಕೆ ಆಗಮಿಸುತ್ತಿದ್ದಂತೆ ದಂಧೆಕೋರರು ಪರಾರಿಯಾದರು. ಕಾರ್ಯಾಚರಣೆಯಲ್ಲಿ 20 ಟಿಪ್ಪರ್ ಮರಳು, 4 ಹಿಟಾಚಿ ವಾಹನಗಳು, 1 ಆಯಿಲ್ ಎಂಜಿನ್ ಹಾಗೂ 1 ಲಾರಿಯನ್ನು ವಶಕ್ಕೆ ಪಡೆಯಲಾಗಿದೆ. ಕನಕಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೋಕಾಯುಕ್ತ ಬಲೆಗೆ ಬಿದ್ದ ಸರ್ವೇಯರ್

ಮೈಸೂರು: ಜಮೀನು ಪೋಡಿ ಮತ್ತು ದುರಸ್ತಿ ಮಾಡಿ ಕೊಡಲು ಲಂಚ ಪಡೆಯುತ್ತಿದ್ದ ಸರ್ವೆಯರ್ ನಂಜನಗೂಡು ತಾಲೂಕಿನ ಸರ್ವೇಯರ್ ಜಯಪ್ರಕಾಶ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಲಂಚಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಜಯಪ್ರಕಾಶ್ ಅವರನ್ನು ಬಂಧಿಸಿದ್ದಾರೆ. 9 ಗುಂಟೆ ಜಮೀನು ಪೋಡಿ ಮತ್ತು ದುರಸ್ತಿಗಾಗಿ 1.20 ಲಕ್ಷ ರೂ. ಲಂಚಕ್ಕೆ ಜಯಪ್ರಕಾಶ್ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಜಮೀನು ಮಾಲೀಕ ನಾರಾಯಣ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ರಟ್ಟೀಹಳ್ಳಿ: ಚಿಲ್ಲರೆಗಾಗಿ ಜಗಳ ವ್ಯಾಪಾರಿ ಮೇಲೆ ಹಲ್ಲೆ, ಸಾವು

ರಟ್ಟೀಹಳ್ಳಿ (ಹಾವೇರಿ): ಪಟ್ಟಣದಲ್ಲಿ ಬುಧವಾರ ರಾತ್ರಿ ಚಿಲ್ಲರೆ ಕಾರಣಕ್ಕೆ ನಡೆದ ಜಗಳ ಹಿಂಸಾಚಾರಕ್ಕೆ ತಿರುಗಿ ಬೀದಿಬದಿ ವ್ಯಾಪಾರಿ ಶಿವಾಜಿರಾವ್ ಬೈರೋಜಿ (60) ಎಂಬುವರು ಮೃತಪಟ್ಟಿದ್ದಾರೆ. ನಾಲ್ವರ ಮೇಲೆ ಪ್ರಕರಣ ದಾಖಲಾಗಿದೆ. ವಾಸೀಂ ಮುಲ್ಲಾ, ಸರ್ಫರಾಜ್ ಮತ್ತು ಸಾದಿಕ್‌ರನ್ನು ಪೊಲೀಸರು ಬಂಧಿಸಿದ್ದು, ಶಿರಾಜ್ ಮುಲ್ಲಾ ತಲೆಮರಿಸಿಕೊಂಡಿದ್ದಾನೆ.

ಶಿವಾಜಿರಾವ್ ಮತ್ತು ಅವರ ಪುತ್ರ ಭರತ್ ಅಂಗಡಿ ನಡೆಸುತ್ತಿದ್ದು, ಬುಧವಾರ ಸಂಜೆ ವಾಸೀಂ ಮುಲ್ಲಾ ಎಂಬಾತ ಅಂಗಡಿಗೆ ಬಂದು ಮೊಟ್ಟೆ ಖರೀದಿಸಿ 500 ರೂ. ನೀಡಿದ್ದಾಗಿ ಹೇಳಿ ಬಾಕಿ ಚಿಲ್ಲರೆ ಕೇಳಿದ. ಆದರೆ 100 ರೂ. ಕೊಟ್ಟಿದ್ದಾಗಿ ಅಂಗಡಿ ಮಾಲೀಕರು ಹೇಳಿದ್ದರಿಂದ ಮಾತಿನ ಚಕಮಕಿ ನಡೆಯಿತು.

ಈ ವೇಳೆ ಆರೋಪಿ ವಾಸೀಂ, ಭರತ್ ಮೇಲೆ ಹಲ್ಲೆ ನಡೆಸಿದ. ಬಿಡಿಸಲು ಬಂದ ಶಿವಾಜಿರಾವ್ ಅವರ ಎದೆಗೆ ಕಲ್ಲಿನಿಂದ ಹೊಡೆದ. ಬಳಿಕ ವಾಸೀಂ ಜತೆ ಸೇರಿಕೊಂಡ ಸರ್ಫರಾಜ್, ಸಾದಿಕ್ ಹಾಗೂ ಶಿರಾಜ್ ಮುಲ್ಲಾ ಕೂಡ ಶಿವಾಜಿರಾವ್ ಅವರನ್ನು ನೆಲಕ್ಕೆ ಕೆಡವಿ ಹಲ್ಲೆ ನಡೆಸಿದರು ಎಂದು ಆರೋಪಿಸಲಾಗಿದೆ.

ಗಾಯಗೊಂಡ ಶಿವಾಜಿರಾವ್ ಅವರನ್ನು ರಟ್ಟಿಹಳ್ಳಿ ಸರಕಾರಿ ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿ ಅವರು ಮೃತಪಟ್ಟಿದ್ದರು. ಈ ಸಂಬಂಧ ಭರತ್ ಬೈರೋಜಿ ನೀಡಿದ ದೂರಿನ ಮೇರೆಗೆ ರಟ್ಟಿಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೈಋತ್ಯ ರೈಲ್ವೆಗೆ ₹733 ಕೋಟಿ ಆದಾಯ

ಹುಬ್ಬಳ್ಳಿ: ನೈಋತ್ಯ ರೈಲ್ವೆಯು ಕಳೆದ ಜೂನ್‌ನಲ್ಲಿ 4.18 ದಶಲಕ್ಷ ಟನ್ ಸರಕು ಸಾಗಣೆ ಮೂಲಕ ಹೆಚ್ಚು ಆದಾಯಗಳಿಸಿದೆ. ಕಳೆದ ವರ್ಷದ ಜೂನ್ ಅವಧಿಗಿಂತ ಶೇ. 5.2ರಷ್ಟು ಹೆಚ್ಚು ಸರಕನ್ನು ಸಾಗಿಸಲಾಗಿದೆ.

ಕಳೆದ ಜೂನ್‌ನಲ್ಲಿ ಪ್ರತಿದಿನ ಸರಾಸರಿ 2,221 ವ್ಯಾಗನ್‌ಗಳನ್ನು ಲೋಡ್ ಮಾಡಲಾಗಿದೆ. ಕಳೆದ ವರ್ಷ ಇದೇ ಮಾಹೆಯಲ್ಲಿ ಲೋಡಿಂಗ್ ಪ್ರಮಾಣ 2,143 ವ್ಯಾಗನ್ ಇತ್ತು. ಪ್ರಮುಖವಾಗಿ ಕಬ್ಬಿಣದ ಅದಿರು, ಉಕ್ಕು, ಖನಿಜ ತೈಲ, ಸಿಮೆಂಟ್, ಕಂಟೇನರ್ ಸಾಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ''ಕಳೆದ ತಿಂಗಳಲ್ಲಿ ಪ್ರಯಾಣಿಕರ ಸಂಚಾರದಿಂದ 290.43 ಕೋಟಿ ರೂ. ಬಂದಿದ್ದು, ಶೇ. 15.08ರಷ್ಟು ಬೆಳವಣಿಗೆ ದಾಖಲಿಸಿದೆ. ಪ್ರಯಾಣಿಕರ ಸಂಖ್ಯೆಯಲ್ಲೂ ಶೇ.4.36 ರಷ್ಟು ಪ್ರಗತಿಯಾಗಿದ್ದು, ಒಟ್ಟು 14.85 ದಶಲಕ್ಷ ಜನರು ಸಂಚರಿಸಿದ್ದಾರೆ. ಸರಕು ಸಾಗಣೆಯಿಂದ 402.61 ಕೋಟಿ ರೂ., ಪಾರ್ಸೆಲ್‌ನಿಂದ 14.30 ಕೋಟಿ ರೂ., ಕೋಚಿಂಗ್‌ನಿಂದ 26.66 ಕೋಟಿ ರೂ., ಇತರ ಮೂಲಗಳಿಂದ 13.53 ಕೋಟಿ ಹಾಗೂ ಪ್ರಯಾಣಿಕರಿಂದ 4.96 ಕೋಟಿ ರೂ. ಆದಾಯ ಬಂದಿದೆ. ಒಟ್ಟಾರೆ ಆದಾಯ ಒಟ್ಟು 733.23 ಕೋಟಿ ರೂ. ಆಗಿದೆ. ಕಳೆದ ವರ್ಷದ ಜೂನ್ ತಿಂಗಳ ಆದಾಯಕ್ಕೆ ಹೋಲಿಸಿದರೆ 11.22 ಕೋಟಿ ರೂ. ಅಧಿಕ ಆದಾಯ ಸಂಗ್ರಹವಾಗಿದೆ,'' ಎಂದು ಹೇಳಿದ್ದಾರೆ.

ವಿಶೇಷ ರೈಲುಗಳ ಸೇವೆ ವಿಸ್ತರಣೆ

ಹುಬ್ಬಳ್ಳಿ: ಕೆಲವು ಸಾಪ್ತಾಹಿಕ ವಿಶೇಷ ರೈಲುಗಳ ಸೇವೆಯನ್ನು ಆಗಸ್ಟ್ 31ರ ವರೆಗೆ ವಿಸ್ತರಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ. ಹುಬ್ಬಳ್ಳಿ-ಕೊಲ್ಲಂ-ಹುಬ್ಬಳ್ಳಿ (07313/07314) ಮತ್ತು ಎಸ್‌ಎಂವಿಟಿ ಬೆಂಗಳೂರು- ತಿರುವಂತನಂತಪುರಂ (06523/06524) ವಿಶೇಷ ರೈಲುಗಳ ಸೇವೆಯನ್ನು ಹೆಚ್ಚುವರಿ 5 ಟ್ರಿಪ್ ವಿಸ್ತರಿಸಲಾಗಿದೆ.

ಎಸ್‌ಎಂವಿಟಿ ಬೆಂಗಳೂರು- ತಿರುವಂತನಂತಪುರಂ ಸಾಪ್ತಾಹಿಕ (06547/06548) ವಿಶೇಷ ರೈಲು ಸೇವೆಯನ್ನು ಹೆಚ್ಚುವರಿ 4 ಟ್ರಿಪ್ ವಿಸ್ತರಿಸಲಾಗಿದೆ.

ತಿಪ್ಪೇರುದ್ರಸ್ವಾಮಿ ದೇಗುಲಕ್ಕೆ ಮನೆ ದಾನ

ನಾಯಕನಹಟ್ಟಿ (ಚಿತ್ರದುರ್ಗ): ಪಟ್ಟಣದ ತಿಪ್ಪೇರುದ್ರಸ್ವಾಮಿ ದೇವಾಲಯಕ್ಕೆ ಭಕ್ತರೊಬ್ಬರು ತಮ್ಮ ಮನೆಯನ್ನು ದಾನ ನೀಡಿದ್ದಾರೆ.

ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ವಾಸವಾಗಿರುವ ಮೂಲತಃ ನಾಯಕನಹಟ್ಟಿಯ ಆರ್. ನಾಗರಾಜ್, ಪಟ್ಟಣದ ಹೊರಮಠ ಆವರಣದ ಬಳಿಯ ಲೇಔಟ್‌ನಲ್ಲಿ ಸುಮಾರು 20 ವರ್ಷಗಳ ಹಿಂದೆ 30X50 ಅಳತೆಯ ನಿವೇಶನ ಖರೀದಿಸಿ, ಮನೆ ನಿರ್ಮಿಸಿದ್ದರು. ಪ್ರತಿ ವರ್ಷ ಜಾತ್ರೆಯ ಸಂದರ್ಭದಲ್ಲಿ ಆಗಮಿಸುತ್ತಿದ್ದ ಭಕ್ತಾದಿಗಳಿಗೆ ತಮ್ಮ ಮನೆಯಲ್ಲಿಯೇ ದಾಸೋಹ ಒದಗಿಸುತ್ತಿದ್ದರು. ಇತ್ತೀಚಿನ ವರ್ಷಗಳಿಂದ ನಾಗರಾಜ್ ಅವರಿಗೆ ಜಾತ್ರೆಯ ಸಂದರ್ಭದಲ್ಲಿ ದಾಸೋಹ ಸೇವೆ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ತಮ್ಮ ಮನೆಯನ್ನು ದೇವಾಲಯದ ಹೆಸರಿಗೆ ದಾನ ನೀಡಿ, ದಾಖಲೆಗಳನ್ನು ದೇವಾಲಯದ ಇಒ ಎಚ್. ಗಂಗಾಧರಪ್ಪನವರಿಗೆ ಹಸ್ತಾಂತರಿಸಿದರು.



ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ದೇವಾಲಯಕ್ಕೆ ಮನೆಯನ್ನು ದಾನ ನೀಡಿದ ಬೆಂಗಳೂರಿನ ನಿವಾಸಿ ಆರ್.ನಾಗರಾಜ್ ಅವರನ್ನು ಗುರುವಾರ ಅಭಿನಂದಿಸಲಾಯಿತು.

ತ್ವರಿತ ಒಳಮೀಸಲು ಪ್ರಮಾಣಪತ್ರಕ್ಕೆ ಕೆಇಎ ಮನವಿ

ಬೆಂಗಳೂರು: ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ನರ್ಸಿಂಗ್ ಸೇರಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಗೆ ಪರಿಶಿಷ್ಟ ಜಾತಿಯ ಒಳಮೀಸಲಿನಡಿ ಸೀಟು ಕೋರಿರುವ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಒಳಮೀಸಲು ಪ್ರಮಾಣಪತ್ರಗಳನ್ನು ತ್ವರಿತವಾಗಿ ನೀಡುವಂತೆ ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಅವರಿಗೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರ ಬರೆದಿದ್ದಾರೆ.

ಒಳಮೀಸಲಿನಡಿ ಸೀಟು ಕೋರಿ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಸಲ್ಲಿಸದೇ ಇರುವ ಅಭ್ಯರ್ಥಿಗಳಿಗೆ ಒಳಮೀಸಲು ಮುದ್ರಿತವಾಗಿರುವ ಜಾತಿ ಪ್ರಮಾಣಪತ್ರಗಳ ಆರ್‌ಡಿ ಸಂಖ್ಯೆಯೊಂದಿಗೆ ಜು. 8ರೊಳಗೆ ಆನ್‌ಲೈನ್ ಮೂಲಕ ನಮೂದಿಸಿ, ವೆರಿಫಿಕೇಶನ್ ಸ್ಲಿಪ್ ಡೌನ್ಲೋಡ್ ಮಾಡಿ ನಂತರ ಇಚ್ಛೆ/ ಆಯ್ಕೆ ದಾಖಲಿಸಲು ಸೂಚಿಸಲಾಗಿದೆ. ಆದರೆ, ಬಹಳಷ್ಟು ಅಭ್ಯರ್ಥಿಗಳು ಪ್ರಮಾಣಪತ್ರ ಪಡೆಯಲು ವಿಳಂಬವಾಗುತ್ತಿರುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಗಮನಹರಿಸಿದರೆ ಮೊದಲನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗುತ್ತದೆ ಎಂದು ಅವರು ಮನವಿ ಮಾಡಿದ್ದಾರೆ. ಒಳಮೀಸಲು ಪ್ರಕಾರ ಪ್ರಮಾಣಪತ್ರ ನೀಡುವ ತಹಸೀಲ್ದಾರ್ ಇಂತಹ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕು ಎಂದು ಅವರು ಕೋರಿದ್ದಾರೆ.

ರೌಡಿ ಶೀಟರ್ ಕೋರ್ಟ್‌ಗೆ ಶರಣು

ಮೈಸೂರು: ಕೊಲೆ ಯತ್ನ ಪ್ರಕರಣದ ಆರೋಪಿಯಾಗಿದ್ದ ಬೆಂಗಳೂರಿನ ರೌಡಿ ಶೀಟರ್ ಪರಮೇಶ್ ಅಲಿಯಾಸ್ ಕೆಂಬತ್ತಳ್ಳಿ ಪರಮೇಶ್ ಮೈಸೂರಿನ ನ್ಯಾಯಾಲಯಕ್ಕೆ ಶರಣಾಗಿದ್ದಾನೆ. ಗುರುವಾರ ಬೆಳಗ್ಗೆ ತಮ್ಮ ವಕೀಲರೊಂದಿಗೆ ಮೈಸೂರಿನ ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಬಂದು ಪರಮೇಶ್ ಶರಣಾಗಿದ್ದು, ನ್ಯಾಯಾಧೀಶರು ಆತನನ್ನು ವಿಚಾರಣೆಗೆ ಪೊಲೀಸರ ವಶಕ್ಕೆ ನೀಡಿದ್ದಾರೆ. ಸರಸ್ವತಿಪುರಂ ಠಾಣೆ ವ್ಯಾಪ್ತಿಯಲ್ಲಿ ನಡೆದ ಕೊಲೆ ಯತ್ನ ಪ್ರಕರಣದಲ್ಲಿ ಪರಮೇಶ್ ವಿರುದ್ಧ ವಾರಂಟ್ ಜಾರಿಯಾಗಿತ್ತು. ಹಾಸನದ ನ್ಯಾಯಾಲಯದ ಮುಂಭಾಗ ನಡೆದ ಹಾಸನಹಳ್ಳಿ ಮಂಜೇಶ್ ಕೊಲೆ ಪ್ರಕರಣದಲ್ಲಿ ಪರಮೇಶ್ ವಿರುದ್ಧ ಪ್ರಕರಣ ದಾಖಲಾಗಿತ್ತು.

इंडियन बैंक Indian Bank
आपका अपना बैंक, हर कदम आपके साथ
YOUR OWN BANK, ALWAYS WITH YOU

ವಲಯ ಕಚೇರಿ-ಬೆಂಗಳೂರು
4ನೇ ಮಹಡಿ, ಪೂರ್ವ ವಿಂಗ್ ರಹೇಜ ಟವರ್ಸ್, ಎಂ. ಜಿ. ರಸ್ತೆ, ಬೆಂಗಳೂರು-560001

ಚಿನ್ನಾಭರಣ ಮೌಲ್ಯಮಾಪಕರ ಎಂಪ್ಯಾನಲ್‌ಮೆಂಟ್
ಇಂಡಿಯನ್ ಬ್ಯಾಂಕ್‌ನ ಬೆಂಗಳೂರು ನಗರ ಜಿಲ್ಲೆಯ ಶಾಖೆಗಳಿಗೆ ಚಿನ್ನಾಭರಣ ಮೌಲ್ಯಮಾಪಕರು ಬೇಕಾಗಿದ್ದಾರೆ.
ಅರ್ಹತೆ: 10ನೇ ತರಗತಿ ಉತ್ತೀರ್ಣ, ಚಿನ್ನಾಭರಣ ಮೌಲ್ಯಮಾಪನ ತರಬೇತಿ ಮುಕ್ತಾಯಗೊಳಿಸಿದವರಿಗೆ ಆದ್ಯತೆ. ವಯೋಮಾನ 30 ರಿಂದ 60 ವರ್ಷ, ಹಿಂದಿನ ಅನುಭವ 10 ವರ್ಷಗಳು, ಭಾವಚಿತ್ರ, ಶೈಕ್ಷಣಿಕ ಪ್ರಮಾಣಪತ್ರ, ಪೊಲೀಸ್ ಪರಿಶೀಲನಾ ವರದಿ, ತರಬೇತಿ ಪ್ರಮಾಣಪತ್ರದ ಪ್ರತಿ, ಆಧಾರ, ಪ್ಯಾನ್, ಇಬ್ಬರು ಗೌರವಾನ್ವಿತ ವ್ಯಕ್ತಿಗಳ ಶಿಫಾರಸುಗಳನ್ನು ಲಗತ್ತಿಸಿರಬೇಕು.
ವೇತನ ಕಮಿಷನ್ ಆಧಾರದ ಮೇಲಿರುತ್ತದೆ. ಅರ್ಜಿಗಳನ್ನು ಇಂಡಿಯನ್ ಬ್ಯಾಂಕ್ ವಲಯ ಕಚೇರಿ, ಬೆಂಗಳೂರು ಅಥವಾ ಬೆಂಗಳೂರಿನ ನಮ್ಮ ಜಿಲ್ಲಾ ಶಾಖೆಗಳಿಗೆ ಕಳುಹಿಸಬಹುದು. ಅರ್ಹತೆ ಮತ್ತು ಅಗತ್ಯಗಳ ಆಧಾರದ ಮೇಲೆ ಪರಿಗಣಿಸಲಾಗುವುದು. ಸ್ಥಳೀಯ ಜಿಲ್ಲಾ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.
ಸಲ್ಲಿಕೆಗೆ ಕೊನೆಯ ದಿನಾಂಕ: 18.07.2026
ಸಂಪರ್ಕ ಸಂಖ್ಯೆ : 9566411465 — ವಲಯ ವ್ಯವಸ್ಥಾಪಕರು
ಷರತ್ತು ಮತ್ತು ನಿಯಮಗಳು ಅನ್ವಯ — ಇಂಡಿಯನ್ ಬ್ಯಾಂಕ್, ಬೆಂಗಳೂರು ವಲಯ

WENDT ವೆಂಡ್ಟ್ (ಇಂಡಿಯಾ) ಲಿಮಿಟೆಡ್
CIN: L85110KA1980PLC003913
ನೋಂದಾಯಿತ ಕಚೇರಿ: ಫ್ಲಾಟ್ ನಂ.105, 1ನೇ ಮಹಡಿ, ಕಾವೇರಿ ಬ್ಲಾಕ್, ನ್ಯಾಶನಲ್ ಗೇಮ್ಸ್ ಹೌಸಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು -560047, ಟೆಲಿಫೋನ್: +91-4344-405500
ಇ-ಮೇಲ್: investorservices@wendtindia.com, ವೆಬ್‌ಸೈಟ್:: www.wendtindia.com

ನೋಟಿಸ್

ಕಂಪನಿಗಳ ಕಾಯಿದೆ 2013ರ ಪ್ರಾವಧಾನಗಳ ಅನುಸಾರವಾಗಿ ಶುಕ್ರವಾರ, 24ನೇ ಜುಲೈ, 2026ರ ಮಧ್ಯಾಹ್ನ 3.00 ಗಂಟೆಗೆ ವೆಂಡ್ಟ್ (ಇಂಡಿಯಾ) ಲಿಮಿಟೆಡ್‌ನ ಸದಸ್ಯರ 44ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ('ಎಜಿಎಂ') ವಿಡಿಯೋ ಕಾನ್ಫರೆನ್ಸ್ ('ವಿಸಿ') ಅಥವಾ ಇತರೆ ಆಡಿಯೊ ವಿಸುವಲ್ ಮೀನ್ಸ್ ('ಒಎವಿಎಂ') ಮೂಲಕ ನಡೆಸುವ ಬಗ್ಗೆ ನೋಟಿಸ್ ನೀಡಲಾಗಿದೆ. ಈ ಸಭೆಯು ಕಂಪನಿಗಳ ಕಾಯ್ದೆ 2013 ಮತ್ತು ಅದರಡಿಯ ನಿಯಮಗಳು, ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಾವಳಿಗಳು, 2015 (ಕಾಲಕಾಲಕ್ಕೆ ತಿದ್ದುಪಡಿಯಾದಂತೆ) ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮತ್ತು ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') ಹೊರಡಿಸಿದ ಸುತ್ತೋಲೆಗಳ ಅನುಸಾರ ನಡೆಯಲಿದ್ದು, 2026ರ ಏಪ್ರಿಲ್ 24ರಂದು ನಡೆದ ಎಜಿಎಂನಲ್ಲಿ (ನೋಟಿಸ್) ಉಲ್ಲೇಖಿಸಲಾದ ಸಾಮಾನ್ಯ ಮತ್ತು ವಿಶೇಷ ಕಾರ್ಯಕಲಾಪಗಳನ್ನು ಇದರಲ್ಲಿ ನಿರ್ವಹಿಸಲಾಗಿದೆ. ಎಜಿಎಂ ನೋಟಿಸ್ ಮತ್ತು ವಾರ್ಷಿಕ ವರದಿಯು (ಒಟ್ಟಾರೆಯಾಗಿ 'ಎಜಿಎಂ ಡಾಕ್ಯುಮೆಂಟ್' ಎಂದು ಕರೆಯಲಾಗುತ್ತದೆ) 31ನೇ ಮಾರ್ಚ್ 2026ಕ್ಕೆ ಕೊನೆಗೊಂಡ ವರ್ಷಕ್ಕೆ ಲೆಕ್ಕಪರಿಶೋಧಿತ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ಒಳಗೊಂಡಿರುವ ನಿರ್ದೇಶಕರ ವರದಿ ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಅವರ ಇ-ಮೇಲ್ ವಿಳಾಸಗಳು ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ('ಡಿಪಿಗಳು') ಅಥವಾ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ('ಆರ್‌ಟಿಎ') ಅಂದರೆ, ಮೆ. ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನೊಂದಿಗೆ ನೋಂದಾಯಿಸಲ್ಪಟ್ಟ ಸದಸ್ಯರಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಕಳುಹಿಸಲಾಗಿದೆ. ಮೇಲೆ ತಿಳಿಸಲಾದ ದಾಖಲೆಗಳು ಕಂಪನಿಯ ವೆಬ್‌ಸೈಟ್ www.wendtindia.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ, ಬಿಎಸ್ಇ ಲಿಮಿಟೆಡ್ www.bseindia.com, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ಹಾಗೂ ಇ-ವೋಟಿಂಗ್ ಸೇವಾ ಪೂರೈಕೆದಾರರಾದ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ('NSDL') ವೆಬ್‌ಸೈಟ್ https://www.evoting.nsdl.com/eVotingWeb/SearchDownloadsAction.doನಲ್ಲೂ ಲಭ್ಯವಿವೆ. ಅಲ್ಲದೆ, 2025-26ನೇ ಆರ್ಥಿಕ ವರ್ಷದ ಎಜಿಎಂ ದಾಖಲೆಗಳನ್ನು ವೀಕ್ಷಿಸಲು ವೆಬ್‌ಲಿಂಕ್ ಒಳಗೊಂಡಿರುವ ಪತ್ರವನ್ನು ತಮ್ಮ ಇಮೇಲ್ ವಿಳಾಸ ನೋಂದಾಯಿಸದ ಷೇರುದಾರರಿಗೆ ಕಳುಹಿಸಲಾಗುತ್ತಿದೆ. ಆಗಿದ್ದರೂ, ಲಿಸ್ಟಿಂಗ್ ನಿಯಮಾವಳಿಗಳ ನಿಯಮ 36ರ ಅನುಸಾರ ಎಜಿಎಂ ದಾಖಲೆಗಳ ಮುದ್ರಿತ ಪ್ರತಿಗಳನ್ನು ನಿರ್ದಿಷ್ಟವಾಗಿ ಕೋರುವ ಸದಸ್ಯರಿಗೆ ಮಾತ್ರ ಕಳುಹಿಸಲಾಗುವುದು. ಈ ದಾಖಲೆಗಳ ಮುದ್ರಿತ ಪ್ರತಿಗಳನ್ನು ಪಡೆಯಲು, ಸದಸ್ಯರು ತಮ್ಮ ಫೋಲಿಯೋ/ಡಿಪಿಐಡಿ/ಕ್ಲೈಂಟ್ ಐಡಿನ ವಿವರಗಳನ್ನು ನಮೂದಿಸಿ einward.ris@kfintech.com ಅಥವಾ investorservices@wendtindia.com ಇ-ಮೇಲ್ ಮೂಲಕ ಮನವಿ ಸಲ್ಲಿಸುವಂತೆ ಕೋರಲಾಗಿದೆ.

44ನೇ ಎಜಿಎಂನಲ್ಲಿ VC/OAVM ಮೂಲಕ ಎಲೆಕ್ಟ್ರಾನಿಕ್ ಮೀನ್ಸ್ ಮೂಲಕ ಮತದಾನ ಸೇರಿದಂತೆ ತಮ್ಮ ಪಾನ್, ಕೆವೈಸಿ (ಇ-ಮೇಲ್ ವಿಳಾಸಗಳು, ಬ್ಯಾಂಕ್ ಖಾತೆ ವಿವರಗಳು ಇತ್ಯಾದಿ ಸೇರಿದಂತೆ) ನೋಂದಣಿ / ನವೀಕರಣ, ನಾಮನಿರ್ದೇಶನ ವಿವರಗಳು ಮತ್ತು ಭಾಗವಹಿಸುವ ವಿಧಾನದ ಕುರಿತು ಸದಸ್ಯರಿಗೆ ವಿವರವಾದ ಸೂಚನೆಗಳನ್ನು ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲೂ ಲಭ್ಯವಿದೆ.

ಷೇರುದಾರರಿಗೆ ಅಂತಿಮ ಲಾಭಾಂಶದ ಅರ್ಹತೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ನಿಗದಿಪಡಿಸಲಾದ ದಾಖಲಾತಿ ದಿನಾಂಕವು ಶುಕ್ರವಾರ, 17ನೇ ಜುಲೈ, 2026 ಆಗಿದೆ. 44ನೇ ಎಜಿಎಂನಲ್ಲಿ ಷೇರುದಾರರಿಂದ ಅನುಮೋದನೆ ಪಡೆದ ನಂತರ, ಅಂತಿಮ ಲಾಭಾಂಶವನ್ನು ಗುರುವಾರ, 13ನೇ ಆಗಸ್ಟ್ 2026ರಂದು ಪಾವತಿಸಲಾಗುವುದು.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 108ರ ಪ್ರವಧಾನಗಳ ಅನುಸಾರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ನಿಯಮ 20ನ್ನು ಓದಿದಂತೆ (ಕಾಲಕಾಲಕ್ಕೆ ತಿದ್ದುಪಡಿಯಾದಂತೆ), ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಾವಳಿಗಳು 2015ರ ನಿಯಮ 44ರ ನಿಬಂಧನೆಗಳು ಮತ್ತು ಈ ಕುರಿತು ಎಂಸಿಎ ಹೊರಡಿಸಿದ ಸುತ್ತೋಲೆಗಳ ಅನ್ವಯ, ನೋಟಿಸ್‌ನಲ್ಲಿ ತಿಳಿಸಲಾದ ಎಲ್ಲಾ ನಿರ್ಣಯಗಳ ಮೇಲೆ NSDL ಒದಗಿಸುವ ಇ-ವೋಟಿಂಗ್ ಸೇವೆಗಳ ಮೂಲಕ ವಿದ್ಯುನ್ಮಾನವಾಗಿ ಮತ ಚಲಾಯಿಸುವ ಸೌಲಭ್ಯವನ್ನು ಸದಸ್ಯರಿಗೆ ಒದಗಿಸಲಾಗುತ್ತಿದೆ. 17ನೇ ಜುಲೈ 2026ಕ್ಕೆ ಸದಸ್ಯರು ಹೊಂದಿರುವ ಷೇರುಗಳಿಗೆ ಅನುಗುಣವಾಗಿ ಮತದಾನದ ಹಕ್ಕುಗಳು ಇರುತ್ತವೆ. ಎಜಿಎಂ ನೋಟಿಸ್ ರವಾನಿಸಿದ ನಂತರ ಕಂಪನಿಯ ಸದಸ್ಯರಾದ ಮತ್ತು ನಿಗದಿತ ದಿನಾಂಕ ಅಂದರೆ, 17ನೇ ಜುಲೈ 2026 ರಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು, NSDL ಅನ್ನು 022 – 4886 7000 ಸಂಖ್ಯೆಯನ್ನು ಸಂಪರ್ಕಿಸುವ ಮೂಲಕ ಅಥವಾ evoting@nsdl.com ಅಥವಾ investorservices@wendtindia.com ಗೆ ಇ-ಮೇಲ್ ಮನವಿ ಸಲ್ಲಿಸುವ ಮೂಲಕ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಕಟ್ ಆಫ್ ದಿನಾಂಕಕ್ಕೆ ಷೇರುಗಳನ್ನು ಹೊಂದಿರುವ ಸದಸ್ಯರು, ಎಜಿಎಂ ದಿನಾಂಕದಂದು ಮಾತ್ರ ರಿಮೋಟ್ ಇ-ವೋಟಿಂಗ್ ಅಥವಾ ವೋಟಿಂಗ್ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ ಎಂಬುದನ್ನು ಗಮನಿಸುವುದು.

ರಿಮೋಟ್ ಇ-ವೋಟಿಂಗ್ ಅವಧಿಯು ಮಂಗಳವಾರ, 21ನೇ ಜುಲೈ 2026ರಂದು ಬೆಳಿಗ್ಗೆ 09.00 ಗಂಟೆಗೆ (IST) ಆರಂಭವಾಗುತ್ತದೆ ಮತ್ತು ಗುರುವಾರ, 23ನೇ ಜುಲೈ 2026ರಂದು ಸಂಜೆ 05.00 ಗಂಟೆಗೆ (IST) ಕೊನೆಗೊಳ್ಳುತ್ತದೆ. ಈ ಅವಧಿಯಲ್ಲಿ ನಿರ್ದಿಷ್ಟ ದಿನಾಂಕ ಅಂದರೆ, 17ನೇ ಜುಲೈ 2026ರಂದು ಭೌತಿಕ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ಎಜಿಎಂ ನೋಟಿಸ್‌ನಲ್ಲಿ ತಿಳಿಸಲಾದ ವಿಧಾನದಂತೆ ವಿದ್ಯುನ್ಮಾನವಾಗಿ ತಮ್ಮ ಮತ ಚಲಾಯಿಸಬಹುದು. ಆನಂತರದ ಮತದಾನಕ್ಕಾಗಿ ರಿಮೋಟ್ ಇ-ವೋಟಿಂಗ್ ವಿಧಾನವನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ನಿರ್ಣಯದ ಮೇಲೆ ಒಮ್ಮೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿದ ನಂತರವೂ, ಸದಸ್ಯರು ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರೆ ಆಡಿಯೋ ವಿಸುವಲ್ ಮಾಧ್ಯಮಗಳ ಮೂಲಕ ಎಜಿಎಂನಲ್ಲಿ ಭಾಗವಹಿಸಬಹುದು. ಆದರೆ ಎಜಿಎಂ ಸಮಯದಲ್ಲಿ 'ಇನ್ಸ್ಟಾಪೋಲ್' ಮೂಲಕ ಮತ್ತೆ ಮತ ಚಲಾಯಿಸಲು ಅವರಿಗೆ ಅವಕಾಶವಿರುವುದಿಲ್ಲ. ರಿಮೋಟ್ ಇ-ವೋಟಿಂಗ್ ಆಯ್ಕೆ ಮಾಡಿಕೊಳ್ಳದ ಸದಸ್ಯರಿಗೆ ಎಜಿಎಂ ಸಮಯದಲ್ಲಿ ಇನ್ಸ್ಟಾಪೋಲ್ ಮೂಲಕ ಮತ ಚಲಾಯಿಸುವ ಸೌಲಭ್ಯ ನೀಡಲಾಗುವುದು. ಒಬ್ಬ ಸದಸ್ಯ, ಕೇವಲ ಒಂದು ಮತದಾನದ ವಿಧಾನ ಅಂದರೆ, ಎಜಿಎಂ ಸಮಯದಲ್ಲಿ ರಿಮೋಟ್ ಇ-ವೋಟಿಂಗ್ ಅಥವಾ ಇ-ವೋಟಿಂಗ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು.

ಇ-ವೋಟಿಂಗ್‌ಗೆ ಸಂಬಂಧಿಸಿದ ಪ್ರಶ್ನೆಗಳು ಅಥವಾ ದೂರುಗಳಿದ್ದಲ್ಲಿ, ಸದಸ್ಯರು ಎನ್‌ಎಸ್‌ಡಿಎಲ್‌ನ ಹಿರಿಯ ವ್ಯವಸ್ಥಾಪಕಿ ಶ್ರೀಮತಿ ಪಲ್ಲವಿ ಮ್ಹಾತ್ರೆ ಅವರನ್ನು ದೂರವಾಣಿ: 022–4886 7000; ಇ-ಮೇಲ್: evoting@nsdl.com ಮೂಲಕ ಸಂಪರ್ಕಿಸಬಹುದು.

ಮಂಡಳಿಯ ಆದೇಶದ ಮೇರೆಗೆ
ವೆಂಡ್ಟ್ (ಇಂಡಿಯಾ) ಲಿಮಿಟೆಡ್ ಪರವಾಗಿ
ಸಹಿ/-
ಅರ್ಜುನ್ ರಾಜ್ ಪಿ.
ಕಂಪನಿ ಕಾರ್ಯದರ್ಶಿ

ದಿನಾಂಕ: 2ನೇ ಜುಲೈ 2026
ಸ್ಥಳ: ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು – 560027.

ಸಂಖ್ಯೆ: ಕರಾಸಾ/ಕಾನಿಅ/ಬೆಂ/ಕಿಅ/223/2026-27 — ದಿನಾಂಕ: 02-07-2026

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: 02

ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಇ-ಆಡಳಿತ ರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದಲ್ಲಿ ಅವಶ್ಯವಿರುವ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುವ ಯೋಜನೆ (ಹಂತ-03) – (ಕರೆ-02)"	2,03,38,800.00	3,05,100.00

ಕಾಲಾವಧಿ (ಮಳೆಗಾಲವನ್ನು ಸೇರಿ) : 04 ತಿಂಗಳು
1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 29-07-2026. 2) ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://www.kppp.karnataka.gov.in ಗೆ ಲಾಗ್‌ಆನ್ ಮಾಡಿ ದಿನಾಂಕ: 08-07-2026 ರ ನಂತರ ಪಡೆದುಕೊಳ್ಳಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ. ನಿಗಮ, ಹಳೆ ಸಿಟಿಐ ಕಟ್ಟಡ, ಶಾಂತಿನಗರ, ಬೆಂಗಳೂರು ನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಾ.ಪ್ರ/1456/ಅಡ್ವರ್ಟೋ/2026-27 ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು.

NOTICE BY HINDUSTAN PETROLEUM CORPORATION LIMITED

In the matter of reconstitution of retail outlet dealership of M/s ANDHRA AUTO AGENCY, at D. No. 4-5-16, N.P road, Nidadavole, East Godavari – 534301

WHEREAS, (i) Shri. Velagala Subbi Reddy, (ii) Shri. Velagala Naga Pratap Reddy, (iii) Shri. Velagala Jayachandra Reddy and (iv) Shri. Velagala Tata Reddy had entered into a Petrol/ Diesel Dealership Agreement dated 12.12.2007 with M/s. Hindustan Petroleum Corporation Limited (HPCL) and were carrying on the business of petroleum products in the name and style of M/s ANDHRA AUTO AGENCY situated at D. No. 4-5-16, N.P Road, Nidadavole, East Godavari – 534301.

WHEREAS, HPCL has been informed that one among the four partners i.e., Shri. Velagala Subbi Reddy died on 03-09-2011 and pursuant to his death, the above-mentioned remaining partners have submitted a reconstitution application to HPCL seeking permission to reconstitute the retail outlet dealership of M/s ANDHRA AUTO AGENCY with Smt. Undavalli Sri Lata as its 100% sole proprietor.

As per the applicable reconstitution guidelines of HPCL, this public notice is being issued to the legal heirs of Shri. Velagala Subbi Reddy i.e., his wife – Smt. Velagala Suseelamani and his daughters – (i) Smt. Padala Padmavathi, (ii) Smt. Medapati Arunabhavani & (iii) Smt. Konala Sujatha, that in case, either of you have any response/ objection to the subject application for reconstitution of M/s. ANDHRA AUTO AGENCY, the same shall be communicated to the undersigned, within 30 days from the date of publication of this notice with evidences supporting the objections, if any, failing which it is hereby informed that no objections/ responses shall be entertained thereafter and the reconstitution application shall be considered as per applicable guidelines.

For **Hindustan Petroleum Corporation Limited**
Chief Regional Manager (Retail)
Visakh Retail Regional Office
"Petro Nilayam" opp. AU-In-gate, Chinna Waltair Main Road,
Siripuram, Visakhapatnam - 530003

ಅಜ್ಜಿಯನ್ನೇ ಕೊಂದ ಮೊಮ್ಮಗ ಕಾಲಿಗೆ ಗುಂಡು ಹಾರಿಸಿ ಸೆರೆ

ಶಿವಮೊಗ್ಗ: ನಗರದಲ್ಲಿ ಗುರುವಾರ ಅಜ್ಜಿಯ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಲು ತೆರಳಿದಾಗ ಲಾಂಗ್‌ನಿಂದ ಪೊಲೀಸರ ಮೇಲೆಯೇ ಹಲ್ಲೆಗೆ ಯತ್ನಿಸಿದ. ಆಗ ಪೊಲೀಸರು ಆರೋಪಿ ಕಾಲಿಗೆ ಒಂದು ಸುತ್ತಿನ ಗುಂಡು ಹಾರಿಸಿ ಬಂದಿದ್ದಾರೆ. ಆರೋಪಿ ಕಿಶೋರ್ (26) ಎಡಗಾಲಿಗೆ ಗುಂಡು ಹೊಡೆಯಲಾಗಿದೆ. ನಗರ ಹೊರವಲಯದ ಬಡಾವಣೆಯಲ್ಲಿ ಈತನನ್ನು ಬಂಧಿಸಲು ಹೋದಾಗ ಆತ ಸಿಬ್ಬಂದಿ ಗಣೇಶ್ ಎಂಬುವವರು ಮೇಲೆ ಲಾಂಗ್‌ನಿಂದ ಹಲ್ಲೆಗೆ ಯತ್ನಿಸಿದ. ಶರಣಾಗುವಂತೆ ಎಚ್ಚರಿಕೆ ನೀಡಿದರೂ ಹಲ್ಲೆ ಮುಂದುವರಿಸಿದ್ದರಿಂದ ಠಾಣೆ ಪಿಐ ಸತ್ಯನಾರಾಯಣ್ ಆತನ ಕಾಲಿಗೆ ಗುಂಡು ಹಾರಿಸಿದರು.

ಮಣ್ಣು ಕುಸಿದು ಕಾರ್ಮಿಕ ಸಾವು

ಹುಬ್ಬಳ್ಳಿ: ನಗರದಲ್ಲಿ ಗುರುವಾರ ಒಳಚರಂಡಿ ಕಾಮಗಾರಿ ವೇಳೆ ಮಣ್ಣು ಕುಸಿದು ಕೂಲಿ ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಅಣ್ಣಿಗೇರಿ ತಾಲೂಕಿನ ಹಳ್ಳಿಕೇರಿ ಗ್ರಾಮದ ಮಲ್ಲಪ್ಪ ಜೋಗಿನ (34) ಮೃತ ಕಾರ್ಮಿಕ. ರಾಜಕಾಲುವೆಗೆ ಸಂಪರ್ಕ ನೀಡಲು ಒಳಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿತ್ತು.

ಬೆಳಗಾವಿಯಲ್ಲಿ ಮೂರು ದಿನ ಆರ್‌ಎಸ್‌ಎಸ್ ವಾರ್ಷಿಕ ಸಭೆ

ಬೆಳಗಾವಿ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ವಾರ್ಷಿಕ ಅಖಿಲ ಭಾರತೀಯ ಪ್ರಾಂತ ಪ್ರಚಾರಕರ ಸಭೆ ನಗರದಲ್ಲಿ ನಡೆಯಲಿದ್ದು ಸರಸಂಘಚಾಲಕ ಡಾ. ಮೋಹನ್ ಭಾಗವತ್ ಸೇರಿ ಸಂಘಟನೆಯ ನೂರಾರು ಪ್ರಮುಖರು ಭಾಗಿಯಾಗಲಿದ್ದಾರೆ.

ನಗರದ ಅನಗೋಳದ ಸಂತಮೀರಾ ಶಾಲೆಯಲ್ಲಿ ಜುಲೈ 10ರಿಂದ 12ರವರೆಗೆ ಸಭೆ ನಡೆಯಲಿದೆ. ಜುಲೈ 6ರಿಂದಲೇ ಸಂಘದ ವಿವಿಧ ಹಂತಗಳ ಆಂತರಿಕ ಸಭೆಗಳು ನಡೆಯಲಿದ್ದು, ಡಾ.ಮೋಹನ್ ಭಾಗವತ್ ಜುಲೈ ಅಂದೇ ನಗರಕ್ಕೆ ಆಗಮಿಸಲಿದ್ದಾರೆ. ದೇಶದ 11 ಕ್ಷೇತ್ರಗಳು, 46 ಪ್ರಾಂತಗಳು ಹಾಗೂ ಆರ್‌ಎಸ್‌ಎಸ್ ಒಡನಾಟದ 32 ಸಂಘಟನೆಗಳ ಉನ್ನತ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಶತಾಬ್ದಿ ವರ್ಷದ ಅಂಗವಾಗಿ ಸಂಘದ ಕಾರ್ಯವಿಸ್ತರಣೆ, ಶಾಖೆಗಳ ಬೆಳವಣಿಗೆ, ರಾಷ್ಟ್ರೀಯ ಸಮಕಾಲೀನ ವಿಷಯಗಳು ಹಾಗೂ ಮುಂದಿನ ಕಾರ್ಯತಂತ್ರಗಳ ಕುರಿತು ಈ ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಲಿದೆ.

ಲೈಂಗಿಕ ದೌರ್ಜನ್ಯ ಉಪನ್ಯಾಸಕ ಬಂಧನ

ಬಳ್ಳಾರಿ: ಪಿಯುಸಿ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಬಳ್ಳಾರಿಯ ಖಾಸಗಿ ಕಾಲೇಜಿನ ಉಪನ್ಯಾಸಕನನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆಂಧ್ರಪ್ರದೇಶದ ತಿರುಪತಿ ಮೂಲದ ರವಿಕಿರಣ (42) ಬಂಧಿತ ಆರೋಪಿ. ಈ ಉಪನ್ಯಾಸಕ ಸಸ್ಯಶಾಸ್ತ್ರ ವಿಷಯ ಬೋಧನೆ ಜತೆಗೆ ನೀಟ್ ತರಬೇತಿಯನ್ನೂ ನೀಡುತ್ತಿದ್ದ. 2025ರಲ್ಲಿ ಪರಿಚಯವಾದ ವಿದ್ಯಾರ್ಥಿನಿ ಜತೆಗೆ ಸಲುಗೆಯಿಂದ ಇದ್ದ ಉಪನ್ಯಾಸಕ, ಮದುವೆಯಾಗುವುದಾಗಿ ನಂಬಿಸಿ ಕಳೆದ ಫೆಬ್ರವರಿಯಲ್ಲಿ ತನ್ನ ಕಾರಿನಲ್ಲಿ ನಗರ ಹೊರವಲಯದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ. ಸಂತ್ರಸ್ತೆ ಹಾಗೂ ಆಕೆಯ ಕುಟುಂಬಸ್ಥರು ನೀಡಿದ ದೂರಿನ ಅನ್ವಯ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. 2025ರ ಜೂನ್‌ನಲ್ಲಿ ನಗರದ ಖಾಸಗಿ ಕಾಲೇಜಿನಲ್ಲಿ ಕರ್ತವ್ಯಕ್ಕೆ ಸೇರಿದ್ದ ಎಂದು ಪೊಲೀಸರ ವಿಚಾರಣೆಯಿಂದ ತಿಳಿದುಬಂದಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203, ದೂರವಾಣಿ : 080-29562046
ಸಂಖ್ಯೆ: DPA/TP/CLU/17/2026-27 — ದಿನಾಂಕ:02.07.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾ ಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಎಂ. ಲಕ್ಷ್ಮೀ ನಾರಾಯಣ ಬಿನ್ ಮರಿಯಪ್ಪ	ದೊಡ್ಡ ಬಳ್ಳಾಪುರ	ಕಸಬಾ	ಲಿಂಗನಹಳ್ಳಿ	271/2	3-09	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಸಿಂಡಿಕೇಟ್‌ಗೆ ನೇಮಕ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿವಿ ಸಿಂಡಿಕೇಟ್ ಸದಸ್ಯರನ್ನಾಗಿ ಡಾ.ಬಿ.ಜಿ. ಭಾಗ್ಯಲಕ್ಷ್ಮಿ ಅವರನ್ನು ನಾಮ ನಿರ್ದೇಶನ ಮಾಡಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಆದೇಶ ಹೊರಡಿಸಿದ್ದಾರೆ.

ಡಾ.ಬಿ.ಜಿ.ಭಾಗ್ಯಲಕ್ಷ್ಮಿ ಅವರು ಮೂಲತಃ ಶಿವಮೊಗ್ಗ ಜಿಲ್ಲೆಯವರು. ತಿರುಪತಿಯ ವೆಂಕಟೇಶ್ವರ ವಿವಿ ಎಂ.ಫಿಲ್ ಪದವಿ ಪಡೆದಿದ್ದಾರೆ. 'ಭಾರತೀಯ ಚಿಂತನೆಯಲ್ಲಿ ಶಿಕ್ಷಣ' ಎಂಬ ವಿಷಯದ ಮೇಲೆ ಮಹಾಪ್ರಬಂಧ ಮಂಡಿಸಿ ತುಮಕೂರು ವಿವಿಯಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಪ್ರಸ್ತುತ ಸಂಸ್ಕೃತ ಭಾರತೀಯ ದಕ್ಷಿಣ ಮಧ್ಯ ಕ್ಷೇತ್ರದ ಮಹಾವಿದ್ಯಾಲಯ ಕಾರ್ಯ ಪ್ರಮುಖರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ಕಲಬುರಗಿ ಪೊಲೀಸರಿಗೆ ಭರ್ಜರಿ ಚಳ್ಳೆಹಣ್ಣು ತಿನ್ನಿಸಿದ ಪೋಕ್ಸೊ ಆರೋಪಿ

ಅಫಜಲಪುರ ಠಾಣೆಯಲ್ಲಿ ಸಿನಿಮೀಯ ಹೈಡ್ರಾಮಾ: ಸಿಸಿಟಿವಿಯಲ್ಲಿ ಸೆರೆ

ಕೈಕೋಳ ಬಿಚ್ಚಿ, ಮರ ಹತ್ತಿ ಪರಾರಿ!

■ ಶಕೀಲ್ ಚೌಧರಿ ಅಫಜಲಪುರ(ಕಲಬುರಗಿ)
skchoudhari@121gmail.com

ಕಲಬುರಗಿ ಜಿಲ್ಲೆಯ ಅಫಜಲಪುರ ಪೊಲೀಸ್ ಠಾಣೆಗೆ ವಿಚಾರಣೆಗೆಂದು ಕರೆತರಲಾಗಿದ್ದ ಪೋಕ್ಸೊ ಪ್ರಕರಣದ ಆರೋಪಿಯೊಬ್ಬ ಬುಧವಾರ ನಸುಕಿನ ಜಾವ ಪೊಲೀಸರ ಕಣ್ಣಿಗೆ ಮಣ್ಣೆರಚಿ ಠಾಣೆಯಿಂದಲೇ ಪರಾರಿಯಾಗಿದ್ದಾನೆ. ಆರೋಪಿ ಕೈಕೋಳ ಬಿಚ್ಚಿಕೊಂಡು ಓಡಿಹೋಗುತ್ತಿರುವ ದೃಶ್ಯಗಳು ಠಾಣೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಅಫಜಲಪುರ ಠಾಣೆ ವ್ಯಾಪ್ತಿಯ ಗ್ರಾಮವೊಂದರ 16 ವರ್ಷದ ಬಾಲಕಿ ನಾಪತ್ತೆಯಾಗಿರುವ ಬಗ್ಗೆ ಪಾಲಕರು ದೂರು ನೀಡಿದ್ದರು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರಿಗೆ, ಅದೇ ಗ್ರಾಮದ 24 ವರ್ಷದ ಯುವಕನೊಬ್ಬ ಬಾಲಕಿಯನ್ನು ಪ್ರೀತಿಸುವ ನಾಟಕವಾಡಿ ಅಪಹರಿಸಿಕೊಂಡು ಹೋಗಿರುವ ಮಾಹಿತಿ ಲಭ್ಯವಾಗಿತ್ತು.

ಇಬ್ಬರೂ ಮಹಾರಾಷ್ಟ್ರದ ಪುಣೆಯಲ್ಲಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಬಾಲಕಿಯ ಪಾಲಕರೊಂದಿಗೆ ಪುಣೆಗೆ ತೆರಳಿದ್ದ ಅಫಜಲಪುರ ಪೊಲೀಸರು, ಆರೋಪಿಯನ್ನು ಬಂಧಿಸಿ ತಡರಾತ್ರಿ ಠಾಣೆಗೆ ಕರೆತಂದಿದ್ದರು. ಇತ್ತ ಸಂತ್ರಸ್ತ ಬಾಲಕಿಯನ್ನು ವೈದ್ಯಕೀಯ ಪರೀಕ್ಷೆಗಾಗಿ ಕಲಬುರಗಿಯ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬುಧವಾರ ನಸುಕಿನ ಜಾವ ಇಡೀ ಠಾಣೆ ನಿದ್ರೆಗೆ ಜಾರಿದ್ದ ವೇಳೆ, ಆರೋಪಿ ಅತ್ಯಂತ ಚಾಣಾಕ್ಷತನದಿಂದ ತನ್ನ ಕೈಕೋಳವನ್ನು ಬಿಚ್ಚಿಕೊಂಡಿದ್ದಾನೆ. ಬಳಿಕ ಠಾಣೆಯ ಎರಡನೇ ಮಹಡಿಯ ಅಂಚಿಗೆ ಬಂದು, ಅಲ್ಲಿಗೆ ಹೊಂದಿಕೊಂಡಿದ್ದ ಬೇವಿನ ಮರದ ಕೊಂಬೆಯನ್ನು ಹಿಡಿದು ಜಿಗಿದಿದ್ದಾನೆ. ಕತ್ತಲಲ್ಲಿ ಮಾಯವಾಗಿದ್ದಾನೆ. ಈ ಇಡೀ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಪೊಲೀಸರನ್ನು ತಲ್ಲಣಗೊಳಿಸಿದೆ.

ಅಫಜಲಪುರ ಪೊಲೀಸ್ ಠಾಣೆಯಿಂದ ಪೋಕ್ಸೊ ಪ್ರಕರಣದ ಆರೋಪಿ ತಪ್ಪಿಸಿಕೊಂಡು ಹೋಗುತ್ತಿರುವುದು.

ಠಾಣೆಯಿಂದ ಪರಾರಿ ಆಗಿರುವ ಆರೋಪಿಯನ್ನು ತಕ್ಷಣವೇ ಬಂಧಿಸಲಾಗುವುದು. ಈತನ ನಿಗಾಕ್ಕೆ ನಿಯೋಜನೆ ಮಾಡಲಾದ ಸಿಬ್ಬಂದಿಯ ಕರ್ತವ್ಯ ಲೋಪ ಆಗಿದ್ದು, ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲಾಗುವುದು.

- ಅಡ್ಡೂರು ಶ್ರೀನಿವಾಸುಲು
ಎಸ್‌ಪಿ, ಕಲಬುರಗಿ

ಪ್ರಿಯಾಂಕ್ ಖರ್ಗೆ ತವರಲ್ಲೇ ಖಾಕಿ ನಿರ್ಲಕ್ಷ್ಯ

ಪ್ರಾಥಮಿಕ ವಿಚಾರಣೆ ನಡೆಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಪೊಲೀಸರು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ ಅದಕ್ಕೂ ಮುನ್ನವೇ ಆರೋಪಿ ಚಳ್ಳೆಹಣ್ಣು ತಿನ್ನಿಸಿ ನಾಪತ್ತೆಯಾಗಿದ್ದಾನೆ. ಕರ್ತವ್ಯ ನಿರತ ಸಿಬ್ಬಂದಿಯ ಘೋರ ನಿರ್ಲಕ್ಷ್ಯದಿಂದಲೇ ಈ ಲೋಪ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರೂ ಆದ ಕಲಬುರಗಿಯಲ್ಲೇ ಇಂತಹ ಘಟನೆ ನಡೆದಿರುವುದು ಪೊಲೀಸ್ ಇಲಾಖೆಗೆ ತೀವ್ರ ಮುಜುಗರ ಉಂಟುಮಾಡಿದೆ. ಪ್ರಸ್ತುತ ಡಿವೈಎಸ್ಪಿ ತಮ್ಮರಾಯ ಪಾಟೀಲ್, ಸಿಪಿಐ ಲಖನ್ ಮಸಗುಪ್ಪಿ ಹಾಗೂ ಪಿಎಸ್‌ಐ ಸೋಮಲಿಂಗಪ್ಪ ಒಡೆಯರ್ ನೇತೃತ್ವದ ತಂಡಗಳು ಆರೋಪಿಯ ಪತ್ತೆಗಾಗಿ ಜಿಲ್ಲೆಯಾದ್ಯಂತ ಹಾಗೂ ನೆರೆಯ ಮಹಾರಾಷ್ಟ್ರ ಗಡಿ ಭಾಗಗಳಲ್ಲಿ ತೀವ್ರ ಶೋಧ ನಡೆಸುತ್ತಿವೆ. ಗುರುವಾರ ರಾತ್ರಿವರೆಗೂ ಆರೋಪಿಯ ಯಾವುದೇ ಸುಳಿವು ಸಿಕ್ಕಿಲ್ಲ.

ಮಹಾರಾಷ್ಟ್ರದಲ್ಲಿ ಮಳೆ, ಕೃಷ್ಣೆಗೆ ಜೀವ ಕಳೆ

ಮಲೆನಾಡು, ಕರಾವಳಿಯಲ್ಲಿ ಜಿಟಿಜಿಟಿ ವರ್ಷಧಾರೆ | ಮತ್ತೆ ಚುರುಕಾದ ಕೃಷಿ ಚಟುವಟಿಕೆ

■ ವಿಕ ಸುದ್ದಿಲೋಕ ಬೆಂಗಳೂರು

ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಕಳೆದ ಎರಡು ದಿನಗಳಿಂದ ಜಿಟಿಜಿಟಿ ಮಳೆ ಸುರಿಯುತ್ತಿದ್ದು, ಮಳೆ ಹಿನ್ನೆಲೆಯಲ್ಲಿ ಹೊಲಗದ್ದೆಗಳಲ್ಲಿ ರೈತರು ಚಟುವಟಿಕೆ ಚುರುಕಾಗಿದೆ. ಇದರ ನಡುವೆಯೇ, ಮಹಾರಾಷ್ಟ್ರದ ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಬಿರುಸುಗೊಂಡಿರುವುದು ಗುರುವಾರ ಬೆಳಗ್ಗೆ ಕೊಯ್ನಾ ಡ್ಯಾಂ ನೀರಿನ ಮಟ್ಟ 2043.05 ಅಡಿ ತಲುಪಿದ್ದು, 24 ಗಂಟೆಗಳಲ್ಲಿ 5,861 ಕ್ಯುಸೆಕ್ ನೀರು ಹರಿದು ಬಂದಿದೆ. ಹಿಪ್ಪರಗಿ ಬ್ಯಾರೇಜ್‌ಗೆ ಒಳಹರಿವು ಆರಂಭವಾಗುವ ನಿರೀಕ್ಷೆ ಮೂಡಿದೆ.

ಕೃಷ್ಣೆಗೆ ಪೂಜೆ: ಬಹುತೇಕ ಬತ್ತಿ ಹೋಗಿದ್ದ ಕೃಷ್ಣಾ ನದಿಗೆ ಗುರುವಾರ ಬೆಳಗ್ಗೆ ಉಗಾರ ಸಮೀಪ ನೀರು ಹರಿದು ಬಂದಿದೆ. ಇದರಿಂದ ನದಿತೀರದ ರೈತರು, ಮೀನುಗಾರರು ಹಾಗೂ ಸ್ಥಳೀಯರು ನದಿತೀರಕ್ಕೆ ತೆರಳಿ ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ಮಳೆ ಬಂದರಷ್ಟೇ ಬೆಳೆಗೆ ನೀರು

ಹೊಸಪೇಟೆ/ಶಿವಮೊಗ್ಗ: ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಈ ಬಾರಿ ಮಳೆ ಬಾರದ ಕಾರಣ ಜಲಾಶಯಕ್ಕೆ ಒಳಹರಿವು ಶೂನ್ಯವಾಗಿದೆ. ಸದ್ಯ ಸಂಗ್ರಹವಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಮೀಸಲಿರಿಸಲಾಗಿದೆ ಎಂದು ತುಂಗಭದ್ರಾ ಯೋಜನಾ ವೃತ್ತದ ಕರ್ನಾಟಕ ನೀರಾವರಿ ನಿಗಮ ನಿಯಮಿತ ಅಧೀಕ್ಷಕ ಅಭಿಯಂತರ ಎಸ್.ಬಿ.ಮಲ್ಲಿಗೆವಾಡ ತಿಳಿಸಿದ್ದಾರೆ.

ಮಲೆನಾಡಿನಲ್ಲಿ ಈ ವರ್ಷ ಮಳೆ ಕೊರತೆ ತೀವ್ರವಾಗಿದ್ದು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಭದ್ರಾ ಜಲಾಶಯದಲ್ಲಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಉಳಿಸಿಕೊಳ್ಳಬೇಕಾಗಿರುವುದರಿಂದ ಮುಂಗಾರು ಬೆಳೆಗಳಿಗೆ ನೀರು ಕೊಡಲು ಸಾಧ್ಯವಿಲ್ಲ ಎಂದು ಭದ್ರಾ ಯೋಜನಾ ವೃತ್ತದ ನೀರಾವರಿ ಸಲಹಾ ಸಮಿತಿ(ಐಸಿಸಿ) ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಲಾಶಯಗಳ ಒಳಹರಿವು ಏರಿಕೆ: ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದಲ್ಲಿ ಬುಧವಾರ ರಾತ್ರಿಯಿಂದ ಗುರುವಾರ ಬೆಳಗ್ಗೆ 10ಗಂಟೆವರೆಗೆ ನಿರಂತರ ಸೋನೆ ಮಳೆ ಸುರಿಯಿತು. ಲಿಂಗನಮಕ್ಕಿ ಜಲಾಶಯಕ್ಕೆ 10,574 ಕ್ಯುಸೆಕ್, ತುಂಗಾ 4,037, ಭದ್ರಾ 3,369, ವರಾಹಿ ಜಲಾಶಯಕ್ಕೆ 1,621 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಹುಲಿಕಲ್‌ನಲ್ಲಿ 158 ಮಿ.ಮೀ ಮಳೆಯಾಗಿದೆ. ಗಾಜನೂರು(ತುಂಗಾ) ಜಲಾಶಯದಿಂದ ಅಚ್ಚುಕಟ್ಟು ಪ್ರದೇಶದ ಮುಂಗಾರು ಹಂಗಾಮು ಬೆಳೆಗೆ ತುಂಗಾ ಮೇಲ್ದಂಡೆ ಯೋಜನೆ ಮುಖ್ಯ ಕಾಲುವೆ ಹಾಗೂ ಎಡ ಮತ್ತು ಬಲದಂಡೆ ನಾಲೆಗಳಿಗೆ ಗುರುವಾರ ಮಧ್ಯರಾತ್ರಿಯಿಂದಲೆ ನೀರು ಹರಿಸಲಾಗುವುದು ಎಂದು ತುಂಗಾ ಮೇಲ್ದಂಡೆ ಯೋಜನೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಹೊನ್ನಾವರದಲ್ಲಿ ಗುಡ್ಡಕುಸಿತ: ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕಿನಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಗೆ ಪಟ್ಟಣದ ಕರ್ಕಿನಾಕಾ ಹಾಗೂ ರಾಮತೀರ್ಥ ಕ್ರಾಸ್ ನಡುವೆ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ಗುಡ್ಡ ಕುಸಿತ ಉಂಟಾಗಿದೆ. ಐಆರ್‌ಬಿ ಯವರು ಜೆಸಿಬಿ ಮತ್ತು ಸಿಬ್ಬಂದಿಗಳ ಮೂಲಕ ಹೆದ್ದಾರಿಯಲ್ಲಿ ಬಿದ್ದ ಮಣ್ಣನ್ನು ತೆರವುಗೊಳಿಸಿದ್ದಾರೆ. ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳಲ್ಲಿ ರಾತ್ರಿ– ಹಗಲು ವಿಪರೀತ ಮಳೆ ಸುರಿಯುತ್ತಿದೆ. ಬುಧವಾರ ರಾತ್ರಿ ಅತಿಯಾಗಿ ಮಳೆ ಸುರಿಯುತ್ತಿದ್ದರಿಂದ ಗುರುವಾರ ಬೆಳಗ್ಗೆ ಕಾರವಾರ ತಾಲೂಕಿನ ಶಾಲೆಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ದ.ಕ.ಜಿಲ್ಲೆಯಲ್ಲಿ ಶಾಲಾ– ಪಿಯು ಕಾಲೇಜುಗಳಿಗೆ ಜುಲೈ 3ರಂದು ರಜೆ ಘೋಷಿಸಲಾಗಿದೆ.

ಹೆದ್ದಾರಿಗೆ ಬಿದ್ದ ಬೃಹತ್ ಮರ: ಕೊಡಗು ಜಿಲ್ಲೆಯಲ್ಲಿ ಮುಂಗಾರು ಮುಂದುವರಿದಿದ್ದು, ಹಾರಂಗಿ ಜಲಾಶಯದಲ್ಲಿ ಒಂದು ಅಡಿ ನೀರು ಏರಿಕೆ ಆಗಿದೆ. ಸುಂಟಿಕೊಪ್ಪದ ಕೆದಕಲ್ ಬಳಿ ಗುರುವಾರ ಗಾಳಿ, ಮಳೆಗೆ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿದ್ದ ಬೃಹತ್ ಗಾತ್ರದ ಮರ ರಸ್ತೆಗೆ ಉರುಳಿ ಬಿದ್ದು ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಕಿಲೋ ಮೀಟರ್‌ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಕಾಗವಾಡ ತಾಲೂಕಿನ ಮಂಗಾವತಿ ಬಳಿ ಕೃಷ್ಣಾನದಿಗೆ ಹರಿದು ಬಂದ ನೀರು.

Sri Basaveshwara Education Society(R) Halkurke Tiptur
SRI BASAVESHWARA INSTITUTE OF TECHNOLOGY
Madenur Gate, B.H. Road, Tiptur, Tumkur Dist., Karnataka.
WANTED

Designation	Departments	Qual & Exp	Salary
Principal	Any Engineering Discipline	As per AICTE Norms	As per AICTE Norms
Professors	CSE, ECE, ME, EEE, Civil Maths, Physics, Chemistry		
Asst. Professors /Lecturers	CSE, ECE, ME, EEE, Civil Maths, Physics, Chemistry M.Sc. (ES), M.P.Ed, M.Lib		
Instructors/ Programmers	CSE, ECE, ME, EEE, Civil Physics, Chemistry	Diploma in ME, CSE ECE, EEE Civil, CAD/CAM	As per SBES Norms

Apply along with Bio-Data with in the 7 days from the date of Notification
Contact : H.N. Halappa, Administrative Offer
E-mail : haleshhn65@gmail.com Mob : 9845187579

ಬಾಳೆಬರೆ ಬೆಳ್ಳಿಧಾರೆ...

ಘಾಟಿಯಲ್ಲಿ ಸುರಿಯುತ್ತಿರುವ ಅಬ್ಬರದ ಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬಾಳೆಬರೆ ಜಲಪಾತ ಮೈದುಂಬಿಕೊಂಡಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಕಂಬಳ ರದ್ದಾಗಲಿ, ಸರಳ ದಸರಾ ನಡೆಯಲಿ

ಮೈಸೂರಿನಲ್ಲಿ ವಿವಿಧ ಸಂಘಟನೆಗಳ ಆಗ್ರಹ

■ ವಿಕ ಸುದ್ದಿಲೋಕ ಮೈಸೂರು

ಈ ಬಾರಿ ರಾಜ್ಯದಲ್ಲಿ ನಿರೀಕ್ಷಿಸಿದಷ್ಟು ಮುಂಗಾರು ಮಳೆ ಬಿದ್ದಿಲ್ಲ. ಹಾಗಾಗಿ ಸರಕಾರ ನಾಡಹಬ್ಬ ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸಬೇಕು. ಜತೆಗೆ ಕರಾವಳಿಯ ಜನಪ್ರಿಯ ಕಂಬಳ ಕ್ರೀಡೆಯನ್ನು ರದ್ದುಪಡಿಸಬೇಕೆಂದು ಪರಿಸರಕ್ಕಾಗಿ ನಾವು, ರೈತ ಸಂಘಟನೆ ಮತ್ತು ಕನ್ನಡ ಸಂಘಟನೆಗಳು ಆಗ್ರಹಿಸಿವೆ.

ನಗರದಲ್ಲಿ ಗುರುವಾರ ಕರೆದಿದ್ದ ಸಭೆಯಲ್ಲಿ ದಸರಾ ಸಂದರ್ಭದಲ್ಲಿ ಆಯೋಜಿಸುತ್ತಿರುವ ಕಂಬಳ ಕ್ರೀಡೆಯನ್ನು ತೀವ್ರವಾಗಿ ವಿರೋಧಿಸಲು ಸರ್ವಾನುಮತದಿಂದ ತೀರ್ಮಾನ ಮಾಡಲಾಯಿತು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ''ಮುಂಗಾರು ಕೈಕೊಟ್ಟ ಕಾರಣ ಈ ಬಾರಿ ರಾಜ್ಯದಲ್ಲಿ ಬರಗಾಲ ತಲೆದೋರುವ ಸಾಧ್ಯತೆ ಹೆಚ್ಚಿದೆ. ನೀರಿನ ಕೊರತೆಯಿಂದ ತಮಿಳುನಾಡು– ಕರ್ನಾಟಕದ ನಡುವೆ ಸಂಘರ್ಷ ನಡೆಯಬಹುದು. ಹೀಗಾಗಿ, ಈ ಬಾರಿಯ ದಸರಾವನ್ನು ಸರಳ ಮತ್ತು ಸಾಂಪ್ರದಾಯಿಕವಾಗಿ ಆಚರಿಸಬೇಕು. ಸ್ಥಳೀಯರ ಅಭಿಪ್ರಾಯ ಕೇಳದೆ ಕಂಬಳ ಆಯೋಜನೆಗೆ ಮುಂದಾಗಿರುವುದು ಸರಿಯಲ್ಲ,'' ಎಂದು ತಿಳಿಸಿದರು.

ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ''ಕರಾವಳಿಯ ಜನಪ್ರಿಯ ಕ್ರೀಡೆ ಕಂಬಳ ಆಯೋಜನೆ ಮೈಸೂರು ದಸರಾದಲ್ಲಿ ಬೇಡ. ಅದರ ಬದಲು ಸ್ತಬ್ಧಚಿತ್ರ ಮಾಡಿ ಗೌರವ ಸಲ್ಲಿಸೋಣ. ಕೋಟ್ಯಂತರ ರೂ. ಖರ್ಚು ಮಾಡುವುದು ಬೇಡ,'' ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜು ಕಿರಣ್, ಭಾನುಪ್ರಶಾಂತ್, ವಕೀಲ ಅನಂತರಾಜು, ಲೀಲಾ ಶಿವಕುಮಾರ್, 'ಪರಿಸರಕ್ಕಾಗಿ ನಾವು' ಸಂಘಟನೆಯ ಪರಶುರಾಮೇಗೌಡ, ಲೇಖಕ ಹೊರೆಯಾಲ ದೊರೆಸ್ವಾಮಿ ಮಾತನಾಡಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಕರ್ನಾಟಕ ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ರವರ ಕಛೇರಿ
ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23346551

ಸಂಖ್ಯೆ: KFD/EWRT/A2(COR)/27/2025 ದಿನಾಂಕ: 01–07–2026

ಸಾರ್ವಜನಿಕ ಸಂಪರ್ಕ ಅಧಿಕಾರಿ (ಪಿಆರ್‌ಒ) ಹುದ್ದೆಗೆ ನೇಮಕಾತಿ ಅಧಿಸೂಚನೆ

ಕರ್ನಾಟಕ ಅರಣ್ಯ ವನ್ಯಜೀವಿ ಮತ್ತು ಹವಾಮಾನ ಬದಲಾವಣೆ ಪ್ರತಿಷ್ಠಾನ (ಕೆಎಫ್‌ಡಬ್ಲ್ಯೂಸಿಸಿಎಫ್) ದಲ್ಲಿ **ಸಾರ್ವಜನಿಕ ಸಂಪರ್ಕ ಅಧಿಕಾರಿ (ಪಿಆರ್‌ಒ) ಹುದ್ದೆಗೆ ಕರಾರಿನ ಆಧಾರದ ಮೇಲೆ** ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಈ ನೇಮಕಾತಿಯು ಪ್ರಾರಂಭಿಕವಾಗಿ **ಎರಡು (02) ವರ್ಷಗಳ ಅವಧಿಗೆ ಇರಲಿದೆ.**
ಅರ್ಜಿಯ ಪ್ರಕ್ರಿಯೆ: (1) ನಿಗದಿತ ಅರ್ಜಿ ನಮೂನೆಯನ್ನು ಕೆಎಫ್‌ಡಬ್ಲ್ಯೂಸಿಸಿಎಫ್ ನ ಅಧಿಕೃತ ವೆಬ್‌ಸೈಟ್ **http://kfwccf.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ವೆಬ್‌ಸೈಟ್‌ನಲ್ಲಿ ನೀಡಿರುವ ಸೂಚನೆಗಳ ಪ್ರಕಾರ ಸಲ್ಲಿಸತಕ್ಕದ್ದು.
(3) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 18.07.2026 (ಶನಿವಾರ).
ನೇಮಕಾತಿಗೆ ಸಂಬಂಧಿಸಿದ ಅರ್ಹತಾ ಮಾನದಂಡಗಳು, ಅರ್ಜಿಯ ವಿಧಾನ, ನೇಮಕಾತಿಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳು ಹಾಗೂ ಇತರೆ ಅಗತ್ಯ ವಿವರಗಳನ್ನು ಪ್ರತಿಷ್ಠಾನದ ಅಧಿಕೃತ ವೆಬ್‌ಸೈಟ್ **http://kfwccf.in**ನಲ್ಲಿ ಪ್ರಕಟಿಸಲಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ ಸ್ಥಾನ), ಬೆಂಗಳೂರು.
DIPR/CP/YC/1430/2026-27

TOI
ಅತೀ ಹೆಚ್ಚು ಓದುಗರನ್ನು ಹೊಂದಿರುವ ಭಾರತದ ನ್ಯೂಸ್ ಆ್ಯಪ್
TOI ಮೇಲೆ 100M+ ಓದುಗರ ವಿಶ್ವಾಸ
#1 ರೇಟಿಂಗ್ ಪಡೆದಿರುವ ಭಾರತೀಯ ನ್ಯೂಸ್ ಬ್ರ್ಯಾಂಡ್
24x7 ಬ್ರೇಕಿಂಗ್ ನ್ಯೂಸ್

ಡೌನ್‌ಲೋಡ್ ಮಾಡಿ TOI ಆ್ಯಪ್

CELEBRATING
₹3T
TRUST
TRADITION
TRANSFORMATION
THREE PILLARS
ONE UNSTOPPABLE JOURNEY
J&K Bank
Serving To Empower
Your Bank Since 1938
TRILLION BUSINESS
₹ 3,000,000,000,000
& as many reasons to Thank You
One Bank
21 Million+ Accounts
5000+ Touchpoints in 18 States
& 4 UTs across the Country
Digital Banking NRI Services Retail Banking SME Loans Corporate Banking

ಸಂಪುಟ ನಿರ್ಣಯ, ಕಾನೂನು ಜಾರಿಗೆ ತೀರ್ಮಾನ | ಗ್ರಾಮೀಣ ಭಾಗದ ಬಿಕ್ಕಟ್ಟಿಗೆ ಪರಿಹಾರ

ಖಾಸಗಿ ರಸ್ತೆಗಳೂ ಸರಕಾರಿ ಆಸ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಪಂಚಾಯತ್ ಮಟ್ಟದಲ್ಲೂ ದಾಖಲೆ ಶುದ್ಧೀಕರಣಕ್ಕೆ 'ಭೂ ಗ್ಯಾರಂಟಿ'ಯ ಭಾಗವಾಗಿ ಗ್ರಾಮೀಣ ಭಾಗದಲ್ಲೂ ಖಾಸಗಿ ರಸ್ತೆಗಳನ್ನು 'ಸರಕಾರಿ ಸ್ವತ್ತು' ಎಂದು ಘೋಷಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿದೆ.

ಸಭೆ ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ''ಗ್ರಾಮೀಣ ಭಾಗದ ರೆವಿನ್ಯೂ, ಖಾಸಗಿ ರಸ್ತೆಗಳನ್ನು ಸಾರ್ವಜನಿಕ ರಸ್ತೆಗಳಾಗಿ ಪರಿಗಣಿಸಲಾಗುವುದು. ಈ ಸಂಬಂಧ ಕಾನೂನು ರೂಪಿಸಲು ಸಂಪುಟ ತೀರ್ಮಾನಿಸಿದೆ,'' ಎಂದು ತಿಳಿಸಿದರು.

''ಈ ಹಿಂದೆ ಬೆಂಗಳೂರು ನಗರದಲ್ಲಿ ಖಾಸಗಿ ರಸ್ತೆಗಳನ್ನುಸರಕಾರಿ ಎಂದು ತೀರ್ಮಾನಿಸಲಾಗಿತ್ತು. ಈಗ, ರಾಜ್ಯಾದ್ಯಂತ ಗ್ರಾಮೀಣ ಭಾಗದಲ್ಲೂ ಯಾವುದೇ ನಿವೇಶನ ರಚಿಸಿ, ಸಂಪರ್ಕ ಕಲ್ಪಿಸುವ ಖಾಸಗಿ ರಸ್ತೆಗಳನ್ನೂ ಸರಕಾರಿ ರಸ್ತೆ ಎಂದು ಪರಿಗಣಿಸಲು ನಿರ್ಧರಿಸಲಾಗಿದೆ,'' ಎಂದು ಹೇಳಿದರು.

ಜಿ ರಾಮ್ ಜಿ ಜಾರಿ

''ಮನರೇಗಾ ಬದಲಿಗೆ ಕೇಂದ್ರ ಸರಕಾರ ಏಕಪಕ್ಷೀಯ ತೀರ್ಮಾನ ಕೈಗೊಂಡು ಜಾರಿಗೊಳಿಸಿರುವ ವಿಬಿ ಜಿ ರಾಮ್ ಜಿ ಯೋಜನೆ ವಿರುದ್ಧ ರಾಜ್ಯ ಸರಕಾರ ಹೋರಾಟದ ಹಕ್ಕು ಕಾಯ್ದಿರಿಸಿಕೊಂಡಿದ್ದು, ಷರತ್ತುಗಳನ್ನು ಒಪ್ಪಿಲ್ಲ. ಆದರೂ, ಗ್ರಾಮೀಣ ಭಾಗದ ಬಡವರ ಹಿತವನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಸಂಬಂಧ ಗುರುವಾರ ಅಧಿಸೂಚನೆ ಹೊರಡಿಸಲಾಗಿದೆ. ಇದರಿಂದ ರಾಜ್ಯ ಸರಕಾರಕ್ಕೆ ವಾರ್ಷಿಕ 3,806 ಕೋಟಿ ರೂ. ಆರ್ಥಿಕ ಹೊರೆ ಬೀಳಲಿದೆ,'' ಎಂದು ಸಿಎಂ ತಿಳಿಸಿದರು.

ವಿದ್ಯುತ್ ಸಂಪರ್ಕಕ್ಕೆ ಆ.15ರವರೆಗೆ ಅವಕಾಶ

''ವಸತಿ ಕಟ್ಟಡಗಳಿಗೆ ಒಸಿ, ಸಿಸಿಯಿಂದ ವಿನಾಯಿತಿ ನೀಡಿ, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಹಾಕಲು ನಿಗದಿಯಾಗಿದ್ದ ಕಾಲಾವಧಿಯನ್ನು ಆಗಸ್ಟ್ 15ರವರೆಗೆ ವಿಸ್ತರಿಸಲಾಗಿದೆ. ವಸತಿ ಕಟ್ಟಡಗಳಿಗಷ್ಟೇ ಈ ಸೌಲಭ್ಯ ಅನ್ವಯವಾಗಲಿದ್ದು, ಮಾಲೀಕರು ತಮ್ಮ ಹಾಗೂ ಕಟ್ಟಡದ ಫೋಟೋ, ದಾಖಲೆಗಳೊಂದಿಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಬಹುದು,'' ಎಂದು ತಿಳಿಸಿದರು.

''ವಾಣಿಜ್ಯ ಕಟ್ಟಡಗಳಿಗೂ ಈ ವಿನಾಯಿತಿ ಸೌಲಭ್ಯಕ್ಕೆ ಬೇಡಿಕೆ ಇದ್ದು, ಇದು ಸಾಧ್ಯವಿಲ್ಲ. ಸುಪ್ರೀಂಕೋರ್ಟ್ ಆದೇಶವನ್ನು ಗಮನದಲ್ಲಿಟ್ಟು ಕೊಂಡು ಸರಕಾರ ಕೆಲಸ ಮಾಡಬೇಕಿದೆ'' ಎಂದು ಸ್ಪಷ್ಟಪಡಿಸಿದರು.

ಮನೆಬಾಗಿಲಿಗೇ ಸರಕಾರ: ''ಸಾರ್ವಜನಿಕರು ತಮ್ಮ ಸಮಸ್ಯೆ, ಅಹವಾಲು, ಕುಂದು ಕೊರತೆಗಾಗಿ ಸರಕಾರಿ ಕಚೇರಿಗಳಿಗೆ ಅಲೆದಾಟ ತಪ್ಪಿಸಲು ಅವರ ಮನೆ ಬಾಗಿಲಿಗೇ ಸರಕಾರ ಹೋಗುವಂತಾಗಲು ನೂತನ 'ಪ್ರಜಾ ಸೇವೆ ಇಲಾಖೆ' ಕಾರ್ಯಾರಂಭ ಮಾಡುತ್ತಿದೆ. ಇದರ ಭಾಗವಾಗಿ ಉಸ್ತುವಾರಿ ಸಚಿವರು ಪ್ರತಿ ಜಿಲ್ಲೆಯಲ್ಲೂ ಪ್ರತಿ ತಿಂಗಳು ಮೊದಲ ಶನಿವಾರ ಮತ್ತು ಕೊನೆಯ ಶನಿವಾರ ಒಂದೊಂದು ತಾಲೂಕಿನಲ್ಲಿ 'ಜನಸ್ಪಂದನ' ಕಾರ್ಯಕ್ರಮ ನಡೆಸಲಿದ್ದಾರೆ. ಸ್ಥಳೀಯ ಶಾಸಕರು ಹಾಗೂ ಜಿಲ್ಲೆಯ ಎಲ್ಲ ಇಲಾಖೆ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಜನರ ಸಮಸ್ಯೆ ಆಲಿಸುವ ಕೆಲಸ ಮಾಡಲಾಗುತ್ತಿದೆ,'' ಎಂದು ಸಿಎಂ ತಿಳಿಸಿದರು.

''ಜನಸ್ಪಂದನ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಿಗೆ ಮುಂಚಿತವಾಗಿಯೇ ತಿಳಿಸಿ, ದೂರು, ಮನವಿ, ಸಮಸ್ಯೆಗಳ ಬಗ್ಗೆ ಅರ್ಜಿ ಸಲ್ಲಿಸಲು ಪ್ರತ್ಯೇಕ ಕೌಂಟರ್ ಸ್ಥಾಪಿಸಲಾಗುತ್ತಿದೆ. ಪ್ರತಿಭಟನೆ ಮಾಡುವವರ ಬೇಡಿಕೆ ಆಲಿಸುವ ಕೆಲಸವೂ ಈ ನೂತನ ಇಲಾಖೆಯಿಂದ ಆಗಲಿದೆ. ಎಲ್ಲ ಕಾನೂನುಬದ್ಧ ಸಮಸ್ಯೆ, ಬೇಡಿಕೆ, ದೂರಿಗೆ ಸ್ಪಂದಿಸಲಾಗುವುದು. ಐಎಎಸ್ ಅಧಿಕಾರಿಯೊಬ್ಬರು ಮುಖ್ಯಸ್ಥರಾಗಿರುವ ಈ ಇಲಾಖೆ ಕಾರ್ಯ ನಿರ್ವಹಣೆ ಮಾಡಲಿದೆ,'' ಎಂದು ಹೇಳಿದರು.

ಎನ್‌ಆರ್‌ಐ ಇಲಾಖೆ ಸ್ಥಾಪನೆ ಸದ್ಯಕ್ಕಿಲ್ಲ

ಪರಿಶೀಲನೆಗೆ ಡಿಸಿಎಂ ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚನೆ

ಬೆಂಗಳೂರು: ಅನಿವಾಸಿ ಭಾರತೀಯರ ಮೂಲಕ ರಾಜ್ಯದ ಉದ್ಯಮ ವಲಯಕ್ಕೆ ಹೆಚ್ಚಿನ ಬಂಡವಾಳ ಹೂಡಿಕೆ ಆಕರ್ಷಣೆ ಉದ್ದೇಶದೊಂದಿಗೆ ಹೊಸದಾಗಿ 'ಜಾಗತಿಕ ಹೂಡಿಕೆ ಮತ್ತು ವಿದೇಶಾಂಗ ವ್ಯವಹಾರಗಳ ಇಲಾಖೆ' ಸ್ಥಾಪಿಸುವ ಕುರಿತಂತೆ ಸಾಧಕ- ಬಾಧಕಗಳನ್ನು ಪರಾಮರ್ಶಿಸಿ ಸೂಕ್ತ ಶಿಫಾರಸು ಮಾಡಲು ಡಿಸಿಎಂ ಡಾ.ಜಿ. ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಪ್ರಕಟಿಸಿದ ಈ ಪ್ರಮುಖ ಘೋಷಣೆ ಜಾರಿ ಸಂಬಂಧ ಗುರುವಾರ ಕ್ಯಾಬಿನೆಟ್ ಸಭೆಯಲ್ಲಿ ಸುದೀರ್ಘ ಚರ್ಚೆಯಾಯಿತು. ನೂತನ ಇಲಾಖೆ ಸ್ಥಾಪನೆಯಿಂದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವ್ಯಾಪ್ತಿ ಮತ್ತು ಪಾತ್ರ ಏನು ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆಗೆ ಬಂತು.

ಏರೋಸ್ಪೇಸ್ ಪಾರ್ಕ್: ಬೆಂಗಳೂರು ಹೊರವಲಯದ ದೇವನಹಳ್ಳಿಯ ಏರೋಸ್ಪೇಸ್ ಪಾರ್ಕ್‌ನಲ್ಲಿ ಕೆಐಎಡಿಬಿ ಮೂಲಕ 30 ಕೋಟಿ ರೂ. ವೆಚ್ಚದಲ್ಲಿ 'ಕಾಮನ್ ಫೆಸಿಲಿಟಿ ಸೆಂಟರ್' ಸ್ಥಾಪನೆ ಮಾಡುವ ಪ್ರಸ್ತಾವನೆಗೆ ಕ್ಯಾಬಿನೆಟ್ ಒಪ್ಪಿಗೆ ನೀಡಿತು.

ವಿಶೇಷಚೇತನರಿಗೆ ಮೀಸಲು: ಕೆಐಎಡಿಬಿ ಮೂಲಕ ಅಭಿವೃದ್ಧಿಪಡಿಸುವ ಕೈಗಾರಿಕಾ ನಿವೇಶನಗಳಲ್ಲಿ ವಿಶೇಷ ಚೇತನರಿಗೆ ಶೇ.5ರಷ್ಟು ಮೀಸಲು ಜತೆಗೆ, ಮೊತ್ತ ಪಾವತಿಯಲ್ಲಿ ರಿಯಾಯಿತಿ ನೀಡಲೂ ಸಂಪುಟ ಸಭೆ ತೀರ್ಮಾನಿಸಿದೆ. ಭೂಮಿ ಮೌಲ್ಯದ ಶೇ.10 ಅಥವಾ ಗರಿಷ್ಠ 20 ಲಕ್ಷ ರೂ.ವರೆಗೆ ರಿಯಾಯಿತಿ ನೀಡಲು ಸಂಪುಟ ನಿರ್ಧರಿಸಿತು.

ಸಂಪುಟದ ಪ್ರಮುಖ ತೀರ್ಮಾನ

- ರಾಷ್ಟ್ರೀಯ ಅಂಧತ್ವ ನಿಯಂತ್ರಣ ಯೋಜನೆಯಡಿ ಸಣ್ಣ ಮಕ್ಕಳಲ್ಲಿ ದೃಷ್ಟಿ ಆರೈಕೆ ವ್ಯವಸ್ಥೆ ಬಲಪಡಿಸುವ ಸಂಬಂಧ 26 ಕೋಟಿ ರೂ. ವೆಚ್ಚದ ಪ್ರಸ್ತಾವನೆಗೆ ಅನುಮೋದನೆ
- ಬಾಗಲಕೋಟೆಯ ಬೀಳಗಿ ತಾಲೂಕಿನಲ್ಲಿ ಕೃಷ್ಣಾ ನದಿಯಿಂದ ನೀರು ಎತ್ತಿ ಸುಮಾರು 7,000 ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದ 98.50 ಕೋಟಿ ರೂ. ವೆಚ್ಚದ 'ಬೀಳಗಿ ಏತ ನೀರಾವರಿ ಯೋಜನೆ'ಗೆ ಆಡಳಿತಾತ್ಮಕ ಅನುಮೋದನೆ
- ಕಲಬುರಗಿಯಲ್ಲಿ 700 ಕೋಟಿ ರೂ. ವೆಚ್ಚದ ಜವಳಿ ಪಾರ್ಕ್ ಸ್ಥಾಪನೆ ಸಂಬಂಧ ಕೆಐಎಡಿಬಿ ವತಿಯಿಂದ ಮೊದಲ ಹಂತದಲ್ಲಿ 320 ಕೋಟಿ ರೂ. ವೆಚ್ಚದ ಯೋಜನೆ ಕೈಗೆತ್ತಿಕೊಳ್ಳಲು ತೀರ್ಮಾನ
- ಬೆಂಗಳೂರಿನಲ್ಲಿ ಎನ್‌ಜಿಇಎಫ್‌ಗೆ ಸೇರಿದ 40 ಎಕರೆ ಜಾಗದಲ್ಲಿ 'ಟ್ರೀ ಪಾರ್ಕ್' ನಿರ್ಮಾಣ ಹಾಗೂ ಈ ಉದ್ದೇಶಕ್ಕೆ 26 ಕೋಟಿ ರೂ. ಅನುದಾನ ಭರಿಸಲು ನಿರ್ಧಾರ
- ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ 33 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ಉಡುಪು ಮತ್ತು ಸಾಮಾಗ್ರಿಗಳನ್ನು ವಿತರಣೆ ಮಾಡುವ ಪ್ರಸ್ತಾವನೆಗೆ ಒಪ್ಪಿಗೆ

5ನೇ ವರ್ಷದ ಪುಣ್ಯಸ್ಮರಣೆ

ಜಿ. ಅಂಜಿನಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳು ಗತಿಸಿದವು. ಆದರೆ ನಿಮ್ಮ ನೆನಪು ಹಾಗೂ ಆದರ್ಶಗಳು ಸದಾ ನಮ್ಮ ಮನದಲ್ಲಿ ಹಸಿರಾಗಿರುವುದು.

ಇಂತಿ ದುಃಖತಪ್ತರು:
ಕುಟುಂಬದವರು ಮತ್ತು
Jamuna Metric Works
& JMW Digital Systems

ಪರಿಷತ್ ನೂತನ ಸದಸ್ಯರ ಪ್ರಮಾಣ ವಚನ

ಬೆಂಗಳೂರು: ವಿಧಾನ ಪರಿಷತ್‌ಗೆ ನೂತನವಾಗಿ ಆಯ್ಕೆಯಾದ ಏಳು ಮಂದಿ ಸದಸ್ಯರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರು ಸತ್ಯ, ನಿಷ್ಠೆಯ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರೆ, ವಿನಯ್ ಕಾರ್ತಿಕ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರಿನಲ್ಲಿ ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಪಡೆದರು.

ಶಿವಣ್ಣ ಮಳವಳ್ಳಿ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರ ಹೆಸರಿನಲ್ಲಿ, ತಿಪ್ಪಣ್ಣಪ್ಪ ಕಮಕನೂರ ಅವರು ಕುಲದೇವತೆ ಮತ್ತು ಅಂಬಿಗರ ಚೌಡಯ್ಯ ಹೆಸರಿನಲ್ಲಿ, ಪಿ.ವಿ.ಮೋಹನ್ ಅವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಬಿಜೆಪಿಯ ರಘು ಕೌಟಿಲ್ಯ ಅವರು ಭಾರತ ಮಾತೆ ಮತ್ತು ಬಿ.ಎಸ್. ಯಡಿಯೂರಪ್ಪ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಲಿಂಗರಾಜ್ ಪಾಟೀಲ್ ಸಹ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಜಾಸೇವೆಗೆ ಹರ್ಷ ಗುಪ್ತಾ ಪ್ರಧಾನ ಕಾರ್ಯದರ್ಶಿ

ಬೆಂಗಳೂರು: ರಾಜ್ಯದ ಜನರ ಕುಂದುಕೊರತೆ, ಅಹವಾಲು ಆಲಿಸಿ ತ್ವರಿತವಾಗಿ ಇತ್ಯರ್ಥಪಡಿಸುವ ಉದ್ದೇಶದಿಂದ ಸರಕಾರ ಹೊಸದಾಗಿ ಸ್ಥಾಪಿಸಿರುವ ಪ್ರಜಾಸೇವಾ ಇಲಾಖೆಗೆ ಪ್ರಧಾನ ಕಾರ್ಯದರ್ಶಿಯಾಗಿ ಹರ್ಷ ಗುಪ್ತಾ ಅವರನ್ನು ನೇಮಕ ಮಾಡಲಾಗಿದೆ. ಸದ್ಯ ಕೆಎಟಿ ಅಧ್ಯಕ್ಷರಾಗಿರುವ ಹರ್ಷ ಗುಪ್ತಾ ಅವರು ಪ್ರಜಾಸೇವಾ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಲಿದ್ದಾರೆ. ಆರ್.ರಾಗಪ್ರಿಯಾ ಅವರನ್ನು ಕಾರ್ಮಿಕ ಇಲಾಖೆ ಆಯುಕ್ತರ ಹುದ್ದೆ, ಎಚ್.ಎನ್.ಗೋಪಾಲಕೃಷ್ಣ ಅವರನ್ನು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ಕೆ.ಹರೀಶ್ ಕುಮಾರ್ ಅವರನ್ನು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ. ಹಾಗೆಯೇ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್ ಅವರಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನೂ ನೀಡಲಾಗಿದೆ.

ಮೇಲೇರಿದವ ಕೆಳಗಿಳಿಯಲೇಬೇಕು: ಎಚ್ಡಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕಾಲಚಕ್ರ ತಿರುಗುತ್ತಲೇ ಇರಲಿದ್ದು ಮೇಲೆ ಹೋದವನು ಕೆಳಗೆ ಬರಲೇಬೇಕು, ಕೆಳಗೆ ಇರುವವನು ಮೇಲೆ ಹೋಗಲೇಬೇಕು. ನಾನೇ ಕಾಯಂ ಎಂದರೆ ಅದು ಆಗದ ಮಾತು. ನಾನೇ ಇರುತ್ತೇನೆ, ಎಲ್ಲವೂ ನನ್ನಿಂದಲೇ ಆಗುತ್ತದೆ ಎಂಬುದೆಲ್ಲಾ ನಡೆಯುವುದಿಲ್ಲ. ಪ್ರತಿಯೊಂದಕ್ಕೂ ಕೊನೆ ಇರುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಿಎಂ ಕುರಿತಾಗಿ ಮಾರ್ಮಿಕ ನುಡಿಗಳನ್ನಾಡಿದ್ದಾರೆ.



ಕುಮಾರಸ್ವಾಮಿ ರಾಮನಗರ ಬಿಟ್ಟಿದ್ದಾರೆ ಎಂಬ ಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪಕ್ಷದ ರಾಜ್ಯ ಕಚೇರಿಯಲ್ಲಿ ಗುರುವಾರ ಪ್ರತಿಕ್ರಿಯಿಸಿದ ಅವರು, ''ಯಾರ ಅನುಮತಿ ಪಡೆದು ನಾನು ಜಿಲ್ಲೆ ಬಿಟ್ಟು ಹೋಗಬೇಕು? ನಮಗೂ ರಾಮನಗರ, ಮಾಗಡಿಯಲ್ಲಿ ತಲಾ 80,000 ಮಂದಿ ಮತ ನೀಡಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಜನ ಅವರ ಸಹೋದರನ್ನು (ಡಿ.ಕೆ.ಸುರೇಶ್) ಮನೆಗೆ ಕಳಿಸಿದ್ದಾರೆ. ಆಮೇಲೆ ಅವರು ಕನಕಪುರ ಬಿಟ್ಟು ಹೋಗಿದ್ದಾರಾ? ಇಂತಹ ಮಾತುಗಳನ್ನಾಡುವುದನ್ನು ಬಿಟ್ಟು ಜನರಿಗೆ ಒಳ್ಳೇ ಕೆಲಸ ಮಾಡುವುದನ್ನು ಕಲಿಯಲಿ,'' ಎಂದು ಟಾಂಗ್ ನೀಡಿದರು.

''ರಾಮನಗರದ ಒಂದಷ್ಟು ಜನರು ಜಿಲ್ಲೆಯ ಅಭಿವೃದ್ಧಿಗೆ 770 ಕೋಟಿ ರೂ. ಅನುದಾನ ಕೋರಿ ಅಹವಾಲು ಸಲ್ಲಿಸಿದ್ದಾರೆಂದು ಮುಖ್ಯಮಂತ್ರಿಗಳು ಭಾಷಣ ಬಿಗಿದಿದ್ದಾರೆ. ಅವರು ಯಾರೂ ಬಿಡದಿ ಟೌನ್‌ಶಿಪ್ ಬಗ್ಗೆ ಕೇಳಲು ಗೃಹ ಕಚೇರಿ 'ಕೃಷ್ಣಾ'ಗೆ ಹೋಗಿರಲಿಲ್ಲ. ಹಾಗಿದ್ದರೂ ಸಿಎಂ ಬಿಡದಿ ಬಗ್ಗೆ ಮಾತನಾಡಿದ್ದಾರೆ. ಜಿಲ್ಲೆಯ ನಾಲ್ಕೂ ತಾಲೂಕುಗಳು ತಮಗೆ ಮುಖ್ಯ ಎಂದಿದ್ದಾರೆ. ಹಾಗಾದರೆ ಅವರು ನಾಲ್ಕು ತಾಲೂಕುಗಳಿಗೆ ಮುಖ್ಯಮಂತ್ರಿಯೋ ಅಥವಾ ಇಡೀ ಕರ್ನಾಟಕಕ್ಕೆ ಮುಖ್ಯಮಂತ್ರಿಯೋ? ಈವರೆಗೆ ಈ ಭಾಗದಲ್ಲಿ ಏನೇನು ಅಭಿವೃದ್ಧಿಯಾಗಿಲ್ಲ ಎಂದಿದ್ದಾರೆ. ನಾನು ರಾಮನಗರಕ್ಕೆ ಬಂದಾಗ ಒಂದು ಹಳ್ಳಿಗೂ ಸರಿಯಾದ ರಸ್ತೆಯೇ ಇರಲಿಲ್ಲ, ಆಗ ಈ ಮನುಷ್ಯ ಎಲ್ಲಿದ್ದರು,'' ಎಂದು ಕುಟುಕಿದರು.

ಬಂಡೆ ಒಡೆಯಲು ಹೋಗಿರಲಿಲ್ಲ: ''ನನ್ನ ಕೈಲಾದ ಮಟ್ಟಿಗೆ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನಾನೇನು ಬಂಡೆ ಒಡೆಯಲು ಹೋಗಿರಲಿಲ್ಲ? ಬಂಡೆ ಒಡೆದು ವಿದೇಶಕ್ಕೆ ಸಾಗಿಸಲಿಲ್ಲ. ಸರಿಯಾಗಿ ಒಂದು ರಸ್ತೆ ಇರಲಿಲ್ಲ, ಕನಕಪುರದ ಜನಕ್ಕೆ ಏನು ಮಾಡಲು ಸಾಧ್ಯವೋ ಅಷ್ಟು ಮಾಡಿದ್ದೇನೆ,'' ಎಂದರು.

ದಡ್ಡತನಕ್ಕೂ ಮಿತಿ ಬೇಡವೇ?

''ಉಪನಗರ ಯೋಜನೆಯನ್ನು ನಾನು ಘೋಷಿಸಿದಾಗ ಇದೇ ಡಿ.ಕೆ. ಶಿವಕುಮಾರ್ ಮತ್ತು ಅವರ ಪಕ್ಷದವರು ವಿರೋಧಿಸಿದ್ದರು. ರೈತರು ಬೇಡ ಎಂದರು. ಎಚ್.ಕೆ.ಪಾಟೀಲ್ ಅವರ ನೇತೃತ್ವದ ಸತ್ಯಶೋಧನಾ ಸಮಿತಿ ವರದಿ ನೀಡಿದ್ದು, ಧೈರ್ಯವಿದ್ದರೆ ಆ ವರದಿಯನ್ನು ಜನರ ಮುಂದಿಡಲಿ. ವಿಧಾನಸಭೆ ಕಲಾಪದಲ್ಲಿ ನಾನು ಯೋಜನೆ ಕೈಬಿಟ್ಟಿರುವುದಾಗಿ ಘೋಷಿಸಿದ್ದೇನೆ. ಯೋಜನೆಯನ್ನೇ ಕೈಬಿಟ್ಟ ಮೇಲೆ ಡಿನೋಟಿಫಿಕೇಷನ್ ಪ್ರಶ್ನೆ ಎಲ್ಲಿಂದ ಬರುತ್ತದೆ? ದಡ್ಡತನಕ್ಕೂ ಮಿತಿ ಬೇಡವೇ,'' ಎಂದು ವ್ಯಂಗ್ಯವಾಡಿದರು.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ADMINISTRATION

HRD & ADMINISTRATIVE

FEMALE-ADMIN Required Any Graduate in and around Banaswadi , immediate joining Contact : 98452 08425 Email : chida1966@gmail.com

MEDICAL

MEDICAL

WANTED FOR NURSING STAFF Contact: Chaitanya Hospital No 80/117, P&T Colony R.T.Nagar Bangalore:32, Call: 9900520357

OTHER VACANCIES

GENERAL

ಜಾಬ್! ಜಾಬ್!! ಜಾಬ್!!! ಹೌಸ್‌ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು ಕಲ್ಯಾಣ ನಗರದಲ್ಲಿ, ಸಂಬಳ: ಸಿಬ್ಬಂದಿ ರೂ. 19,300/-, ಸೂಪರ್ವೈಸರ್ ರೂ. 23,000/-, ವಯಸ್ಸು: 18 ರಿಂದ 39 ವರ್ಷಗಳು ಕರೆ ಮಾಡಿ: 9250073007 / 9945779607

ಕರ್ನಾಟಕದಾದ್ಯಂತ ಕಂಪನಿಗಳಿಗೆ ಡೇಟಾ ಎಂಟ್ರಿ, ಪ್ಯಾಕಿಂಗ್, ಎಸ್‌ಎಂಎಸ್ ಕೆಲಸಕ್ಕೆ ಮನೆಯಿಂದಲೇ ಕೆಲಸ ಮಾಡುವವರು ಬೇಕಾಗಿದ್ದಾರೆ. 20000 - 25000/-, ಸಂ: 7090072435

MULTIPLE VACANCIES

ರಾಜಾಜಿನಗರದಲ್ಲಿರುವ ನಮ್ಮ ಸಂಸ್ಥೆಗೆ 18 ವರ್ಷ ಮೇಲ್ಪಟ್ಟ 10 ನೇ ತರಗತಿ ಪಾಸಾದ ಫೀಲ್ಡ್ ಅಸಿಸ್ಟೆಂಟ್ಸ್ ಬೇಕಾಗಿದ್ದಾರೆ.ನಿಮ್ಮ ರೆಸ್ಯೂಮ್ ಅನ್ನು WA ಸಂಖ್ಯೆ- 8310917454 ಗೆ ಕಳುಹಿಸಿ.

ಬೆಂಗಳೂರಿನಲ್ಲಿರುವ AV ಕಂಪನಿಗೆ 18-40 ವರ್ಷದ ಯುವಕರು ಬೇಕಾಗಿದ್ದಾರೆ. Drivers(Goods)-20k, Electrician-20k, Fabricator-20k & Helpers-15k ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ. (T&C Apply) Contact: 9845026220.

RETIRED PERSONS

PART Time / Full Time Career Opportunity Retired & Housewives Age 30 - 65, SSLC & Above Earn Good Income, Allowances Foreign Trips, Free Training Call: 8073947989, 9448957455

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

REQD Financial Consultants. Retd Govt officials/VRS/ Tax Consultants/ CA/CS/Auditors/ Bankers/Housewives/ Business Owners: 7204169733

SERVICES

CARETAKER

ಶ್ರೀ ಕಲ್ಪತರು ಸೇವಾ ಟ್ರಸ್ಟ್, ವೃದ್ಧರ ಆಲಯ ಮತ್ತು ಆಶ್ರಯ, ಇಲ್ಲಿ ವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು/ ಪುರುಷರು ಬೇಕಾಗಿದ್ದಾರೆ. ಕರೆ ಮಾಡಿ: 9535248551 / 7204119536

JOB WANTED

STAFF Nurse Required- For A Multispecialty Clinic in Malleshwaram. Gnm/ B.Sc. Nursing with 3-4 Years Experience. Good Patient Care and Communication Skills. Immediate Joining Preferred. Call/ Whatsapp: 99721 81837

2-6YR Expe. 1.Civil Engineer, 2.Procurement Engineer, 3.Q.S, 4.Tally Professional, Civil Projects in Bangalore/ Mysore: 91132 77234/ 97907 77639

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ವ್ಯಾಪಾರ BUSINESS

FOR SALE

BUSINESS (Name Kofresh) for Sale in Uttarahalli-Manufacturing unit of Snacks & Savories business incl goodwill & customers. Machines are 1yr old only. Price 10L. Cont: 8884253229

ಸೇವೆಗಳು SERVICES

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

ಪ್ರವಾಸ TRAVEL

TOURS & TRAVELS

ಕಾಶಿ, ಅಯೋಧ್ಯೆ, ಪುರಿಜಗನ್ನಾಥ್ ಯಾತ್ರೆ ಶ್ರೀಶೈಲ, ಮಹಾನಂದಿಯಾತ್ರೆ, ಚಾರ್ ಧಾಮ ಪ್ರವಾಸ ರಾಜಸ್ಥಾನ್ ಫ್ಯಾಮಿಲಿ ಪ್ರವಾಸ ಸಂಪರ್ಕಿಸಿ. ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂ 9448294477, 9845311899

ಅಯೋಧ್ಯೆ, ಪ್ರಯಾಗ್, ಗಯಾ, ಕಾಶಿ 05.08.2026, 10.08.2026 18.09.2026 24.09.2026 ರಿಂದ 6 ದಿನಗಳು. ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್ 18.09.2026 24.09.2026 23.10.2026 ರಿಂದ 14 ದಿನಗಳು. ನೇಪಾಳ, ಮುಕ್ತಿನಾಥ 23.10.2026 12.11.2026 22.11.2026 ರಿಂದ 9 ದಿನಗಳು. ವಿಜಯವಾಡ, ಭದ್ರಾಚಲಂ, ಸಿಂಹಾಚಲಂ, ವಿಶಾಖಪಟ್ಟಣಂ, ಅನ್ನಾವರಂ, ಪಂಚರಾಮ ಮಂದಿರಗಳು 23.10.2026 22.11.2026 ರಿಂದ 10 ದಿನಗಳು. ಸಂಪರ್ಕಿಸಿ. 26508925 , 9980993631. ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ, ಬೆಂಗಳೂರು. 18

personal

CHANGE OF NAME

ನಾನು, ಪ್ರಶಾಂತ್ ಎಸ್, ನನ್ನ ಅಪ್ರಾಪ್ತ ಮಗಳು ಯಶ್ವಿತಾ (ಜನನ ದಿನಾಂಕ 01-02-2019), ವಿಳಾಸ: ಸಂ.| 56, 6ನೇ ಕ್ರಾಸ್, ಎ.ಈ.ಸಿ.ಎಸ್ ಲೇಔಟ್, ಆರ್.ಎಂ.ವಿ ಎಕ್ಸ್‌ಟೆನ್ಷನ್ 2ನೇ ಹಂತ, ಸಂಜಯನಗರ, ಬೆಂಗಳೂರು 560094 , ಇವರ ಹೆಸರನ್ನು ಯಶ್ವಿತಾ ಯಿಂದ ಯಶ್ವಿತಾ ಪ್ರಶಾಂತ್ ಎಂದು ಬದಲಾಯಿಸಿದ್ದೇನೆ; ಮುಂದೆ ಅವಳು ಯಶ್ವಿತಾ ಪ್ರಶಾಂತ್ ಎಂಬ ಹೆಸರಿನಿಂದಲೇ ಎಲ್ಲಾ ದಾಖಲೆಗಳಲ್ಲಿ ಗುರುತಿಸಲ್ಪಡುವಳು.

I, ANTOINETTE MARY, residing at No. 35, Ground Floor, 11th Cross, R.S. Palya, Lingarajapura, Sadashiva Temple Road, Bangalore-560084, hereby declare that "ANTOINETTE MARY" and "ANTOINETTE MARY.M" refer to one and the same person, i.e., myself. The same has been notarized vide affidavit dated 02-07-2026 before Notary Y.R. Chandrasekar, Bangalore

I, Dhaval Kumar Janakkumar Gor, S/o Janak Kumar Vasudev Gor , R/o J-501, Purva Venezia, 5th Floor, Yelahanka, Bengaluru, Karnataka- 560064. Have changed my name to Dhaval Janakkumar Gor.

I, Kavya (Old Name), D/o Prakash Raghavendra, aged about 29 Yrs, presently residing at Flat No. G-2, 75, Sai Shiv Shakthi Residency, Kanaka Layout 3rd Stage, Subramanyapura, Bangalore - 560 061 hereby declare that my name has been changed to KAVYA BHAT (New Name) vide affidavit dated 30-06-2026 sworn before Advocate and Notary L. Puttaraju.

I, REHNUMAN A (Old name), Daughter of AKMAL PASHA, resident of No 18, 10th Cross, Hosahalli Main Road, Padarayanapura, BENGALURU, -560026. Have changed my name to FIZA HERMEN A (New Name) vide affidavit dated: 23/6/2026 Before Notary M.K.Devaki Bangalore.

I, Manoj Choudhari s/o Kawarsingh R/o C405, C Block Platinum City , HMT Road Yeshwantpura, Bengaluru 560022 have changed my name Choudhary Manoj K vide Affidavit IN-KA0413071810469Y dated 29.06.2026 before Notary Public/Bengaluru.

I, Sindu M Alias Sindu Manivannan D/o Manivannan R/o New No. 27/1, Old No.178/1, Someshwarappa, 4th Cross, 4th Main Road, Cambridge Layout, Halasuru, Bangalore, Karnataka 560008. Changed my name as Sindhu M for all future purposes

I,SAFA MAHEK, D/o MUKARRAM PASHA, R/O at No.13/1,13/2,2nd Cross,5th Phase, Yelahanka New Town,Bangalore - 560064 have changed my name to SAFA MEHEK M for all future purposes.

I, MOHAMMED GHOUSE CHANNARAYPATNA JALEEL R/o #54 Ward 13th Cross Hayath Mohalla Chanarayapatna Hassan-573116 have changed my name to MOHAMMED GHOUSE for all Pursposes.

I, Manohara Kumar Thotapalle S/o Masthanaiah R/o Ananda Nilayam, 26A, 2nd Cross, Panchamukhi Layout, Bandapura, Bangalore-5600049. have changed my name to Manohara Kumar Thotapalli for all purposes.

I, NAIK RUPA MOHAN (Old Name) R/at No.131, Mahalasa wada Mahalasa Road Kamadhenu Karwar Uttar Kannada- 581307 have changed my name to RADHA MANJUNATH MHALSEKAR (New Name) for all pursposes,

I, Nirmala H S, wife of Shankar K, residing at 174, Royal Lake Front Residency, Phase 3, JP Nagar 9th Phase, Bengaluru — 560108, declare that Nirmala H S (as per Aadhaar) and Nirmala Shankar are the names of one and the same person, i.e., myself, as stated in the affidavit dated 24/06/2026 sworn before Notary G. Dayananda.

I, SACHIN SMITHAN S/o Thomas M, R/o #15 DLF 3rd Cross Nynappanahalli Bengaluru 560076,I have changed my name from SACHIN SMITHAN to SACHIN SMITHAN T for all future purposes.

I Lakshmamma W/o Rangaram-aiah Mangala Maggirangayya R/o No 299 Near Suzuki Show Room Venkatala Yelahanka B'luru-560064 have changed my name to Lakshamamma for all purposes

I, MOHAMAD HABEEBUR RAHAMAN R/o #22/1 F Street Medical College East Kalasipalyam B'lore- 560002 have changed my name to MOHAMMED HABEEB UR RAHAMAN for all pursposes.

I, SAVITHA DEVIDAS MAHALE, (Old Name), R/at No. Hig 103 New KHB Colony Hubbuwada, Karwar, Uttara Kannada-581301 have changed my name to DIVYA DARASHAN SHANBHAG (New Name) for all pursposes.

I, BHIVARAM AGLECHA R/o #11, 4th Cross, Shivanandanagar Madhuranagar B'lore-560072 have changed my name to BHIVARAM AGLECHA SESHARAM for all pursposes.

I Chandrashekar Muniraj S/O, Muniraj R/o 1344/b 11th Cross R K Hegde Nagar, Dr Shivarama Karanth Nagar, Bengaluru, 560077 have changed my name to Chandrashekhar Muniraj.

I, VIJAY ,S/ O;INDERVEER ,R/O: 202,2ND FLOOR, BOATMAN, SJR WATERMARK, HARLUR RD, AMBALIPURA, HSR LAYOUT, BLR - 560102. Have changed my name as VIJAY LOHCHAB.

I, B VEENA BAI W/o Shantilal Porwal R/o #61, Rama Iyengar Road VV Puram B'lore- 560004 have changed my name to S VEENA BAI PORWAL for all pursposes.

I, MANASA PREMKUMAR R/o 186/33 Ground Floor White City Layout Seegehalli B'lore-560049 have changed my name to MANASA SUBRAMANYAM for all pursposes.

I, Jassica R/o Killankera, Yadgir Karnataka. I have changed my name from Jassica to Jassica Dodmani vide sworn before notary D Mallikarjuna dated 30.06.2026.

I KHUSHNAAZ SYED IRFAN R/@ No 60/1-3 6th Cross New Gurrappanpalya Bangalore-560029 has changed my name to KHUSHNAAZ for all purposes

I, Somoti, M/o, 14880150Y-Hav/SKT-Deepak, R/o, Narnaund (Hisar), Haryana, changed name to Samoti, for all purpose.

LOST & FOUND

MY client, Smt. Shanthamma, W/o. Sri. Bettaiah and Sri. Bettaiah, S/o. Late. Thimmaiah, R/at #85, 5th cross, Srinivasapura Colony Kengeri Bangalore, have Lost page No.8 and 9 of Original Sale Deed Dated 15.12.2017, Document No. KEN-1-07480/ 2017-18, stored in CD No. KEND683, Book-I, in the office of Sub-Registrar, Kengeri, for Property bearing Site No.85, Situated at Ganakallu Village, Srinivasapura Colony, Kengeri Hobli, Bangalore South Taluk, Bangalore, Finders Contact Devika Kumari.A., Advocate., No.1115, GF, 26th 'B' Main, 41st Cross, 9th Block Jayanagar, Bangalore-69. Ph: 9480620781

PUBLIC NOTICE – The Original Sale Deed bearing Document No. 19299/2005-06, dated 08.03.2006, registered at the Sub-Registrar Office, Anekal, has been lost/misplaced. A Lost Article Report has been lodged with the Karnataka Police E- Lost Report No. 2275137/2026 dated 26.06.2026. Anyone founds the said document is requested to contact the undersigned. Rajesh H R

CAUTION NOTICE

Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

MISSING

ಕಾಣೆಯಾಗಿದ್ದಾರೆ

ಯೋಗೇಶ್ವರಿ ಕೋಂ ಸುನೀಲ್ .ಕೆ.ಎಂ ಆದ ನಾನು ನಂ.37, ಮಾಳಣ್ಣ ಬಡಾವಣೆ, ಅಬ್ಬಿಗೆರೆ, ಬೆಂಗಳೂರು-90 ಇಲ್ಲಿನ ವಾಸಿಯಾಗಿರುತ್ತೇನೆ. ಅಬ್ಬಿಗೆರೆಯ ವೆಂಕಟೇಶ್ವರ ಪೆಟ್ರೋಲ್ ಬಂಕ್‌ನಲ್ಲಿ ಮ್ಯಾನೇಜರ್ ಆಗಿದ್ದ ನನ್ನ ಪತಿ ಸುನೀಲ್, 16.09.2025ರಂದು ಕೆಲಸಕ್ಕೆ ಹೋದವರು, ಮನೆಗೆ ವಾಪಸಾಗಿರುವುದಿಲ್ಲ. ಎಲ್ಲಾ ಕಡೆ ಹುಡುಕಿದರೂ, ಪತ್ತೆಯಾಗಿರುವುದಿಲ್ಲ. ಹಾಗಾಗಿ ಗಂಗಮ್ಮಗುಡಿ ಪೊಲೀಸ್ ಠಾಣೆಗೆ 17.09.2025ರಂದು ದೂರು ಸಲ್ಲಿಸಿರುತ್ತೇನೆ. 35 ವರ್ಷದ ನನ್ನ ಪತಿ ಸುನೀಲ್ ಎಲ್ಲಾದರೂ ಪತ್ತೆಯಾದಲ್ಲಿ, ಮೇಲ್ಕಂಡ ವಿಳಾಸ ಅಥವಾ ಪೊಲೀಸ್ ಠಾಣೆ ಅಥವಾ ಮೊ: 9964067418 ಸಂಖ್ಯೆಗೆ ಸಂಪರ್ಕಿಸುವಂತೆ ಕೋರಲಾಗಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

GALLERIA

Nirmala Travels® Presents
Ph No. 0824 2497051/54, 9663518877, 9663528877, 9686687771/2/3/4/6
visit us @ www.nirmalatravels.com
JOG FALLS 1/2 DAYS TOUR
MLORE/BLORE JULY:18 AUG:01, 08, 22, 29
MANTRALAYA HYDERABAD*/ANDHRA SPL 07/10 DAYS
BLORE JULY:12, 22, 26* AUG 02, 02*09*12, 16, 23
SOUTH INDIA 05/07*/10** DAYS
BLORE JULY:12*, 16, 19*, 21, 22*, 26, 26* AUG:01, 02*03**, 06, 09*11, 15**, 16, 16*, 21
MAHARASHTRA PANCHA JYOTIRLING/KOLHAPUR SHIRDI NASIK* 07 DAYS
BLORE JULY:06, 13, 19*, 20, 26*27 AUG: 02*, 03, 09*, 10, 17



Chanderi & Maheshwari Festival
Upto 20% Off ON ALL ITEMS
1st to 12th July 2026
Timing: 11am to 8pm
Exclusive designer block print & traditional hand woven Chanderi, Maheshwari, Kosa Silk Sarees, Handloom Bed Covers in Batik, Bagh, Chemical Print, Dress Material, Dupatta etc.
Madhya Pradesh Govt. Emporium
Mrignayanee Art from the heart
@ The Institution of Engineers
Opp. Indian Express
No. 3, Dr. B R Ambedkar Veedhi
Bengaluru. 01. mob: 7353857787

5 DAYS ONLY
FIRST TIME IN NAMMA BENGALURU
TOMORROW & JULY 5,11,12,19
2 Shows 4pm & 7pm
INDIA'S GOT TALENT — Finalist —
Vicky Krish's International MAGIC SHOW
Venue: TOWN HALL A/c J.C ROAD, BENGALURU
FURTHER DETAILS CONTACT : 89 39 39 0999
bookmyshow

ಕೆಇಆರ್‌ಸಿ ಮುಂದೆ ಆಕ್ಷೇಪಣೆ ಸಲ್ಲಿಸಲು ಎಸ್ಕಾಂಗಳಿಗೆ ಸೂಚನೆ | ಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ಅಸಮ್ಮತಿ

■ ವಿಕ ಸುದ್ದಿಲೋಕ ಬೆಂಗಳೂರು

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ರಾಜ್ಯ ಸರಕಾರದ ಸಮ್ಮತಿ ಇಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದು, ಈ ಸಂಬಂಧ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಎದುರು ಆಕ್ಷೇಪಣೆ ಸಲ್ಲಿಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ಸ್ಪಷ್ಟನಿರ್ದೇಶನ ನೀಡಿದ್ದಾರೆ.

ಗುರುವಾರ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಪರ್ಯಾಯವಾಗಿ ವಿದ್ಯುತ್ ವಿತರಣೆಗೆ ಖಾಸಗಿಯವರಿಗೆ ಪರವಾನಗಿ ನೀಡಲು ತೀರ್ಮಾನಿಸಿತ್ತು. ಅಂತೆಯೇ, ಟಾಟಾ ಸಂಸ್ಥೆಯವರು ವಿದ್ಯುತ್ ವಿತರಣೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು ಕೆಇಆರ್‌ಸಿ ಈ ಬಗ್ಗೆ ನಿರ್ಧರಿಸಲಿದೆ,'' ಎಂದು ತಿಳಿಸಿದರು.

''ಟಾಟಾ ಕಂಪನಿ ಸರಕಾರಕ್ಕೆ ಅರ್ಜಿ ಸಲ್ಲಿಸಿಲ್ಲ, ಬದಲಿಗೆ ಕೆಇಆರ್‌ಸಿಗೆ ಅರ್ಜಿ ಹಾಕಿದ್ದು, ಆಯೋಗವು ಎಸ್ಕಾಂಗಳಿಂದ ವಿವರಣೆ ಕೇಳಿದೆ. ಹಾಗಾಗಿ, ಈ ಪ್ರಸ್ತಾಪಕ್ಕೆ ರಾಜ್ಯ ಸರಕಾರದ ಸಮ್ಮತಿ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿ ಕೆಇಆರ್‌ಸಿಗೆ ಅರ್ಜಿ ಹಾಕಲು ಎಸ್ಕಾಂಗಳಿಗೆ ಸೂಚಿಸಲಾಗಿದೆ. ಈ ವಿಚಾರದಲ್ಲಿ ಕೆಇಆರ್‌ಸಿ ಏನು ತೀರ್ಮಾನ ಮಾಡಲಿದೆ ಎಂಬುದನ್ನು ಸರಕಾರ ಕಾದು ನೋಡಲಿದೆ'' ಎಂದು ಹೇಳಿದರು.



ಬಸ್ ಪ್ರಯಾಣ ದರ ಏರಿಕೆ?

''ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಹೆಚ್ಚಳ ಸಂಬಂಧ ಸಾರಿಗೆ ನಿಗಮಗಳ ಪ್ರಸ್ತಾವನೆ ಕುರಿತಂತೆ ವರದಿ ಪಡೆಯಲಾಗುತ್ತಿದೆ. ವರದಿಯನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ಮಾಡಲಾಗುವುದು'' ಎಂದು ಸಿಎಂ ತಿಳಿಸಿದರು. ''ಇಂಧನ ದರ ಏರಿಕೆಯಿಂದ ಸಾರಿಗೆ ಸಂಸ್ಥೆಗಳಿಗೆ ನಷ್ಟವಾಗುತ್ತಿದೆ. ಈ ಸಂಸ್ಥೆಗಳ ನೌಕರರ ಹಿತವನ್ನೂ ಗಮನಿಸಬೇಕಿದೆ. ಹಾಗಾಗಿ, ತಾಂತ್ರಿಕವಾಗಿ ಸಾರಿಗೆ ಸಂಸ್ಥೆಗಳಿಗೆ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ಅವಲೋಕಿಸಿ, ಬಸ್ ಪ್ರಯಾಣ ದರ ಏರಿಕೆ ಬಗ್ಗೆ ನಿರ್ಧಾರ ಪ್ರಕಟಿಸಲಾಗುವುದು,'' ಎಂದು ಹೇಳಿದರು.

ಸಿಎಂ 30 ದಿನದ ಆಡಳಿತದಲ್ಲಿ ಹಲವು ಮಹತ್ವದ ನಿರ್ಧಾರ

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಶುಕ್ರವಾರಕ್ಕೆ (ಜು.3) ಒಂದು ತಿಂಗಳು ಪೂರ್ಣಗೊಳ್ಳುತ್ತಿದ್ದು, ಈ ಅವಧಿಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿರುವುದು ಗಮನ ಸೆಳೆದಿದೆ. ಸಿಎಂ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ನಡೆಸಿದ ಚೊಚ್ಚಲ ಸಚಿವ ಸಂಪುಟ ಸಭೆಯಲ್ಲೇ ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಸೌಲಭ್ಯ ಕಲ್ಪಿಸುವ ನಿರ್ಧಾರ ಕೈಗೊಂಡರು. ರಾಜ್ಯದೆಲ್ಲೆಡೆ ಅರ್ಹ ಪ್ರಕರಣಗಳಲ್ಲಿ ಆಸ್ತಿಗಳಿಗೆ 'ಬಿ-ಖಾತಾ'ಯಿಂದ 'ಎ-ಖಾತಾ'ಗೆ ಪರಿವರ್ತನೆಗೆ ಅವಕಾಶ ಕಲ್ಪಿಸಿದರು. ಪ್ರಮುಖವಾಗಿ 72,000 ಖಾಲಿ ಹುದ್ದೆ ನೇಮಕಾತಿ ಪೂರ್ಣಗೊಳಿಸಲು ಆರು ತಿಂಗಳ ಗಡುವು ನೀಡಿರುವುದು ಉದ್ಯೋಗಾಕಾಂಕ್ಷಿಗಳಲ್ಲಿ ಭರವಸೆ ಮೂಡಿಸಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರಕಾರ ಒಂದು ತಿಂಗಳಲ್ಲಿ ಕೈಗೊಂಡ ಪ್ರಮುಖ ತೀರ್ಮಾನಗಳ ಹಿನ್ನೋಟ ಇಲ್ಲಿದೆ.

- ರಾಜ್ಯದ ಎಲ್ಲಾ ಗ್ರಾಪಂ/ ವಾರ್ಡ್‌ಗಳಲ್ಲಿ ಭಾರತ ಜೋಡೋ ಯುವಕರ ಸಂಘ ಸ್ಥಾಪನೆ ಜತೆಗೆ ತಲಾ 10 ಲಕ್ಷ ರೂ. ಹಂಚಿಕೆ
- 2500 ಚದರ ಅಡಿವರೆಗಿನ ನೂತನ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ
- ಬೆಂಗಳೂರಿನ ರಸ್ತೆಗಳನ್ನು ಗುಂಡಿಮುಕ್ತಗೊಳಿಸಲು 2,000 ಕೋಟಿ ರೂ. ಮೊತ್ತದ ಯೋಜನೆ
- ಸಾರ್ವಜನಿಕರ ಕುಂದುಕೊರತೆ ಆಲಿಸಲು ಪ್ರತ್ಯೇಕವಾಗಿ 'ಪ್ರಜಾಸೇವೆ' ಸಚಿವಾಲಯ ರಚನೆ
- ಭ್ರಷ್ಟಾಚಾರ ವಿರುದ್ಧ ದೂರು ಸ್ವೀಕೃತಿಗೆ ಪ್ರತ್ಯೇಕ ದೂರವಾಣಿ ಸಂಪರ್ಕ
- ನೂತನ ಸಿಎಸ್‌ಆರ್ ನೀತಿ ರೂಪಿಸಲು ಸಿದ್ಧತೆ
- ಮಾವು ಬೆಳೆಗಾರರಿಗೆ ಪ್ರೋತ್ಸಾಹಧನ ಮುಂದುವರಿಕೆ
- ವಿದ್ಯಾರ್ಥಿಗಳಿಗಾಗಿ ದಿಲ್ಲಿಯಲ್ಲಿ ಕರ್ನಾಟಕ ಭವನ ನಿರ್ಮಾಣ
- ಪುಸ್ತಕ ಪ್ರೇಮಿ ಅಂಕೇಗೌಡರ ಪುಸ್ತಕಗಳ ಸಂರಕ್ಷಣೆಗೆ 5 ಕೋಟಿ ರೂ. ಹಾಗೂ 2 ಎಕರೆ ಜಾಗ
- ಬಡವರಿಗೆ ನಿವೇಶನ ಬದಲಿಗೆ ಮನೆ ನಿರ್ಮಿಸಿಕೊಡಲು ಸೂಚನೆ
- ಕೆಂಪೇಗೌಡ ಬಡಾವಣೆಯಲ್ಲಿ 10 ಪಥಗಳ ಎಸ್.ಎಂ.ಕೃಷ್ಣ ರಸ್ತೆ ಉದ್ಘಾಟನೆ

ಬಾಂಗ್ಲಾ ನುಸುಳುಕೋರರಿಗೆ ಮತ ಅವಕಾಶ: ಎಚ್ಚರಿಕೆ

■ ವಿಕ ಸುದ್ದಿಲೋಕ ಬೆಂಗಳೂರು

ರಾಮನಗರದಲ್ಲಿ ಮುಖ್ಯಮಂತ್ರಿಗಳ ನೇರ ಪ್ರಭಾವ ಬಳಸಿ ಬಾಂಗ್ಲಾದೇಶದ ಅಕ್ರಮ ವಲಸಿಗರು ಸೇರಿದಂತೆ ಸಾವಿರಾರು ಕಳ್ಳ ಮತದಾರರಿಗೆ ದಾಖಲೆ ಸೃಷ್ಟಿಸುವ ಯತ್ನ ನಡೆದಿದೆ ಎಂದು ಗಂಭೀರ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಚುನಾವಣಾ ಆಯೋಗ ಕೂಡಲೇ ಮಧ್ಯ ಪ್ರವೇಶಿಸಿ ಈ ಅಕ್ರಮಕ್ಕೆ ಕಡಿವಾಣ ಹಾಕಬೇಕು ಎಂದು ಮನವಿ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ರಾಮನಗರ ಟಿಪ್ಪುನಗರದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆ ಆರೋಪ ಹೊರಿಸಿ ವಿಡಿಯೊವನ್ನು ಜೆಡಿಎಸ್ ರಾಜ್ಯ ಕಚೇರಿಯಲ್ಲಿ ಬಿಡುಗಡೆ ಮಾಡಿ ಮಾತನಾಡಿದ ಕುಮಾರಸ್ವಾಮಿ, ''ರಾಜ್ಯದ ಹಲವಾರು ಭಾಗಗಳಲ್ಲಿ ಕಾಂಗ್ರೆಸ್ ಸರಕಾರ ಎಸ್‌ಐಆರ್ ಪ್ರಕ್ರಿಯೆಯನ್ನು ಹಾಳುಮಾಡಲು ಹೊರಟಿದೆ. ಆದಕ್ಕೆ ರಾಮನಗರ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮವೇ ಸಾಕ್ಷಿ. ಕೂಡಲೇ ರಾಮನಗರ ಜಿಲ್ಲಾಧಿಕಾರಿಯನ್ನು ಅಮಾನತು ಮಾಡಬೇಕು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಕರ್ತವ್ಯ ಲೋಪ ಎಸಗಿರುವ ಎಲ್ಲಾ ಅಧಿಕಾರಿಗಳನ್ನು ಮನೆಗೆ ಕಳಿಸಬೇಕು,'' ಎಂದು ಒತ್ತಾಯಿಸಿದರು.

''ನಿಯಮಾನುಸಾರ ಬಿಎಲ್‌ಒಗಳು ಮನೆಮನೆಗೆ ಹೋಗಬೇಕು. ಆದರೆ ರಾಮನಗರದಲ್ಲಿ ಸಿಎಂ ಪ್ರಭಾವ ಬಳಸಿ ಸಾವಿರಾರು ಜನರನ್ನು ಟಿಪ್ಪುನಗರದ ಕಲ್ಯಾಣ ಮಂಟಪದಲ್ಲಿ ಕೂರಿಸಿ ಎಸ್‌ಐಆರ್ ಜಾತ್ರೆ ನಡೆಸುತ್ತಿದ್ದಾರೆ. ದೇಶದ ಭದ್ರತೆಗೆ ಸವಾಲಾಗಿರುವ ಬಾಂಗ್ಲಾ ನುಸುಳುಕೋರರನ್ನು ಇಲ್ಲಿ ಪೋಷಿಸಿ, ಅವರಿಗೆ ಮತದಾನದ ಹಕ್ಕು ಕೊಡಿಸುವ ವ್ಯವಸ್ಥಿತ ಸಂಚು ನಡೆಸಲಾಗಿದೆ,'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಬ್ಲಾಕ್‌ಮೇಲ್: ''ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಮುಖ್ಯಮಂತ್ರಿಗಳ ಮನೆಯಿಂದಲೇ ಶುರುವಾಯಿತು. ಪಾರದರ್ಶಕವಾಗಿ ಈ ಪ್ರಕ್ರಿಯೆ ನಡೆಯಬೇಕೆಂದು ಜನತೆಗೆ ಕರೆ ಕೊಡುವ ಬದಲಿಗೆ ಮತಪಲ್ಲಿದ್ದರೆ ಯಾವ ಸೌಲಭ್ಯವೂ ಸಿಗುವುದಿಲ್ಲ ಎಂದು ಬ್ಲಾಕ್‌ಮೇಲ್ ಮಾಡಬಾರದು. ಇಂತಹ ಕೆಲಸವನ್ನು ಮುಖ್ಯಮಂತ್ರಿಗಳು ಮಾಡಿದ್ದು ಸರಿಯಲ್ಲ,'' ಎಂದು ಕುಟುಕಿದರು.

''ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸುತ್ತಿರುವ ಈ ಅಕ್ರಮವನ್ನು ಸುಮ್ಮನೆ ಬಿಡುವುದಿಲ್ಲ. ವಿಡಿಯೊಸಮೇತ ಎಲ್ಲಾ ಸಾಕ್ಷ್ಯಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕೇಂದ್ರ ಚುನಾವಣಾ ಆಯೋಗಕ್ಕೆ ನೀಡುತ್ತೇನೆ,'' ಎಂದು ಎಚ್ಚರಿಕೆ ನೀಡಿದರು.

ಸದ್ಯ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ ಕಡಿಮೆಯಾದ ರೀತಿಯಲ್ಲೇ ಡೀಸೆಲ್ ದರವೂ ಕಡಿಮೆಯಾಗುತ್ತಿದೆ. ಹಾಗಾಗಿ ರಾಜ್ಯ ಸರಕಾರ ಬಸ್ ಪ್ರಯಾಣ ದರ ಇಳಿಕೆ ಮಾಡಲಿ.

-ಎಚ್.ಡಿ.ಕುಮಾರಸ್ವಾಮಿ

ಗ್ಯಾರಂಟಿಗೇಕೆ ಜಾತಿ ನಂಟು?: ಜಾತಿಯ ಹೆಸರಿನಲ್ಲಿ ಗ್ಯಾರಂಟಿ ಫಲಾನುಭವಿಗಳನ್ನು ತೆಗೆದು ಹಾಕುತ್ತಿರುವುದನ್ನು ಸಹಿಸಲಾಗದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಸಮಾಧಾನ ಹೊರಹಾಕಿದ್ದಾರೆ.

ಜೆಡಿಎಸ್ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ''ನಾನು ಎಂದೂ ಜಾತಿ ಹೆಸರಲ್ಲಿ ರಾಜಕೀಯ ಮಾಡಿದವನಲ್ಲ, ಕಷ್ಟ ಎಂದು ನನ್ನ ಮನೆಗೆ ಬರುವ ಯಾರನ್ನೂ ಜಾತಿ ಕೇಳಲ್ಲ, ಕಷ್ಟ-ಸುಖವನ್ನಷ್ಟೇ ಕೇಳಿ ಸಹಾಯ ಮಾಡುತ್ತೇನೆ. ಆದರೆ ಈ ಸರಕಾರ ಗ್ಯಾರಂಟಿ ಪರಿಷ್ಕರಣೆಗೆ ಜಾತಿಯನ್ನು ಎಳೆದು ತಂದಿರುವುದು ಖಂಡನೀಯ,'' ಎಂದರು.

''ಗ್ಯಾರಂಟಿ ಸೌಲಭ್ಯಗಳನ್ನು ಕೊಡಲು ಜಾತಿ ಯಾಕೆ ಬೇಕು? ಮಹದೇವಪ್ಪ ನಿನಗೂ ಫ್ರೀ, ಕಾಕಾ ಪಾಟೀಲ್ ನಿನಗೂ ಫ್ರೀ ಎಂದವರು ಈಗ ಜಾತಿ ಹೆಸರಿನಲ್ಲಿ ಗ್ಯಾರಂಟಿ ಸೌಲಭ್ಯವನ್ನು ಕಿತ್ತುಕೊಳ್ಳುತ್ತಿದ್ದಾರೆ. ಅರ್ಜಿಯಲ್ಲಿ ಜಾತಿ ಕಲಂ ಏಕೆ ಬೇಕು? ಗ್ಯಾರಂಟಿ ಯೋಜನೆಗೆ ಹಿಂದೂ ಎಂದು ಬರೆದರೆ ಸಾಕಲ್ಲವೇ? 2028ಕ್ಕೆ ಜನರ ನಡುವೆ ಜಾತಿ ಹೆಸರಿನಲ್ಲಿ ಒಡಕು ಸೃಷ್ಟಿಸಿ ಅಧಿಕಾರಕ್ಕೆ ಬರಲು ಇವರು ಗ್ಯಾರಂಟಿಗಳನ್ನು ಬಳಸಿಕೊಳ್ಳುವ ಸಂಚು ನಡೆಸಿದ್ದಾರೆ,'' ಎಂದು ಆರೋಪಿಸಿದರು.

ರಿಸರ್ವ್ ಬ್ಯಾಂಕ್ ಇನ್ನೋವೇಶನ್ ಹಬ್

CIN: U72900KA2021NPL178293

ರಿಸರ್ವ್ ಬ್ಯಾಂಕ್ ಇನ್ನೋವೇಶನ್ ಹಬ್, ನಂ.8, ವಿಟ್ಟಲ್ ಮಲ್ಯ ರಸ್ತೆ, ಬೆಂಗಳೂರು-560001 ಇಲ್ಲಿರುವ ತನ್ನ ಕಚೇರಿಯಲ್ಲಿ ಸಿವಿಲ್, ಒಳಾಂಗಣ, ವಿದ್ಯುತ್ ಮತ್ತು ಸಂಬಂಧಿತ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ, ಸಮರ್ಥ ಮತ್ತು ಅನುಭವಸ್ಥ ಗುತ್ತಿಗೆದಾರರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಆಸಕ್ತ ವ್ಯಕ್ತಿಗಳು ವಿಸ್ತೃತ ವಿವರಗಳು ಮತ್ತು ಅರ್ಹತಾ ಮಾನದಂಡಗಳನ್ನು https://rbihub.in/resources ನಲ್ಲಿ ಕಾಣಬಹುದು. ಸಕಾಲದಲ್ಲಿ ಪೂರ್ಣಗೊಳಿಸಿದ ಪ್ರಸ್ತಾವನೆಗಳನ್ನು 17ನೇ ಜುಲೈ, 2026ರಂದು ಸಂಜೆ 4.00 ಗಂಟೆಗೆ ಅಥವಾ ಅದಕ್ಕೂ ಮೊದಲು ಸಲ್ಲಿಸಬೇಕು.

ಸಮರೋಪಾದಿ ಪರಿಹಾರಕ್ಕೆ ಆಗ್ರಹ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಬರ ಪರಿಸ್ಥಿತಿ ನಿರ್ವಹಣೆಗಾಗಿ ರಾಜ್ಯ ಸರಕಾರ ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಗುರುವಾರ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ. ಮುಂಗಾರು ಮಳೆ ತೀವ್ರ ಕೊರತೆಯಿಂದಾಗಿ ಹಲವೆಡೆ ರೈತರು, ಕೃಷಿ ಕಾರ್ಮಿಕರು, ಗ್ರಾಮೀಣ ಜನ ಸಂಕಷ್ಟದಲ್ಲಿದ್ದಾರೆ. ಸದ್ಯದ ಮಾಹಿತಿಯಂತೆ 150ಕ್ಕೂ ಹೆಚ್ಚು ತಾಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿದ್ದು, ಹಲವೆಡೆ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿದೆ. ಈಗಾಗಲೇ ಬಿತ್ತನೆಯಾದ ಬೆಳೆಗಳು ತೇವಾಂಶದ ಕೊರತೆಯಿಂದ ಒಣಗುವ ಸ್ಥಿತಿಗೆ ತಲುಪಿದೆ. ಇದು ಕೃಷಿ ಉತ್ಪಾದನೆ ಹಾಗೂ ಉದ್ಯೋಗದ ಮೇಲೆ ನೇರ ಪರಿಣಾಮ ಬೀರುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಬರಪೀಡಿತ ಪ್ರದೇಶಗಳ ಘೋಷಣೆ ವಿಳಂಬವಾದರೆ ರೈತರಿಗೆ ಪರಿಹಾರ, ಬೆಳೆಹಾನಿ ಸಮೀಕ್ಷೆ, ಜಾನುವಾರುಗಳಿಗೆ ಮೇವು, ಕುಡಿಯುವ ನೀರು, ಕೇಂದ್ರದಿಂದ ಪಡೆಯಬೇಕಾದ ನೆರವು ಇತರೆ ಪ್ರಕ್ರಿಯೆಗಳು ತಡವಾಗುತ್ತವೆ. ಬರ ಎಂದರೆ ಯಾವುದೇ ಪಕ್ಷದ ಸಮಸ್ಯೆಯಲ್ಲ, ಅದು ರಾಜ್ಯದ ಸಮಸ್ಯೆ. ರೈತರ ಬದುಕು, ಗ್ರಾಮೀಣ ಆರ್ಥಿಕತೆಯ ಪ್ರಶ್ನೆಯಲ್ಲಿ ರಾಜಕೀಯಕ್ಕಿಂತ ಜನಹಿತವೇ ಮುಖ್ಯವಾಗಬೇಕು. ಈಗಲಾದರೂ ಪರಿಸ್ಥಿತಿ ಗಂಭೀರತೆ ಅರ್ಥ ಮಾಡಿಕೊಂಡು ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಅಶೋಕ್ ಕೋರಿದ್ದಾರೆ.

ಒತ್ತಾಯದ ಇತರೆ ಪ್ರಮುಖಾಂಶಗಳು

- ಜಿಲ್ಲಾ-ತಾಲೂಕುವಾರು ವಾಸ್ತವಾಂಶ ಪರಿಶೀಲಿಸಿ ತಕ್ಷಣ ಬರಪೀಡಿತ ಪ್ರದೇಶಗಳನ್ನು ಘೋಷಿಸಬೇಕು
- ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು, ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾವಾರು ಬರ ಪರಿಶೀಲನಾ ಸಭೆ ನಡೆಸುವಂತೆ ಸೂಚಿಸಿ, ಪ್ರತಿ ವಾರ ಪ್ರಗತಿ ಪರಿಶೀಲಿಸಬೇಕು
- ರಾಜ್ಯವ್ಯಾಪಿ ತುರ್ತು ಪರಿಸ್ಥಿತಿಯ ಯೋಜನೆ ಪ್ರಕಟಿಸಿ ಪರ್ಯಾಯ ಬೆಳೆ, ಬಿತ್ತನೆ ಸಲಹೆ, ಬೀಜ, ಮೇವು, ಜಾನುವಾರು ಸಂರಕ್ಷಣೆ, ಕುಡಿಯುವ ನೀರು, ತುರ್ತು ಉದ್ಯೋಗ ಸೃಷ್ಟಿಗೆ ಸಮಗ್ರ ಕಾರ್ಯಯೋಜನೆ ರೂಪಿಸಬೇಕು
- ವಿಬಿ ಜಿರಾಮ್‌ಜಿ ಯೋಜನೆ ಜಾರಿಗೊಳಿಸಿ ತಕ್ಷಣ ಕಾಮಗಾರಿ ಗಳನ್ನು ಆರಂಭಿಸಿ ಕೃಷಿ ಕಾರ್ಮಿಕರ ವಲಸೆ ನಿಯಂತ್ರಿಸಬೇಕು
- ಕುಡಿಯುವ ನೀರಿನ ಬಿಕ್ಕಟ್ಟು ಎದುರಾಗುವ ಗ್ರಾಮಗಳನ್ನು ಗುರುತಿಸಿ, ಟ್ಯಾಂಕರ್, ಬೋರ್‌ವೆಲ್ ಪುನಶ್ಚೇತನ, ಪರ್ಯಾಯ ನೀರು ಪೂರೈಕೆ ಮತ್ತು ಬಹುಗ್ರಾಮ ಕುಡಿವ ನೀರಿನ ಯೋಜನೆಗಳಿಗೆ ತುರ್ತಾಗಿ ಅನುದಾನ ನೀಡಬೇಕು
- ಬೆಳೆಹಾನಿಯ ವೈಜ್ಞಾನಿಕ ಸಮೀಕ್ಷೆ ಆರಂಭಿಸಿ, ರೈತರಿಗೆ ಮಧ್ಯಂತರ ಪರಿಹಾರ, ಬೆಳೆ ವಿಮೆ ಹಾಗೂ ಅಗತ್ಯ ಕೃಷಿ ಸಾಧನಗಳ ನೆರವನ್ನು ವಿಳಂಬವಿಲ್ಲದೆ ಒದಗಿಸಬೇಕು
- ಕೃಷಿ ಇಲಾಖೆಗೆ ತಕ್ಷಣ ಪೂರ್ಣಾವಧಿ ಕೃಷಿ ಸಚಿವರನ್ನು ನೇಮಿಸಿ, ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಾಜ್ಯಮಟ್ಟದ ವಿಶೇಷ ಬರ ನಿರ್ವಹಣಾ ಕಾರ್ಯಪಡೆ ರಚಿಸಬೇಕು.
- ಕೇಂದ್ರದ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಸಿದ್ಧಪಡಿಸಿ, ರಾಜ್ಯಕ್ಕೆ ಸಿಗಬೇಕಾದ ಎಲ್ಲ ನೆರವು, ಪರಿಹಾರ ಪಡೆಯಲು ತುರ್ತು ಕ್ರಮ ವಹಿಸಬೇಕು.

ಶಾಲಾ ಸಮಯದಲ್ಲಿ ಅಲೆದಾಟಕ್ಕೆ ಬ್ರೇಕ್

ಬೆಂಗಳೂರು: ಸರಕಾರಿ ಶಾಲೆಗಳಲ್ಲಿ ಶಾಲಾ ಅವಧಿಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಶಾಲೆ ಬಿಟ್ಟು ಹೊರಗೆ ಹೋಗಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಮಹೇಶ್ ಸುತ್ತೋಲೆ ಹೊರಡಿಸಿದ್ದಾರೆ.

ಶಾಲೆಗಳಲ್ಲಿ ಕಲಿಕೆಗೆ ತೊಡಕಾಗದಂತೆ ಕ್ರಮ ವಹಿಸಲು ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಕ್ರಮ ವಹಿಸುವಂತೆ ಅವರು ಸೂಚಿಸಿದ್ದಾರೆ. ಶಾಲೆ ಅವಧಿಯಲ್ಲಿ ಶಿಕ್ಷಕರು ಅಥವಾ ಮುಖ್ಯ ಶಿಕ್ಷಕರನ್ನು ಯಾವುದೇ ತರಬೇತಿ, ಕಾರ್ಯಾಗಾರ, ಸಭೆ ಅಥವಾ ಇತರೆ ಚಟುವಟಿಕೆಗಳಿಗೆ ಒಓಡಿ ಅಥವಾ ಲಿಖಿತ ಆದೇಶಗಳ ಮೂಲಕ ಕಳುಹಿಸಬಾರದು. ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿ.ಪಂ ಸಿಇಒಗಳು ಕೂಡ ಇದಕ್ಕೆ ನಿರ್ದೇಶನ ನೀಡಬಾರದು ಎಂದು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಅಲ್ಲದೆ, ಶಾಲಾ ಸಮಯದಲ್ಲಿ ಯಾವುದೇ ಸಭೆ, ವಿಡಿಯೊ ಕಾನ್ಫರೆನ್ಸ್ ಮಾಡಬಾರದು ಹಾಗೂ ಶಾಲೆಗಳಿಗೆ ಭೇಟಿ ನೀಡುವ ಅಧಿಕಾರಿಗಳು ತರಗತಿಗಳಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಸರಕಾರಿ ಶಾಲೆಯ ವಿದ್ಯಾರ್ಥಿಗಳು ಶಾಲೆಯ ಹೊರಗಡೆ ನಡೆಯುವ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಭಾಗಿಯಾಗಲು ಅನುಮತಿ ನೀಡಬಾರದು. ಜತೆಗೆ, ಶಾಲಾ ದಿನಗಳಲ್ಲಿ ಯಾವುದೇ ಹೊರಗಿನ ಪರೀಕ್ಷೆ ನಡೆಸಬಾರದು ಎಂದು ಸೂಚಿಸಲಾಗಿದೆ. ಜಿಲ್ಲಾ ಉಪನಿರ್ದೇಶಕರು, ಡಯಟ್ ಪ್ರಾಂಶುಪಾಲರು, ಶಾಲಾ ಮುಖ್ಯ ಶಿಕ್ಷಕರು ಇಲಾಖೆಯ ಯಾವುದೇ ಮಟ್ಟದ ಅಧಿಕಾರಿ, ಖಾಸಗಿ ಸಂಸ್ಥೆಯ ಪಾಲುದಾರರಲ್ಲಿ ಡೇಟಾ ಎಂಟ್ರಿ ಮಾಡುವಂತೆ ಮೌಖಿಕ ಅಥವಾ ಲಿಖಿತ ಆದೇಶ ನೀಡಬಾರದು. ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ನಿಗಾ: ಗ್ಯಾರಂಟಿ ಸಮಿತಿಗಳಿಗೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಸಕ್ರಿಯರಾಗಿ ಪಾಲ್ಗೊಂಡು ಮತದಾರರು ಮತ್ತು ಬಿಎಲ್‌ಒಗಳಿಗೆ ನೆರವಾಗಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ. 18 ವರ್ಷ ಪೂರ್ಣಗೊಂಡ ಯುವಜನತೆ ಮತದಾರರ ಪಟ್ಟಿಗೆ ಹೆಸರು ಸೇರಿಸಿಕೊಳ್ಳುವಂತೆ ಹಾಗೂ ಈಗಾಗಲೇ ಪಟ್ಟಿಯಲ್ಲಿ ಇರುವವರು ತಮ್ಮ ಹೆಸರು, ವಿಳಾಸ, ಇತರೆ ವಿವರಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ತಿದ್ದುಪಡಿ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಬೇಕು ಎಂದು ಸೂಚಿಸಿದ್ದಾರೆ.

ಹೆಚ್ಚುವರಿ ಹೊಣೆ: ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಎಂ.ಎನ್.ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಗಳನ್ನು ದಿನೇಶ್ ಗೂಳಿಗೌಡ ಅವರಿಗೆ ಹೆಚ್ಚುವರಿ ವಹಿಸಿ ಸರಕಾರ ಆದೇಶ ಹೊರಡಿಸಿದೆ.

ನೀರಿಗಾಗಿ ₹ 117 ಕೋಟಿ ಬಿಡುಗಡೆ

ಬೆಂಗಳೂರು: ಎಲ್‌ನಿನೊ ಪ್ರಭಾವದಿಂದ ರಾಜ್ಯದಲ್ಲಿ ಮಳೆ ಕೊರತೆಯಾಗಿದ್ದು, ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ತಡೆಯಲು ಮುಂಗಡವಾಗಿ 117 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ವಿಕಾಸಸೌಧದಲ್ಲಿ ಗುರುವಾರ ಮಾತನಾಡಿದ ಅವರು, ''ಈಗಾಗಲೇ 85 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆ ರೂಪಿಸಲಾಗಿದೆ. 30 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಸಮಸ್ಯೆಯಿರುವ ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ. ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಂಡರೆ 24 ಗಂಟೆಯೊಳಗೆ ಪರಿಹರಿಸುವಂತೆ ಸೂಚಿಸಲಾಗಿದೆ. ಖಾಸಗಿ ತೆರೆದ ಬಾವಿ, ಬೋರ್‌ವೆಲ್‌ಗಳಿಂದ ನೀರು ಪಡೆದು ಟ್ಯಾಂಕರ್‌ನಲ್ಲಿ ಪೂರೈಸಲಾಗುತ್ತಿದ್ದು, ಅಗತ್ಯವಿರುವ ಕಡೆಯಷ್ಟೇ ಕೊಳವೆ ಬಾವಿ ಕೊರೆಸಲಾಗುತ್ತಿದೆ,'' ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಮುಖಂಡನ ಉಚ್ಚಾಟನೆ

ಬೆಂಗಳೂರು: ಪಕ್ಷ ವಿರೋಧಿ ಹಾಗೂ ಪಕ್ಷದ ನಾಯಕರ ವಿರುದ್ಧ ಹೇಳಿಕೆ ನೀಡಿ ಮುಜುಗರ ಉಂಟು ಮಾಡಿರುವ ಕಾರಣಕ್ಕೆ ಬೆಂಗಳೂರು ಉತ್ತರ ಜಿಲ್ಲೆ ಮುಖಂಡ ಸತೀಶ್ ಕಡತನಮಲೆ ಅವರನ್ನು 6 ವರ್ಷ ಕಾಲ ಬಿಜೆಪಿಯಿಂದ ಉಚ್ಚಾಟಿಸಲಾಗಿದೆ. ಸ್ಥಳೀಯಮುಖಂಡರ ದೂರುಗಳ ಸಂಬಂಧ ನೀಡಿರುವ ಸ್ಪಷ್ಟೀಕರಣ ಸಮಾಧಾನಕರವಾಗಿಲ್ಲದ ಕಾರಣ ಆರು ವರ್ಷ ಕಾಲ ಸತೀಶ್ ಕಡತನಮಲೆ ಅವರನ್ನು ಪಕ್ಷದಿಂದ ಉಚ್ಚಾಟಿಸಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ್ ಆದೇಶಿಸಿದ್ದಾರೆ.

ಭೇಟಿ ಕಡ್ಡಾಯ

» ಮೊದಲ ಪುಟದಿಂದ

ಕುಮಾರಸ್ವಾಮಿ ಅವರು ರಾಮನಗರದ ಘಟನೆಯನ್ನು ಉಲ್ಲೇಖಿಸಿ ಸರಕಾರ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ''ಜಯನಗರದಲ್ಲಿ ಬಿಜೆಪಿ ಶಾಸಕರೇ ಇಂತಹ ಕೆಲಸ ಮಾಡಿದ್ದಾರೆ. ಪ್ರತಿಪಕ್ಷದವರು ಇರುವುದೇ ಆರೋಪ ಮಾಡುವುದಕ್ಕಾಗಿ. ಆದರೆ, ನಾವು ಜನರ ಸೇವೆಯನ್ನು ಮಾಡುತ್ತೇವೆ,'' ಎಂದರು.

''ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಕಾಪಾಡುವುದು ನಮ್ಮ ಸರಕಾರದ ಜವಾಬ್ದಾರಿ. ಹಾಗಾಗಿ ಪ್ರತಿ ವಾರ್ಡ್ ಹಾಗೂ ಬೂತ್‌ನಲ್ಲಿ ಸಹಾಯ ಕೇಂದ್ರ ಸ್ಥಾಪಿಸಲಾಗುತ್ತಿದೆ'' ಎಂದು ತಿಳಿಸಿದರು.

ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್, ಕೊಚ್ಚಿ ಪೀಠದ ಸಮ್ಮುಖದಲ್ಲಿ

CP(CAA)/3/(KOB)2026

In

CA(CAA)/2/KOB/2026

ಏಸ್ಥಟಿಕ್ ಗೋಲ್ಡ್ ಆರ್ನಮೆಂಟ್ಸ್ ಪ್ರೈವೇಟ್ ಲಿಮಿಟೆಡ್ CIN:U36911KL2009PTC024370 ವರ್ಗಾವಣೆ ಕಂಪನಿ ಸಂ:1	ಮಲಬಾರ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್, CIN:U51398KL2003PTC016458 ವರ್ಗಾವಣೆ ಕಂಪನಿ ಸಂ. 14	ಮಲಬಾರ್ ಆರ್ನಮೆಂಟ್ಸ್ ಪ್ರೈವೇಟ್ ಲಿಮಿಟೆಡ್ CIN:51398KL2003PTC016237 ವರ್ಗಾವಣೆ ಕಂಪನಿ ಸಂ.27	ಪ್ರಾಸ್ಪರ್ ಜ್ಯುವೆಲ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್ CIN:U47733KL2024PTC090980 ವರ್ಗಾವಣೆ ಕಂಪನಿ ಸಂ.40
ಅಲ್-ಅಹಲಿ ಬ್ಯುಸಿನೆಸ್ ಟ್ರೇಡ್ ಲಿಂಕ್ಸ್ ಪ್ರೈವೇಟ್ ಲಿಮಿಟೆಡ್ CIN:U36911KL1997PTC011338 ವರ್ಗಾವಣೆ ಕಂಪನಿ ಸಂ:2	ಮಲಬಾರ್ ಕ್ರಿಯೇಶನ್ಸ್ ಪ್ರೈವೇಟ್ ಲಿಮಿಟೆಡ್ CIN: U51398KL2004PTC017157 ವರ್ಗಾವಣೆ ಕಂಪನಿ ಸಂ.15	ಮಲಬಾರ್ ಪ್ಯಾಕೇಜಿಂಗ್ ಪ್ರೈವೇಟ್ ಲಿಮಿಟೆಡ್ CIN: U74999KL2021PTC072010 ವರ್ಗಾವಣೆ ಕಂಪನಿ ಸಂ.28	ರಿಚಸ್ ಜ್ಯುವೆಲ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್ CIN: U47733KL2024PTC089169 ವರ್ಗಾವಣೆ ಕಂಪನಿ ಸಂ.41
ಬ್ಲೇಜ್ ಗೋಲ್ಡ್ ಜ್ಯುವೆಲ್ಸ್ ಪ್ರೈವೇಟ್ ಲಿಮಿಟೆಡ್ CIN:36911KL2009PTC024369 ವರ್ಗಾವಣೆ ಕಂಪನಿ ಸಂ.3	ಮಲಬಾರ್ ಕ್ರಿಸ್ಟಲ್ಸ್ ಅಂಡ್ ಡೈಮಂಡ್ಸ್ ಪ್ರೈವೇಟ್ ಲಿಮಿಟೆಡ್, CIN:U52393KL2006PTC019273 ವರ್ಗಾವಣೆ ಕಂಪನಿ ಸಂ.16	ಮಲಬಾರ್ ಪ್ರೆಸಿಯಸ್ ಜ್ಯುವೆಲ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ CIN:52393KL2006PTC019223 ವರ್ಗಾವಣೆ ಕಂಪನಿ ಸಂ.29	ಶೀನ್ ಗೋಲ್ಡನ್ ಜ್ಯುವೆಲ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ CIN:36911KL2009PTC024368 ವರ್ಗಾವಣೆ ಕಂಪನಿ ಸಂ.42
ಬ್ಲಾಸಂ ಗೋಲ್ಡ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್ CIN:U52393KL2009PTC024506 ವರ್ಗಾವಣೆ ಕಂಪನಿ ಸಂ.4	ಮಲಬಾರ್ ಡ್ಯಾಝಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ CIN:U52393KL2007PTC020264 ವರ್ಗಾವಣೆ ಕಂಪನಿ ಸಂ.17	ಮಲಬಾರ್ ರೆತ್ನಾ ಮಹಲ್ ಪ್ರೈವೇಟ್ ಲಿಮಿಟೆಡ್ CIN: U52393KL2006PTC019295 ವರ್ಗಾವಣೆ ಕಂಪನಿ ಸಂ.30	ಸ್ಪಾರ್ಕಲ್ ಗೋಲ್ಡ್ ರೀಟೇಲ್ ವೆಂಚರ್ಸ್ ಲಿಮಿಟೆಡ್ CIN:47733KL2025PLC096457 ವರ್ಗಾವಣೆ ಕಂಪನಿ ಸಂ.43
ಎಕೋಮೇಟ್ ಪ್ಯಾಕೇಜಿಂಗ್ ಪ್ರೈವೇಟ್ ಲಿಮಿಟೆಡ್, CIN: U82920KL2024PTC090890 ವರ್ಗಾವಣೆ ಕಂಪನಿ ಸಂ.5	ಮಲಬಾರ್ ಡೈಮಂಡ್ ಗ್ಯಾಲರಿ ಪ್ರೈವೇಟ್ ಲಿಮಿಟೆಡ್ CIN:U52393KL2006PTC019952 ವರ್ಗಾವಣೆ ಕಂಪನಿ ಸಂ. 18	ಮಲಬಾರ್ ರಾಯಲ್ ಡಿಸೈನ್ಸ್ (ಹೈದ್ರಾಬಾದ್) ಪ್ರೈವೇಟ್ ಲಿಮಿಟೆಡ್ CIN: U52393KL2005PTC018793 ವರ್ಗಾವಣೆ ಕಂಪನಿ ಸಂ.31	ಸ್ಪ್ಲೆಂಡರ್ ಗೋಲ್ಡ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್ CIN: U47733KL2024PTC091224 ವರ್ಗಾವಣೆ ಕಂಪನಿ ಸಂ.44
ಎಮರಾಲ್ಡ್ ಗೋಲ್ಡ್ ಸೋಕ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, CIN: U52393KL2009PTC023863 ವರ್ಗಾವಣೆ ಕಂಪನಿ ಸಂ.6	ಮಲಬಾರ್ ಇಕ್ವಿಪ್ ಮೆಂಟ್ಸ್ ಅಂಡ್ ಜನರಲ್ ಟ್ರೇಡರ್ಸ್ ಪ್ರೈವೇಟ್ ಲಿಮಿಟೆಡ್ CIN:U52599KL2006PTC020129 ವರ್ಗಾವಣೆ ಕಂಪನಿ ಸಂ.19	ಮಲಬಾರ್ ರೂಬಿ ಪ್ರೈವೇಟ್ ಲಿಮಿಟೆಡ್ CIN: U52393KL2007PTC020142 ವರ್ಗಾವಣೆ ಕಂಪನಿ ಸಂ.32	ಸ್ವರ್ಣ ಕಮಲ್ ಜ್ಯುವೆಲ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ CIN:52393KL2008PTC022562 ವರ್ಗಾವಣೆ ಕಂಪನಿ ಸಂ.45
ಎಮಿನೆಂಟ್ ಜ್ಯುವೆಲ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್, CIN: U51398KL2010PTC026078 ವರ್ಗಾವಣೆ ಕಂಪನಿ. 7	ಮಲಬಾರ್ ಗೋಲ್ಡ್ ಜ್ಯುವೆಲ್ಸ್ (ತಿರೂರು) ಪ್ರೈವೇಟ್ ಲಿಮಿಟೆಡ್ CIN: U52393KL2005PTC018333 ವರ್ಗಾವಣೆ ಕಂಪನಿ ಸಂ.20	ಎಂಬಿಎಂಜಿ ಡೈಮಂಡ್ಸ್ ಪ್ರೈವೇಟ್ ಲಿಮಿಟೆಡ್ CIN: U36911KL2008PTC022587 ವರ್ಗಾವಣೆ ಕಂಪನಿ ಸಂ.33	ಥಾಸ್ ಡಿಸ್ - ಪ್ಲೇಸ್ ಪ್ರೈವೇಟ್ ಲಿಮಿಟೆಡ್ CIN: U23933KL2024PTC090845 ವರ್ಗಾವಣೆ ಕಂಪನಿ ಸಂ.46
ಫೋರ್ಟ್-ಇನ್ ಫ್ರಾ ಗೋಲ್ಡ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್ CIN:47733KL2024PTC089168. ವರ್ಗಾವಣೆ ಕಂಪನಿ ಸಂ.8	ಮಲಬಾರ್ ಗೋಲ್ಡ್ ಪ್ಯಾಲೇಸ್ ಪ್ರೈವೇಟ್ ಲಿಮಿಟೆಡ್ CIN:U52393KL2005PTC018265; ವರ್ಗಾವಣೆ ಕಂಪನಿ ಸಂ.21	ಎಂಜಿ ಪ್ರೆಸಿಯಸ್ ಸ್ಟೋನ್ ಟ್ರೇಡಿಂಗ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ CIN:U51398KL2008PTC022577 ವರ್ಗಾವಣೆ ಕಂಪನಿ ಸಂ.34	ಟಿಎನ್ ತಂಗಮಾಲಿಗೈ ಪ್ರೈವೇಟ್ ಲಿಮಿಟೆಡ್ CIN: U47733KL2024PTC089208 ವರ್ಗಾವಣೆ ಕಂಪನಿ ಸಂ.47
ಗೆಹಾನಾ ಗೋಲ್ಡ್ ಪ್ಯಾಲೇಸ್ ಪ್ರೈವೇಟ್ ಲಿಮಿಟೆಡ್, CIN: U51398KL2007PTC020985 ವರ್ಗಾವಣೆ ಕಂಪನಿ ಸಂ. 9	ಮಲಬಾರ್ ಗೋಲ್ಡ್ ಸೂಪರ್ ಮಾರ್ಕೆಟ್ (ಕಣ್ಣೂರು) ಪ್ರೈವೇಟ್ ಲಿಮಿಟೆಡ್ CIN: U36911KL2005PTC018335 ವರ್ಗಾವನೆ ಕಂಪನಿ ಸಂ.22	ಎಂಜಿಡಿ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ CIN: U51909KL2012PTC030985 ವರ್ಗಾವಣೆ ಕಂಪನಿ ಸಂ.35	ತ್ರಾವಂಕೂರ್ ಗೋಲ್ಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ CIN: U52393KL2008PTC022607 ವರ್ಗಾವಣೆ ಕಂಪನಿ ಸಂ.48
ಗ್ಲಿಸ್ಟೆನ್ ಗೋಲ್ಡ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್ CIN: U52393KL2008PTC022635 ವರ್ಗಾವಣೆ ಕಂಪನಿ ಸಂ. 10	ಮಲಬಾರ್ ಇಂಟರ್ ನ್ಯಾಷನಲ್ ಗೋಲ್ಡ್ ಡಿಸೈನ್ಸ್ ಪ್ರೈವೇಟ್ ಲಿಮಿಟೆಡ್ CIN: U52393KL2006PTC019222 ವರ್ಗಾವಣೆ ಕಂಪನಿ ಸಂ.23	ನಾರ್ತರ್ನ್ ಗೋಲ್ಡ್ ಕಲೆಕ್ಷನ್ಸ್ ಪ್ರೈವೇಟ್ ಲಿಮಿಟೆಡ್ CIN: U47733KL2024PTC089167 ವರ್ಗಾವಣೆ ಕಂಪನಿ ಸಂ.36	ಯೂನಿಫೈ ರೀಟೇಲ್ ವೆಂಚರ್ಸ್ ಲಿಮಿಟೆಡ್ CIN: U46498KL2025PLC092747 ವರ್ಗಾವಣೆ ಕಂಪನಿ ಸಂ.49
ಲಸ್ಟರ್ ಗೋಲ್ಡ್ ಪ್ಯಾಲೇಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, CIN: U52393KL2007PTC021369 ವರ್ಗಾವಣೆ ಕಂಪನಿ ಸಂ.11	ಮಲಬಾರ್ ಜ್ಯುವೆಲ್ಸ್ ಅಂಡ್ ಜೆಮ್ಸ್ ಪ್ರೈವೇಟ್ ಲಿಮಿಟೆಡ್ CIN: U51398KL2003PTC016082 ವರ್ಗಾವಣೆ ಕಂಪನಿ ಸಂ.24	ಪಳಕಿಯಲ್ ಗೋಲ್ಡ್ ಆರ್ನಮೆಂಟ್ಸ್ ಪ್ರೈವೇಟ್ ಲಿಮಿಟೆಡ್ CIN: U51398KL2010PTC025426 ವರ್ಗಾವಣೆ ಕಂಪನಿ ಸಂ.37	ಯೂನಿಟಿ ಜ್ಯುವೆಲ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್ CIN: U51398KL2010PTC026164 ವರ್ಗಾವಣೆ ಕಂಪನಿ ಸಂ.50
ಮಲಬಾರ್ ಬ್ಯುಸಿನೆಸ್ ಸೆಂಟರ್ ಪ್ರೈವೇಟ್ ಲಿಮಿಟೆಡ್, CIN: U70101KL1958PTC001812 ವರ್ಗಾವಣೆ ಕಂಪನಿ ಸಂ. 12	ಮಲಬಾರ್ ಕೋಡುಂಗಲ್ಲೂರು ಸೋನಾ ಬಜಾರ್ ಪ್ರೈವೇಟ್ ಲಿಮಿಟೆಡ್ CIN: U52393KL2007PTC020906 ವರ್ಗಾವಣೆ ಕಂಪನಿ ಸಂ. 25	ಪ್ಲಾಟಿನಾ ಗೋಲ್ಡ್ ಆರ್ನಮೆಂಟ್ಸ್ ಪ್ರೈವೇಟ್ ಲಿಮಿಟೆಡ್ CIN: U52393KL2008PTC022493 ವರ್ಗಾವಣೆ ಕಂಪನಿ ಸಂ.38	ವಜ್ರ ಕ್ರಿಯೇಶನ್ಸ್ ಪ್ರೈವೇಟ್ ಲಿಮಿಟೆಡ್ CIN: U52393KL2007PTC021037 ವರ್ಗಾವಣೆ ಕಂಪನಿ ಸಂ.51
ಮಲಬಾರ್ ಕೊಚಿನ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್, CIN:U45202KL2007PTC020490 ವರ್ಗಾವಣೆ ಕಂಪನಿ ಸಂ. 13	ಮಲಬಾರ್ ಮಂಗಳೂರು ಆರ್ಕೇಡ್ ಪ್ರೈವೇಟ್ ಲಿಮಿಟೆಡ್ CIN: U45202KL2005PTC018334; ವರ್ಗಾವಣೆ ಕಂಪನಿ ಸಂ. 26	ಪ್ರಾಮಿನೆಂಟ್ ಜ್ಯುವೆಲ್ ಆರ್ಕೇಡ್ ಪ್ರೈವೇಟ್ ಲಿಮಿಟೆಡ್ CIN: U51398KL2010PTC026091 ವರ್ಗಾವಣೆ ಕಂಪನಿ ಸಂ.39	

(ಇಲ್ಲಿ ಸಾಮೂಹಿಕವಾಗಿ ``ವರ್ಗಾವಣೆ ಕಂಪನಿಗಳು'' ಎಂದು ಉಲ್ಲೇಖಿಸಲಾಗಿದೆ)

ಮತ್ತು

ಮಲಬಾರ್ ಗೋಲ್ಡ್ & ಡೈಮಂಡ್ಸ್ ಲಿಮಿಟೆಡ್ (ಹಿಂದೆ ಮಲಬಾರ್ ಗೋಲ್ಡ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
CIN: U52393KL2001PLC014804 ವರ್ಗಾವಣೆದಾರ ಕಂಪನಿ
ಮೇಲೆ ತಿಳಿಸಲಾದ ಎಲ್ಲಾ ವರ್ಗಾವಣೆ ಕಂಪನಿಗಳು ಮತ್ತು ವರ್ಗಾವಣೆದಾರ ಕಂಪನಿ 16/501 ಎಂ, ಮೊಂಟಾನಾ ಎಸ್ಟೇಟ್, ಪೈಂಗೊಟ್ಟುಪುರಂ, ಪೆರಿಂಗೊಲಂ(ಅಂಚೆ) ಕೋಝಿಕೋಡ್, ಕೇರಳ- 673571 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ, ಇದರ ಅಧಿಕೃತ ಸಹಿದಾರ ಶ್ರೀ ರಾಜೀವನ್ ನಾಯರ್ (ಕಂಪನಿ ಕಾರ್ಯದರ್ಶಿ) ಪ್ರತಿನಿಧಿಸುತ್ತಾರೆ. ದೂರವಾಣಿ: 8714585916;
Email: rajeevan.nair@malabargroup.com

ಮತ್ತು

ಅವರ ಆಯಾ ಷೇರುದಾರರು ಮತ್ತು ಸಾಲಗಾರರು

(ಇನ್ನು ಮುಂದೆ ಅರ್ಜಿದಾರರ ಕಂಪನಿಗಳು ಎಂದು ಒಟ್ಟಾರೆಯಾಗಿ ಉಲ್ಲೇಖಿಸಲಾಗುತ್ತದೆ) ಅರ್ಜಿಯ ವಿಚಾರಣೆಯ ಸೂಚನೆ

(ಕಂಪನಿಗಳು (ರಾಜಿ, ವ್ಯವಸ್ಥೆ ಮತ್ತು ವಿಲೀನ) ನಿಯಮಗಳು, 2016 ರ ನಿಯಮ 16 ರ ಅಡಿಯಲ್ಲಿ)

ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 232 ರ ಅಡಿಯಲ್ಲಿ ಕಂಪನಿಗಳ (ರಾಜಿ, ವ್ಯವಸ್ಥೆ ಮತ್ತು ವಿಲೀನ) ನಿಯಮಗಳು, 2016 ರ ಸೆಕ್ಷನ್ 230 ರೊಂದಿಗೆ ಓದಲಾದ ಜಂಟಿ ಕಂಪನಿ ಅರ್ಜಿ ಸಂಖ್ಯೆ CP(CAA)/3/(KOB)2026 ಅನ್ನು ಜೂನ್ 15, 2026 ರಂದು ಕೊಚ್ಚಿಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ("ಗೌರವಾನ್ವಿತ NCLT") ಮುಂದೆ ವರ್ಗಾವಣೆದಾರ ಕಂಪನಿ ಮತ್ತು ಅವುಗಳ ಷೇರುದಾರರು ಮತ್ತು ಸಾಲಗಾರರೊಂದಿಗೆ 51 ವರ್ಗಾವಣೆ ಕಂಪನಿಗಳ ವಿಲೀನ ಯೋಜನೆಯನ್ನು ಅನುಮೋದಿಸುವಂತೆ ಪ್ರಾರ್ಥಿಸಿ ಸಲ್ಲಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಜೂನ್ 15, 2026 ರ ಆದೇಶವನ್ನು ನೋಡಿ, 23 ಜೂನ್ 2026ರ ದಿನಾಂಕದ ಆದೇಶದೊಂದಿಗೆ ಓದಿರಿ. ಜಂಟಿ ಕಂಪನಿ ಅರ್ಜಿಯನ್ನು ವಿಚಾರಣೆ ಮಾಡಲು ಗೌರವಾನ್ವಿತ NCLT ಜುಲೈ 22, 2026 ರ ಬುಧವಾರವನ್ನು ನಿಗದಿಪಡಿಸಲು ಸಂತೋಷಪಟ್ಟಿದೆ. ಫಾರ್ಮ್ CAA.03 ರಲ್ಲಿ ಯೋಜನೆ ಮತ್ತು ಎಲ್ಲಾ ಇತರ ಅಗತ್ಯ ದಾಖಲೆಗಳೊಂದಿಗೆ ಸೂಚನೆಯನ್ನು ಈಗಾಗಲೇ ಆಯಾ ಅರ್ಜಿದಾರರ ಕಂಪನಿಗಳು ಎಲ್ಲಾ ಅನ್ವಯವಾಗುವ ಶಾಸನಬದ್ಧ ಅಧಿಕಾರಿಗಳೊಂದಿಗೆ ಹಂಚಿಕೊಂಡಿವೆ.

ಈ ಜಂಟಿ ಕಂಪನಿ ಅರ್ಜಿಯನ್ನು ವಿರೋಧಿಸಲು ಇಚ್ಛಿಸುವ ಯಾವುದೇ ವ್ಯಕ್ತಿಯು ತಮ್ಮ ಪ್ರಾತಿನಿಧ್ಯಗಳನ್ನು ಅರ್ಜಿದಾರರ ಕಂಪನಿಗಳ ಅಧಿಕೃತ ಪ್ರತಿನಿಧಿಗಳು, ಕೆಎಸ್‌ಆರ್ & ಕೋ ಕಂಪನಿ ಕಾರ್ಯದರ್ಶಿಗಳು ಎಲ್‌ಎಲ್‌ಪಿ 101, ಇಂಡಸ್ ಚೇಂಬರ್ಸ್, ಸರ್ಕಾರಿ ಆರ್ಟ್ಸ್ ಕಾಲೇಜು ರಸ್ತೆ, ಕೊಯಮತ್ತೂರು - 641018 ಮತ್ತು legal@ksrandco.in ಗೆ ಮತ್ತು ಮೇಲೆ ನೀಡಲಾದ ಅರ್ಜಿದಾರರ ಕಂಪನಿಗಳ ನೋಂದಾಯಿತ ಕಚೇರಿ ವಿಳಾಸಕ್ಕೆ ಮತ್ತು corporateaffairs@malabargroup.com ಗೆ ಅವರ/ಅವಳ ವಕೀಲರು ಸಹಿ ಮಾಡಿದ ನೋಟಿಸ್ ಮೂಲಕ ಕಳುಹಿಸಬೇಕು, ಇದರಿಂದಾಗಿ ಜಂಟಿ ಕಂಪನಿ ಅರ್ಜಿಯ ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಂದು ಅಥವಾ ಅದಕ್ಕೂ ಮೊದಲು ಅರ್ಜಿದಾರರ ಕಂಪನಿಗಳ ಅಧಿಕೃತ ಪ್ರತಿನಿಧಿಯನ್ನು ವಿರೋಧದ ಕಾರಣಗಳೊಂದಿಗೆ ಮತ್ತು ಅಂತಹ ಸೂಚನೆಯೊಂದಿಗೆ ಅವರ/ಅವಳ ಅಫಿಡವಿಟ್‌ನ ಪ್ರತಿಯನ್ನು ತಲುಪಬಹುದು. ಪ್ರಾತಿನಿಧ್ಯದ ಪ್ರತಿಯನ್ನು ಕಂಪನಿ ಕಾನೂನು ಭವನ, ಬಿಎಂಸಿ ರಸ್ತೆ, ತ್ರಿಕ್ಕಾಕರ - (ಪಿಒ), ಕಕ್ಕಾನಂದ, ಕೊಚ್ಚಿ, ಕೇರಳ - 682021 ನಲ್ಲಿರುವ ಗೌರವಾನ್ವಿತ ಎನ್‌ಸಿಎಲ್‌ಟಿಗೆ ಸಹ ಕಳುಹಿಸಬೇಕು.

ಮೇಲೆ ತಿಳಿಸಲಾದ ಜಂಟಿ ಕಂಪನಿ ಅರ್ಜಿಯ ಪ್ರತಿಯನ್ನು ಎಲ್ಲಾ ಅನುಬಂಧಗಳೊಂದಿಗೆ ಅರ್ಜಿದಾರರ ಕಂಪನಿಗಳ ಅಧಿಕೃತ ಪ್ರತಿನಿಧಿಯು ನಿಗದಿತ ಶುಲ್ಕಗಳನ್ನು ಪಾವತಿಸಿದ ನಂತರ ಒದಗಿಸಲಾಗುವುದು.

ಅರ್ಜಿದಾರರ ಕಂಪನಿಗಳ ಪರವಾಗಿ
ಸಹಿ/
ರಾಜೀವನ್ ನಾಯರ್
ಅಧಿಕೃತ ಸಹಿದಾರರು.
ಕೋಝಿಕ್ಕೋಡ್
ದಿನಾಂಕ 3 ಜೂನ್ 2026

ಭಾರತ ಸರ್ಕಾರ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ

ಸೆಂಟರ್ ಫಾರ್ ಪ್ರೋಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ-ಪಿಎಸಿಇ), ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ-6,7,8, ಸೆಕ್ಟರ್-5, ಐಎಂಟಿ ಮನೇಸರ್, ಗುರ್ಗಾಂವ್, ಹರ್ಯಾಣ-122050, ಇಮೇಲ್: roc.cpace@mca.gov.in

ಸತ್ಯಮೇವ ಜಯತೆ

ಫಾರ್ಮ್ ನಂ. ಎಸ್‌ಟಿಕೆ-6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ 2013ರ ಕಲಂ 248ರ ಉಪ ಕಲಂ (2) ಮತ್ತು ಉಪ ಕಲಂ (4) ಹಾಗೂ ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆಯುವುದು) ನಿಯಮಗಳು 2016ರ ನಿಯಮ 7ರ ಅನುಸಾರ]

ಸಾರ್ವಜನಿಕ: ಆರ್‌ಒಸಿ/ಸಿ-ಪಿಎಸಿಇ/ಎಸ್‌ಟಿಕೆ-2/248(2)/2026-27/617 ದಿನಾಂಕ: 23.06.2026

ಉಲ್ಲೇಖ:

ಕಂಪನಿಗಳ ಕಾಯಿದೆ 2013ರ ಕಲಂ 248ರ ಅನ್ವಯ ಕರ್ನಾಟಕ ರಾಜ್ಯದಲ್ಲಿನ ಕಂಪನಿಗಳ ಹೆಸರುಗಳನ್ನು (50) ಹೊಡೆದುಹಾಕುವುದು ಅಥವಾ ತೆಗೆದುಹಾಕುವ ವಿಷಯಕ್ಕೆ ಸಂಬಂಧಿಸಿದಂತೆ:

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AC3974409	U85100KA2022PTC164189	ಬೆಳಗಾಂ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್
2	AC3975439	U74999KA2019PTC121472	HKB ರಿಟೇಲ್ಸ್ ಪ್ರೈವೇಟ್ ಲಿಮಿಟೆಡ್
3	AC3954736	U40102KA2012PTC065708	ACS ಗ್ರೀನ್ ಎನರ್ಜಿ ಪ್ರೈವೇಟ್ ಲಿಮಿಟೆಡ್
4	AC3946900	U46909KA2025PTC204303	ECOELITE ಎನರ್ಜಿ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
5	AC4000596	U72900KA2008PTC047028	NILE ಮೈಕ್ರೋ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
6	AC3921285	U73100KA2025PTC202820	SEEK ಸಿಂಪಲ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
7	AC3922923	U52609KA2022PTC162641	VGP ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
8	AC4027884	U62020KA2024PTC190305	ಅಜ್ಜಂಪುರ ಕನ್ಸಲ್ಟೆನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
9	AC3907721	U31900KA2021PTC152823	ಆಟೋನೆಟಿಕ್ ಕಂಟ್ರೋಲ್ಸ್ ಪ್ರೈವೇಟ್ ಲಿಮಿಟೆಡ್
10	AC3910720	U62013KA2024PTC185798	ಅಮ್ಗಸ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
11	AC3893755	U31500KA2008PTC048475	ರಶ್ಮಿ ಲೈಟಿಂಗ್ & ಎನರ್ಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
12	AC3867647	U72900KA2021PTC148033	ಎಂಎಸ್‌ವಿಆರ್ ಟೆಕ್ನಾಲಜಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
13	AC3850567	U93000KA2016PTC097847	ಕಿಂಗ್ಸ್‌ಮನ್ ಸೆಕ್ಯುರಿಟಿ ಮತ್ತು ಮ್ಯಾನ್‌ಪವರ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
14	AC3660107	U74999KA2017PTC102797	ವೆಪ್ರಿಮ್ ಡೇಟಾ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
15	AC3955059	U74999KA20170PC108995	ಅಸ್ಮಿತೆ ಟೆಕ್ನಿಕಲ್ ಸಲ್ಯೂಷನ್ಸ್ (OPC) ಪ್ರೈವೇಟ್ ಲಿಮಿಟೆಡ್
16	AC4025568	U55209KA2018PTC116000	ಸುಯಿಲಾ ಡೆಲಿಕಸೀಸ್ ಪ್ರೈವೇಟ್ ಲಿಮಿಟೆಡ್
17	AC4008149	U68200KA2024PTC185251	ಸೋನಸ್ PROP ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
18	AC3983544	U80301KA2022PTC163428	E360BASTA EDTECH ಇಂಡಿಯಾ ಪ್ರೈವೇಟ್ ಲಿಮಿಟೆಡ್
19	AC3870925	U62020KA20250PC198593	ಹೆಕ್ಸಾಫೋರ್ ಟೆಕ್ನಾಲಜಿ (OPC) ಪ್ರೈವೇಟ್ ಲಿಮಿಟೆಡ್
20	AC3761734	U80300KA2020PTC136424	FWD ಲರ್ನಿಂಗ್ ಪ್ರೈವೇಟ್ ಲಿಮಿಟೆಡ್
21	AC3961614	U74999KA2020PTC134920	LYKKEY ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್
22	AC3986605	U62099KA2023PTC179822	ನಮೋತಿ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್
23	AC3962801	U62099KA2023PTC171489	ಪರೇಖ್ಸ್ ಟೆಕ್ ಮ್ಯಾಟ್ರಿಕ್ಸ್ ಪ್ರೈವೇಟ್ ಲಿಮಿಟೆಡ್
24	AC3973056	U74999KA2021PTC151938	ಆರ್.ಎಸ್. ಇನ್ಫ್ರಾಲೈನ್ ಪ್ರೈವೇಟ್ ಲಿಮಿಟೆಡ್
25	AC3958556	U70200KA2023PTC182287	ಜಿಶಾನ್ ಸಿರ್ಸಂಗಿ ಪ್ರೈವೇಟ್ ಲಿಮಿಟೆಡ್
26	AC3981162	U69100KA2025PTC198172	ಅನವೋ ಲೀಗಲ್ ಪ್ರೈವೇಟ್ ಲಿಮಿಟೆಡ್
27	AC3954336	U70109KA2022PTC164228	ನೈಯ್ಯರಿಂಗ್ ನೆಸ್ಟ್ಸ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್
28	AC3906589	U01100KA2022PTC157422	ಕೇರ್ನ್ಸ್ & ಮಾರ್ಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
29	AC3897892	U62091KA2024PTC183011	ಸಿಪ್ಲಸ್‌ಪ್ಲಸ್ ಸೆಮಿಕಂಡಕ್ಟರ್ ಪ್ರೈವೇಟ್ ಲಿಮಿಟೆಡ್
30	AC3888709	U72900KA2022PTC160689	ಆಥನ್ನಾ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್
31	AC3882638	U86100KA2026PTC218426	ಪ್ರಸನ್ನ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್
32	AC3891417	U72200KA2018PTC109667	ಮಿಲ್ಲರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
33	AC3845381	U28199KA20240PC189953	SHOINOIZ ರಿಸರ್ಚ್ (OPC) ಪ್ರೈವೇಟ್ ಲಿಮಿಟೆಡ್
34	AC3859831	U72900KA2022PTC163099	CBCORE ಐಟಿ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
35	AC3808073	U55100KA2019PTC130821	ಬಟರ್ ಸ್ಟೋರೀಸ್ ಹಾಸ್ಪಿಟಲಿಟಿ ಪ್ರೈವೇಟ್ ಲಿಮಿಟೆಡ್
36	AC4006894	U70100KA2016PTC085297	ರೇಯಾ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
37	AC3468965	U85300KA2018PTC117226	ಶಿಶಾ ಫಾರ್ಮಾ ಇಂಡಿಯಾ ಪ್ರೈವೇಟ್ ಲಿಮಿಟೆಡ್
38	AC3996916	U52100KA2015PTC084691	ಪ್ರೈಸ್‌ಜೆಟ್ ರಿಟೇಲ್ಸ್ ಪ್ರೈವೇಟ್ ಲಿಮಿಟೆಡ್
39	AC3477190	U74999KA2020PTC134393	ಟಾಸ್ಕ್ ಆಪರೇಷನ್ ಆನ್‌ಲೈನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
40	AC3483932	U72200KA2018PTC115845	ಸೆಡ್ಯುಲಸ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್
41	AC3811013	U01409KA2021PTC149440	ಗ್ರೋವಾಂತ ಪ್ರೈವೇಟ್ ಲಿಮಿಟೆಡ್
42	AC3773996	U62020KA2024PTC184153	ಯೂನಿಟೂತ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
43	AC3780905	U72900KA2017PTC103781	ಸೌಕೋಸ್ ರೋಬೋಟ್ಸ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್
44	AC3875498	U80903KA2019PTC121701	ಪ್ರೆಡಿಕಲ್ ಪ್ರಿಪರೇಟಿವ್ಸ್ ಪ್ರೈವೇಟ್ ಲಿಮಿಟೆಡ್
45	AC3890643	U93093KA2016PTC094327	RASOLASTORY ಪ್ರೈವೇಟ್ ಲಿಮಿಟೆಡ್
46	AC3720232	U70200KA20240PC189508	ರಾಯ್ಸ್ ಬರೆಟ್ಟೊ (OPC) ಪ್ರೈವೇಟ್ ಲಿಮಿಟೆಡ್
47	AC3727771	U68100KA2025PTC201268	ಟ್ವಿಫ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
48	AC3734125	U72900KA2021PTC151665	ಟೆಕ್ಸಾಲ್ವ್ ಟೆಕ್ನೋ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
49	AC3679196	U74999KA2018PTC119252	ಹ್ಯೂಗೋ ಎಡ್ಜ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
50	AC3569927	U63090KA2016PTC087068	ಹಾಪ್ಸ್‌ಮೋವ್ ಪ್ರೈವೇಟ್ ಲಿಮಿಟೆಡ್

(2) ಕಂಪನಿಗಳ ರಿಜಿಸ್ಟ್ರಾರ್ ಅವರು ಕಂಪನಿಗಳ ಕಾಯಿದೆ 2013ರ ಕಲಂ 248(2)ರಡಿ ಕಂಪನಿಗಳ ರಿಜಿಸ್ಟರ್‌ನಿಂದ ಅದರ/ಅವರ ಹೆಸರನ್ನು (ಗಳನ್ನು) ತೆಗೆದುಹಾಕಲು ಮೇಲೆ ತಿಳಿಸಿದ ಕಂಪನಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದಾರೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಅವರು ತಮ್ಮ ಸಂಯೋಜನೆಯ ಒಂದು ವರ್ಷದೊಳಗೆ ವ್ಯವಹಾರವನ್ನು ಪ್ರಾರಂಭಿಸಲು ವಿಫಲರಾಗಿದ್ದಾರೆ ಅಥವಾ ಕಂಪನಿ(ಗಳು) ಹಣಕಾಸು ವರ್ಷಗಳ ಹಿಂದಿನ ಎರಡು ಅವಧಿಗೆ ಯಾವುದೇ ವ್ಯವಹಾರ ಅಥವಾ ಕಾರ್ಯಾರಂಭ ನಡೆಸಿಲ್ಲ ಮತ್ತು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ, ಕಂಪನಿಗಳ ಕಾಯಿದೆ 2013ರ ಕಲಂ 455ರಡಿ ನಿಷ್ಕ್ರಿಯ ಕಂಪನಿಯ ಸ್ಥಿತಿಯನ್ನು ಪಡೆಯಲು ಅಂತಹ ಅವಧಿಯೊಳಗೆ ಅಥವಾ ಕಂಪನಿ(ಗಳು) ನಿಷ್ಕ್ರಿಯ ಕಂಪನಿಯ ಸ್ಥಾನಮಾನವನ್ನು ಪಡೆದಿದೆ/ಮೆಮೊರಾಂಡಮ್‌ಗೆ ಚಂದಾದಾರರು ತಾವು ಕೈಗೊಂಡ ಚಂದಾದಾರಿಕೆಯನ್ನು ಪಾವತಿಸಿಲ್ಲ, ಕಂಪನಿಯ ಸಂಯೋಜನೆ ಸಮಯದಲ್ಲಿ ಪಾವತಿಸಿ ಮತ್ತು ಈ ಪರಿಣಾಮದ ಘೋಷಣೆಯನ್ನು ಕಲಂ 10ಎ/ರ ಉಪವಿಭಾಗ (1)ರಡಿ ಅದರ ಸಂಯೋಜನೆಯ ನೂರಾ ಎಂಬತ್ತು ದಿನಗಳೊಳಗೆ ಸಲ್ಲಿಸಲಾಗಿಲ್ಲ, ನಂತರ ಬಹಿರಂಗಪಡಿಸಿದಂತೆ ಯಾವುದೇ ವ್ಯವಹಾರ ಅಥವಾ ಕಾರ್ಯಾರಂಭ ನಡೆಸಿಲ್ಲ, ಕಲಂ 12ರ ಉಪ-ವಿಭಾಗ (9)ರಡಿ ಭೌತಿಕ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತದೆ. ಆದರೆ ಅದು/ಅವರು ಕಂಪನಿಗಳಾಗಿ ಅದರ/ತಮ್ಮ ನೋಂದಣಿಯನ್ನು ಮುಂದುವರಿಸಲು ಬಯಸುವುದಿಲ್ಲ ಮತ್ತು ಆದ್ದರಿಂದ, ಕಂಪನಿಗಳ ರಿಜಿಸ್ಟರ್‌ನಿಂದ ಅದರ/ಅವರ ಹೆಸರುಗಳನ್ನು ತೆಗೆದುಹಾಕಲು/ ಹೊಡೆದುಹಾಕಲು ವಿನಂತಿಸಿದ್ದಾರೆ.

(3) ಅದರಂತೆ, ಕಂಪನಿಗಳ ರಿಜಿಸ್ಟ್ರಾರ್ ರವರು ಮೇಲೆ ತಿಳಿಸಿದ ಕಂಪನಿಗಳ ಹೆಸರನ್ನು ಕಂಪನಿಗಳ ರಿಜಿಸ್ಟರ್‌ನಿಂದ ತೆಗೆದುಹಾಕಲು ಅಥವಾ ಹೊಡೆದುಹಾಕಲು ಪ್ರಸ್ತಾಪಿಸುತ್ತಾರೆ.

(4) ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರನ್ನು ತೆಗೆದುಹಾಕುವ ಅಥವಾ ಹೊಡೆದುಹಾಕುವುದಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಆಕ್ಷೇಪಣೆ ಸಲ್ಲಿಸಬಹುದು, ಆತ ಅಥವಾ ಆಕೆಯ ಆಕ್ಷೇಪಣೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮೇಲೆ ನಮೂದಿಸಿದ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

ಇರ್ಕನ್ ಟರ್ಕಿ
ಡೆಪ್ಯುಟಿ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೋಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0270/2627

Bennett & Coleman
THE TIMES OF INDIA
ಸಂಪಾದಕೀಯ
EDITORIAL

ಕ್ವಾರಿ ದುರಂತ ವ್ಯವಸ್ಥೆಯ ವೈಫಲ್ಯ

ಕಾರ್ಮಿಕರ ಸುರಕ್ಷತೆ ಆದ್ಯತೆಯಾಗಲಿ

ಅಭಿವೃದ್ಧಿಯ ಹೆಸರಿನಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಕಲ್ಲು ಗಣಿಗಾರಿಕೆ ವ್ಯಾಪಕವಾಗಿ ನಡೆಯುತ್ತಿದೆ. ಈ ಗಣಿಗಾರಿಕೆಗಳು ಇತ್ತೀಚಿನ ದಿನಗಳಲ್ಲಿ ಕಾರ್ಮಿಕರ ಪಾಲಿಗೆ ಮೃತ್ಯುಕೂಪಗಳಾಗಿ ಪರಿಣಮಿಸುತ್ತಿವೆ. ಗುರುವಾರ, ಬೆಂಗಳೂರು ಹೊರವಲಯದಲ್ಲಿರುವ ಮಾದಪಟ್ಟಣದಲ್ಲಿ ನಡೆದ ಕಲ್ಲು ಕ್ವಾರಿ ದುರಂತವು ಗಣಿ ಮಾಲೀಕರ ಅತಿಯಾದ ಲಾಭದ ಆಸೆ ಹಾಗೂ ಸುರಕ್ಷತಾ ನಿಯಮಗಳ ಉಲ್ಲಂಘನೆ ಕುರಿತ ಚರ್ಚೆಯನ್ನು ಮುನ್ನೆಲೆಗೆ ತಂದಿದೆ. ಮೇಲಿನಿಂದ ಬೃಹತ್ ಬಂಡೆಗಳು ಉರುಳಿ ಬಿದ್ದು ಅಮಾಯಕ ದಿನಗೂಲಿ ಕಾರ್ಮಿಕರು ಜೀವ ಕಳೆದುಕೊಳ್ಳುತ್ತಿರುವ ಘಟನೆಗಳು ಕೇವಲ 'ಆಕಸ್ಮಿಕ' ಅವಘಡಗಳಲ್ಲ, ಇವು ವ್ಯವಸ್ಥೆಯ ವೈಫಲ್ಯ ಮತ್ತು ನಿರ್ಲಕ್ಷ್ಯದಿಂದ ಉಂಟಾದ ದುರಂತಗಳಾಗಿವೆ.

ಮಾದಪಟ್ಟಣದ ಕಲ್ಲು ಕ್ವಾರಿಯಲ್ಲಿ ಏಕಾಏಕಿ ಕಲ್ಲು ಕುಸಿದು ಬಿದ್ದ ಪರಿಣಾಮ ಹಲವು ಕಾರ್ಮಿಕರು ಜೀವಂತವಾಗಿ ಸಮಾಧಿಯಾಗಿದ್ದಾರೆ. ಇವರಲ್ಲಿ ಬಹುತೇಕರು ದೂರದ ರಾಜ್ಯಗಳಿಂದ ಬಂದ ವಲಸೆ ಕಾರ್ಮಿಕರಾಗಿದ್ದಾರೆ. ತನಿಖಾ ವರದಿಗಳು ಈ ಘಟನೆಯ ಹಿಂದಿರುವ ಭೀಕರ ನಿರ್ಲಕ್ಷ್ಯವನ್ನು ಎತ್ತಿ ತೋರಿಸಿವೆ. ಕ್ವಾರಿಗಳಲ್ಲಿ ಗರಿಷ್ಠ ಪ್ರಮಾಣದ ಲಾಭ ಗಳಿಸಲು ನಿಯಮ ಬಾಹಿರವಾಗಿ, ಶಕ್ತಿಶಾಲಿ ಜಿಲೆಟಿನ್ ಕಡ್ಡಿಗಳನ್ನು ಬಳಸಿ ಅವೈಜ್ಞಾನಿಕವಾಗಿ ಸ್ಫೋಟ ನಡೆಸಲಾಗುತ್ತಿದೆ. ಈ ಸ್ಫೋಟಗಳ ತೀವ್ರತೆಯಿಂದ ಇಡೀ ಕಲ್ಲಿನ ಗುಡ್ಡದ ತಳಪಾಯವೇ ಸಡಿಲಗೊಳ್ಳುತ್ತಿದೆ. ಮೇಲ್ಭಾಗದಲ್ಲಿ ಯಂತ್ರಗಳು ಕೆಲಸ ಮಾಡುವಾಗ ಕೆಳಭಾಗದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡುವ ಕಾರ್ಮಿಕರಿಗೆ ಯಾವುದೇ ಮುನ್ನೆಚ್ಚರಿಕೆಯಾಗಲಿ, ಸುರಕ್ಷತಾ ಕವಚಗಳಾಗಲಿ ನೀಡಲಾಗುವುದಿಲ್ಲ ಎಂದು ಪ್ರಾಥಮಿಕ ವರದಿಗಳಿಂದ ತಿಳಿದು ಬಂದಿದೆ.

ಇಂಥ ಘೋರ ಅಪಘಾತಗಳನ್ನು ತಡೆಗಟ್ಟಿ, ಕಾರ್ಮಿಕರ ಜೀವ ರಕ್ಷಿಸಲು ಸರಕಾರ ಮತ್ತು ಗಣಿ ಇಲಾಖೆ ತಕ್ಷಣವೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆ ಮೂಲಕ ವೈಜ್ಞಾನಿಕ ಗಣಿಗಾರಿಕೆಯನ್ನು ಖಾತರಿಪಡಿಸಬೇಕಾಗಿದೆ. ಪ್ರತಿ ಕ್ವಾರಿಯಲ್ಲೂ ಗಣಿಗಾರಿಕೆ ನಡೆಸುವ ಮುನ್ನ ಭೂಗರ್ಭ ಶಾಸ್ತ್ರಜ್ಞರು ಹಾಗೂ ಸುರಕ್ಷತಾ ಎಂಜಿನಿಯರ್‌ಗಳಿಂದ ಕಡ್ಡಾಯವಾಗಿ ಪರಿಶೀಲನೆ ನಡೆಸಬೇಕು. ಸಡಿಲವಾಗಿರುವ ಮತ್ತು ಅಪಾಯಕಾರಿ ಬಂಡೆಗಳನ್ನು ಮುಂಚಿತವಾಗಿಯೇ ಗುರುತಿಸಿ ಸುರಕ್ಷಿತವಾಗಿ ತೆರವುಗೊಳಿಸಬೇಕು.

ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂವಹನಕ್ಕೆ ಸೂಕ್ತ ವ್ಯವಸ್ಥೆ ಮತ್ತು ಸುರಕ್ಷತಾ ತರಬೇತಿಯನ್ನು ನೀಡಬೇಕು. ಸ್ಫೋಟ ಅಥವಾ ಯಂತ್ರಗಳ ಬಳಕೆಗೂ ಮುನ್ನ ಸೈರನ್ ಮೂಲಕ ಎಚ್ಚರಿಕೆ ನೀಡುವ ವ್ಯವಸ್ಥೆ ಇರಬೇಕು. ಕಾರ್ಮಿಕರಿಗೆ ಕಡ್ಡಾಯವಾಗಿ ಸುರಕ್ಷತಾ ಹೆಲ್ಮೆಟ್, ಬೂಟುಗಳು ಸೇರಿದಂತೆ ಸುರಕ್ಷತಾ ಪರಿಕರಗಳನ್ನು ಒದಗಿಸಬೇಕು. ರಾತ್ರಿ ವೇಳೆ ನಡೆಸುವ ಅಕ್ರಮ ಗಣಿಗಾರಿಕೆಯ ನಿಷೇಧಕ್ಕೆ ಕ್ರಮ ಕೈಗೊಳ್ಳಬೇಕು. ಸಿಸಿಟಿವಿ ಅಳವಡಿಕೆ ಮತ್ತು ಸರಕಾರದ ಸುರಕ್ಷತಾ ಅಧಿಕಾರಿಗಳ ನಿರಂತರ ತಪಾಸಣೆ ಮೂಲಕ ಸರಕಾರ ಅವರ ಮೇಲೆ ಕಣ್ಣಿಡಬಹುದಾಗಿದೆ. ಸುರಕ್ಷತಾ ನಿಯಮಗಳನ್ನು ಗಾಳಿಗೆ ತೂರುವ ಕ್ವಾರಿ ಮಾಲೀಕರಿಗೆ ದಂಡ ವಿಧಿಸದೆ ಸಾಲದು, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜಾರಿಯಾದರೆ ಇಂಥ ಅವಘಡಗಳನ್ನು ತಪ್ಪಿಸಬಹುದಾಗಿದೆ.

ಹೊಸ ಅಂಕಣ

ಕಾನೂನು-ಕನ್ನಡಿ

ಮೀರಾ ಘಡಕೆ
ಹಿರಿಯ ನ್ಯಾಯವಾದಿ

ಕೌಟುಂಬಿಕ ಕಾನೂನು ತೊಡಕಿಗೆ ಪರಿಹಾರ

ಕೌಟುಂಬಿಕವಾಗಿ ಹಲವರ ಬದುಕಿನಲ್ಲಿ ಕಾನೂನು ತೊಡಕುಗಳು ಇದ್ದೇ ಇರುತ್ತವೆ. ಈ ಹೊತ್ತಿನಲ್ಲಿ ಕಾಡುವುದು 'ಮುಂದೇನು?' ಎನ್ನುವ ಪ್ರಶ್ನೆ. ಇಲ್ಲಿದೆ ಕಾನೂನು ತಜ್ಞರ ಪರಿಹಾರ.

ಪ್ರಶ್ನೆ: ನನ್ನ ಗಂಡ ನನ್ನನ್ನು ತ್ಯಜಿಸಿ ಎರಡು ವರ್ಷಗಳಾಗಿವೆ. ನನ್ನ ಮದುವೆಗೆ ಮುಂಚೆ ಮತ್ತೊಬ್ಬಳ ಸಹವಾಸ ಮಾಡಿದ್ದು, ಮದುವೆಯಾದ ನಂತರವೂ ಆಕೆಯನ್ನು ಬಿಡಲು ಒಪ್ಪದೆ ನನ್ನನ್ನೇ ತವರಿಗೆ ಅಟ್ಟಿದ್ದಾನೆ. ಅವರು ಒಳ್ಳೆಯ ಕೆಲಸದಲ್ಲಿದ್ದು, ಕೈ ತುಂಬಾ ಸಂಬಳ ಪಡೆಯುತ್ತಿದ್ದಾರೆ. ನನ್ನದು ಕಡಿಮೆ ಸಂಬಳ. ನಾನು ಅವನಿಂದ ವಿಚ್ಛೇದನ ಪಡೆಯಬಹುದೇ ಮತ್ತು ನನಗೂ ಮಗುವಿಗೂ ಜೀವನಾಂಶ ಸಿಗುವುದೇ?

-**ಸುಜಾತ** ಮಂಗಳೂರು

ಉತ್ತರ: ನಿಮ್ಮ ಗಂಡನಿಂದ ನಿಮಗೆ ಬಹಳ ದೊಡ್ಡ ಅನ್ಯಾಯವಾಗಿದೆ. ಆದರೆ, ಕಾನೂನು ಹೋರಾಟಕ್ಕೆ ಒಂದಿಷ್ಟು ಸಾಕ್ಷಿ ಪುರಾವೆಗಳ ಅಗತ್ಯವಿದ್ದು, ಅದನ್ನು ನೀವು ಹೊಂದಿಸಿಕೊಂಡಲ್ಲಿ ವಿಚ್ಛೇದನ ಸುಲಭವಾಗುತ್ತದೆ. ಆ ನಿಟ್ಟಿನಲ್ಲಿ ಪ್ರಯತ್ನಿಸಿ. ಇನ್ನು ಜೀವನಾಂಶದ ವಿಷಯಕ್ಕೆ ಬಂದರೆ ನೀವಿಬ್ಬರೂ ಜೀವನಾಂಶಕ್ಕೆ ಅರ್ಹರಾಗಿರುತ್ತೀರಿ. ನಿಮ್ಮ ಮತ್ತು ಮಗುವಿನ ಜೀವನ ನಿರ್ವಹಣೆಯ ಖರ್ಚು, ವೆಚ್ಚ, ನಿಮ್ಮ ಮಗುವಿನ ವಿದ್ಯಾಭ್ಯಾಸ, ಗಂಡನ ಆದಾಯ, ಖರ್ಚು ಇವುಗಳೆನ್ನೆಲ್ಲಾ ಪರಿಗಣಿಸಿ ನ್ಯಾಯಾಲಯ ನಿಮ್ಮ ಜೀವನಾಂಶ ನಿಗದಿಪಡಿಸುತ್ತದೆ. ಆದಕ್ಕಾಗಿ ನೀವು ವಕೀಲರ ನೆರವು ಅಥವಾ ಕಾನೂನು ಸೇವಾ ಪ್ರಾಧಿಕಾರದ ನೆರವು ಪಡೆಯಬಹುದು.

ವಿಕ ತಗೋ ಕನ್ನಡ

ಹಂದರ

ಪಂದರ್, ಪಂದರ, ಪಂದರು, ಪಂದಲ್, ಪಂದಲು, ಹಂದರ್, ಹಂದರ, ಹಂದರು, ಹಂದಲ, ಹಂದಲು

ಇಷ್ಟೊಂದು ರೂಪಗಳಿರುವ ಈ ಪದ, ಅದರ ಅರ್ಥದಂತೆ ಕನ್ನಡ ಸಾಹಿತ್ಯದಲ್ಲಿ ಹರಡಿಕೊಂಡಿದೆ. ಇವಕ್ಕೆ ಚಪ್ಪರ, ಕಾವಣ ಎಂದು ಅರ್ಥ. ಅಕ್ಕಮಹಾದೇವಿಯ ನುಡಿಗಳು ಇವು: 'ಉದಯದಲೆದ್ದು ನಿಮ್ಮ ನೆನೆವೆನಯ್ಯ/ ನಿಮ್ಮ ಬರವ ಹಾರುತಿರ್ದೆನಯ್ಯಾ/ ಹಸೆ 'ಹಂದರವನಿಕ್ಕಿ' ನಿಮ್ಮಡಿಗಳಿಗೆಡೆಮಾಡಿಕೊಂಡಿಪ್ಪೆನಯ್ಯಾ/ ಚೆನ್ನಮಲ್ಲಿಕಾರ್ಜುನ'. ಆಕೆ ಚಪ್ಪರಕಟ್ಟಿ, ರಂಗೋಲಿಯನಿಟ್ಟು ಸಿಂಗರಿಸಿ ಚೆನ್ನಮಲ್ಲಿಕಾರ್ಜುನನಿಗೆ ಕಾಯುತ್ತಿರುವ ಸನ್ನಿವೇಶ 'ಕಾದಿರುವಳು ಶಬರಿ'ಯನ್ನು ನೆನಪಿಸುತ್ತದೆ. ಕಾವ್ಯಗಳಲ್ಲಿ ವರ್ಣಿಸಿರುವಂತೆ, 'ಶುಭಸಮಾರಂಭಗಳಿಗೆ ದೊಡ್ಡಹಂದರ ನಿರ್ಮಿಸುತ್ತಿದ್ದರು; ಅದಕ್ಕೆ ಆಧಾರವಾಗಿ ಮುತ್ತುಮಾಣಿಕ್ಯದ ಕಂಬಗಳಿರುತ್ತಿತ್ತು'. ಇಂಥ ಸಮಾರಂಭಗಳಿಗೆ ಈಗ ಕಲ್ಯಾಣಮಂಟಪಗಳು ತಲೆಯೆತ್ತಿವೆ. ಆದರೂ ಹಳೆಯ ಪದ್ಧತಿಯಂತೆ ಅವುಗಳ ಮುಂದೆ ಹಂದರವನ್ನು ನಿರ್ಮಿಸಿ, ಶುಭಕಾರ್ಯವನ್ನು ಚಪ್ಪರಪೂಜೆಯಿಂದ ಆರಂಭಿಸುತ್ತೇವೆ. ಮನೆಮುಂದಿನ ಮೈಸೂರಮಲ್ಲಿಗೆಯ ಬಳ್ಳಿಗೂ ಹಂದರದ ಆಸರೆ ಬೇಕು. ಕನ್ನಡದ 'ಪಂದಲ್' ಇಂಗ್ಲಿಷಿನ ಪೆಂಡಾಲ್‌ಗೆ ಮೂಲ ಎನ್ನುವುದನ್ನು ನೆನಪಿಡಿ. - **ಜಿ.ವಿ. ಅರುಣ**

ಪದ ಸೂಚಿಸಿದವರು: **ಶಬರೀಶ್** ಬೆಂಗಳೂರು

ಬತ್ತಳಿಕೆ



ಪಾಕಿಸ್ತಾನ ಮತ್ತು ಚೀನಾವನ್ನು ಎದುರಿಸುವ ದ್ವಿಮುಖ ಭದ್ರತಾ ಸವಾಲಿಗೆ ಸಿದ್ಧತೆ ನಡೆಸುತ್ತಿದ್ದ ಭಾರತಕ್ಕೆ ಈಗ ಪೂರ್ವ ಗಡಿಯಲ್ಲೂ ಹೊಸ ತಲೆನೋವು ಎದುರಾಗಿದೆ. ತೀರಾ ಇತ್ತೀಚಿನವರೆಗೂ ಬಾಂಗ್ಲಾದ ಎಲ್ಲ ಸಂಕಷ್ಟಗಳಿಗೆ ಭಾರತವೇ ಹೆಗಲಾಗುತ್ತಿತ್ತು. ಈಗ ಆ ದೇಶವು ಭಾರತವನ್ನು ಬಿಟ್ಟು ತನ್ನ ಮೋಂಗ್ಲಾ ಬಂದರು ಅಭಿವೃದ್ಧಿಗೆ ಚೀನಾ ಜತೆ ಒಪ್ಪಂದ ಮಾಡಿಕೊಂಡಿದೆ. ಚೀನಾ ಈಗ ಭಾರತದ ಮೇಲೆ ಕಳ್ಳಗಣ್ಣು ಬೀರಲು ಇನ್ನೂ ಹತ್ತಿರವಾದಂತಾಗಿದೆ. ಏನಿದು ಮೋಂಗ್ಲಾ ಪಾಲಿಟಿಕ್ಸ್? ಇದರಿಂದ ಭಾರತಕ್ಕೆ ಏಕೆ ಆತಂಕ?

ಮೋಂಗ್ಲಾ ಮುತ್ತಿಗೆ

ಭಾರತದ ನಾಲ್ಕೂ ದಿಕ್ಕಿಗೂ ಚೀನಾ ಬಂದರು ಬಂಧನ



■ **ಸಂತೋಷ್ ವರ್ಕಾಡಿ**

ಭಾರತ ಈವರೆಗೆ 'ಟು ಫ್ರಂಟ್ ವಾರ್' ಬಗ್ಗೆ ಮಾತನಾಡುತ್ತಿತ್ತು, ಅದಕ್ಕೆ ತಯಾರಿಯನ್ನೂ ನಡೆಸುತ್ತಿತ್ತು. ಈಗ ಪೂರ್ವಭಾಗದಲ್ಲಿ ತನ್ನಿಂದಲೇ ಸೃಷ್ಟಿಯಾದ ಬಾಂಗ್ಲಾದೇಶವೂ ಭಾರತದೊಂದಿಗೆ ಸಂಬಂಧ ಕಡಿದುಕೊಂಡು ಭಾರತದ ಶತ್ರುಗಳ ಜತೆಗೆ ಕೈಜೋಡಿಸುವತ್ತ ಹೊರಟಿದೆ. ಈ ಮೂಲಕ ಭಾರತ ಪಶ್ಚಿಮದಲ್ಲಿ ಪಾಕಿಸ್ತಾನ, ಉತ್ತರದಲ್ಲಿ ಚೀನಾ, ಪೂರ್ವದಲ್ಲಿ ಬಾಂಗ್ಲಾದೇಶ ಸೇರಿ ಈಗ 'ತ್ರೀ ಫ್ರಂಟ್ ವಾರ್'ಗೆ ಸಿದ್ಧತೆ ನಡೆಸಬೇಕಾದ, ಅವರ ಯೋಜನೆಗೆ ಕೌಂಟರ್ ಕೊಡಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಹೌದು, ಬಾಂಗ್ಲಾದೇಶದ ನೂತನ ಪ್ರಧಾನಿ ತಾರಿಕ್ ರೆಹಮಾನ್ ಇತ್ತೀಚಿನ ತನ್ನ ಚೀನಾ ಪ್ರವಾಸದ ವೇಳೆ 17 ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ಅದರಲ್ಲಿ ಮೋಂಗ್ಲಾ ಬಂದರು ಅಭಿವೃದ್ಧಿ ಹಾಗೂ ತೀಸ್ತಾ ನದಿ ಯೋಜನೆಗೆ ಕಪಟಿ ಚೀನಾದ ಜತೆ ಒಪ್ಪಂದ ಮಾಡಿಕೊಂಡಿರುವುದು ಭಾರತಕ್ಕೊಂದು ಸವಾಲಾಗಿ ಮಾರ್ಪಟ್ಟಿದೆ. ಮೇಲ್ನೋಟಕ್ಕೆ ಇದು ಅಭಿವೃದ್ಧಿ ಯೋಜನೆಯಂತೆ ಕಂಡರೂ, ಇದು ಚೀನಾದ ಸಾಮ್ರಾಜ್ಯ ವಿಸ್ತರಣೆಯ ಭಾಗವೇ ಆಗಿದೆ. ಇದುವರೆಗೆ ನೆರೆ ರಾಷ್ಟ್ರಗಳಲ್ಲಿ ಕಾಲೂರಲು ಹಂಬಲಿಸುತ್ತಿದ್ದ ಚೀನಾಕ್ಕೆ ಈಗ ಬಾಂಗ್ಲಾವೇ ರತ್ನಗಂಬಳಿ ಹಾಸಿ ಆಹ್ವಾನಿಸಿದೆ. ಚೀನಾ ಈವರೆಗೆ ಎಲ್ಲೆಲ್ಲಿ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದೆಯೋ ಅಲ್ಲೆಲ್ಲ ತನ್ನ ಮಿಲಿಟರಿ ಹಾಗೂ ಗುಪ್ತಚರ ಸಿಬ್ಬಂದಿಯನ್ನು ಗುಪ್ತವಾಗಿಯೇ ನಿಯೋಜಿಸುವಂಥ ಕೆಲಸ ಮಾಡುತ್ತಲೇ ಇದೆ.

ಏನಿದು ಮೋಂಗ್ಲಾ ಬಂದರು ಯೋಜನೆ?

ಬಾಂಗ್ಲಾದೇಶದ ಎರಡನೇ ಅತಿ ದೊಡ್ಡ ಮೋಂಗ್ಲಾ ಬಂದರನ್ನು ಅಭಿವೃದ್ಧಿಪಡಿಸುವುದು ಮತ್ತು ಆಧುನೀಕರಿಸುವ ಯೋಜನೆ ಇದಾಗಿದೆ. ಸುಮಾರು 4,283 ಕೋಟಿ ರೂ. ವೆಚ್ಚದ ಈ ಬೃಹತ್ ಯೋಜನೆಯಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸುವುದು, ದೊಡ್ಡ ಹಡಗುಗಳು ಬಂದು ನೆಲೆಸಲು ಅನುಕೂಲಕರವಾದ ಜೆಟ್ಟಿಗಳ ನಿರ್ಮಾಣ, ಮೂಲ ಸೌರ್ಯನಗಳ ಅಭಿವೃದ್ಧಿಯನ್ನೊಳಗೊಂಡಿದೆ.

ಹಿಂದೆ ಭಾರತದ ಜತೆಗೆ ನಡೆದಿತ್ತು ಒಪ್ಪಂದ

2015ರಲ್ಲಿ ಶೇಖ್ ಹಸೀನಾ ಅವರ ಸರಕಾರದ ಅವಧಿಯಲ್ಲಿ ಮೊಂಗ್ಲಾ ಬಂದರಿನ ಬಳಿ ಸುಮಾರು 110 ಎಕರೆ ಜಾಗದಲ್ಲಿ ವಿಶೇಷ ಆರ್ಥಿಕ ವಲಯ ಅಭಿವೃದ್ಧಿಪಡಿಸಲು ಭಾರತ ಮತ್ತು ಬಾಂಗ್ಲಾದೇಶ ಒಪ್ಪಂದ ಮಾಡಿಕೊಂಡಿದ್ದವು. ಭಾರತದ ಹಿರಾನಂದಾನಿ ಗ್ರೂಪ್ ಇದರ ಜವಾಬ್ದಾರಿ ಹೊತ್ತಿತ್ತು. 2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ರಾಜಕೀಯ ದಂಗೆ ಹಾಗೂ ಹಸೀನಾ ಅವರ ಪದಚ್ಯುತಿಯ ನಂತರ ಅಧಿಕಾರಕ್ಕೆ ಬಂದ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ಭಾರತದೊಂದಿಗಿನ ಸಂಬಂಧ ಕಡಿದುಕೊಂಡ ಹಿನ್ನೆಲೆಯಲ್ಲಿ ಭಾರತೀಯ ಕಂಪನಿಯು ನಿಗದಿತ ಸಮಯದೊಳಗೆ ಕೆಲಸ ಆರಂಭಿಸಿಲ್ಲ ಎಂಬ ಕಾರಣ ನೀಡಿ 2025ರ ಅಕ್ಟೋಬರ್‌ನಲ್ಲಿ ಭಾರತವನ್ನು ಈ ಯೋಜನೆಯಿಂದ ಕೈಬಿಟ್ಟಿತು.

ತೀಸ್ತಾ ನದಿ ಒಪ್ಪಂದ

ಮೊಂಗ್ಲಾ ಮಾತ್ರವಲ್ಲದೆ, ಭಾರತದ ಗಡಿಗೆ ತೀರಾ ಹತ್ತಿರವಿರುವ ತೀಸ್ತಾ ನದಿ ನಿರ್ವಹಣಾ ಯೋಜನೆ ಮತ್ತು ಪೈರಾ ಬಂದರಿನಲ್ಲೂ ಚೀನಾದ ಹೂಡಿಕೆಗೆ ಬಾಂಗ್ಲಾದೇಶ ಹಸಿರು ನಿಶಾನೆ ತೋರಿದೆ. ಚೀನಾ ಅಲ್ಲಿ ಸುಧಾರಿತ ಆಸ್ಪತ್ರೆಗಳನ್ನು ನಿರ್ಮಿಸಲು ಮುಂದಾಗಿದ್ದು, ಅವುಗಳನ್ನು ಭಾರತದ ಮೇಲೆ ಕಣ್ಣಿಡಲು ರಹಸ್ಯ ಕಣ್ಗಾವಲು ಕೇಂದ್ರಗಳನ್ನಾಗಿ ಬಳಸುವ ಸಾಧ್ಯತೆಯೂ ಇದೆ. ಜತೆಗೆ ಭಾರತದ ಈ ಅತ್ಯಂತ ಸೂಕ್ಷ್ಮ ಗಡಿಗೆ ತೀರಾ ಹತ್ತಿರದಲ್ಲಿ ಚೀನಾದ ಎಂಜಿನಿಯರ್‌ಗಳು ಮತ್ತು ತಂತ್ರಜ್ಞರು ಬೀಡುಬಿಡಲಿದ್ದಾರೆ. ಈ ತೀಸ್ತಾ ನದಿ ಸಿಲಿಗುರಿ ಕಾರಿಡಾರ್‌ನಿಂದ ಕೇವಲ 70 ಕಿ.ಮೀ. ದೂರದಲ್ಲಿದೆ ಎನ್ನುವುದು ಭಾರತದ ಭದ್ರತೆಯ ಕಳವಳವನ್ನು ಹೆಚ್ಚಿಸಿದೆ.

ದೇಶದ ಮಿಲಿಟರಿ ಕೇಂದ್ರವಾಗಿರುವ ಪೂರ್ವ ಕರಾವಳಿ

ಭಾರತದ ಪೂರ್ವ ಕರಾವಳಿ ದೇಶದ ಮಿಲಿಟರಿ ಶಕ್ತಿಯ ಕೇಂದ್ರವಾಗಿದೆ. ಇಲ್ಲಿ ಭಾರತದ ಪ್ರಮುಖ ನೌಕಾ ನೆಲೆಗಳಿವೆ. ವಿಶಾಖಪಟ್ಟಣವನ್ನು ಕೇಂದ್ರ ಕಚೇರಿಯನ್ನಾಗಿ ಹೊಂದಿರುವ ಭಾರತೀಯ ನೌಕಾಪಡೆಯ ಪೂರ್ವ ನೌಕಾ ಕಮಾಂಡ್, ಭೂಗತ ಜಲಾಂತರ್ಗಾಮಿ ಕೋಟೆ ಐಎನ್‌ಎಸ್ ವರ್ಷಾ, ಭಾರತದ ಅತ್ಯಂತ ಶಕ್ತಿಶಾಲಿ ಜಲಾಂತರ್ಗಾಮಿಗಳಾದ ಐಎನ್‌ಎಸ್ ಅರಿಹಂತ್, ಐಎನ್‌ಎಸ್ ಅರಿಘಾತ್ ಸೇರಿದಂತೆ ಎಲ್ಲ ಪರಮಾಣು ಸಾಮರ್ಥ್ಯದ ಜಲಾಂತರ್ಗಾಮಿಗಳು ಪೂರ್ವ ಕರಾವಳಿಯಲ್ಲಿ ನೆಲೆಗೊಂಡಿವೆ. ಪೂರ್ವ ನೌಕಾ ಕಮಾಂಡ್ ಅತ್ಯಂತ ಸುಧಾರಿತ ಸ್ಟೆಲ್ತ್ ಫ್ರಿಗೇಟ್‌ಗಳು, ಡೆಸ್ಟ್ರಾಯರ್‌ಗಳು ಇಲ್ಲಿವೆ. ಇತ್ತೀಚೆಗೆ ಇಲ್ಲಿ ಅತ್ಯಾಧುನಿಕ ರಾಡಾರ್, ಬ್ರಹ್ಮೋಸ್ ಕ್ಷಿಪಣಿಗಳನ್ನೂ ಅಳವಡಿಸಲಾಗಿದೆ.

ಮುಖ್ಯವಾಗಿ ಮಿಸೈಲ್ ಪರೀಕ್ಷಾ ಕೇಂದ್ರವಾದ ಒಡಿಶಾದ ಅಬ್ದುಲ್ ಕಲಾಂ ದ್ವೀಪ ಇದೇ ಪೂರ್ವ ಕರಾವಳಿಯಲ್ಲಿವೆ. ಜತೆಗೆ, ಪಶ್ಚಿಮ ಬಂಗಾಳದ ಕಲೈಕುಂಡ ಮತ್ತು ತಮಿಳುನಾಡಿನ ತಂಜಾವೂರಿನಲ್ಲಿರುವ ವಾಯುನೆಲೆಗಳು ಇದೇ ಭಾಗದಲ್ಲಿ ಬರುತ್ತವೆ.

ಮ್ಯಾನ್ಮಾರ್ ಸಂಬಂಧ ಸುಧಾರಣೆಗೆ ಒತ್ತು

ಬಾಂಗ್ಲಾದೇಶ ದೂರವಾದ ಬಳಿಕ ಭಾರತ, ಮ್ಯಾನ್ಮಾರ್ ಜತೆಗಿನ ಬಾಂಧವ್ಯವನ್ನು ವೃದ್ಧಿಸಲು ಆಕ್ರಮಣಕಾರಿ ರಾಜತಾಂತ್ರಿಕ ಪ್ರಯತ್ನಗಳನ್ನು ಆರಂಭಿಸಿದೆ. ಭಾರತವು ಮ್ಯಾನ್ಮಾರ್‌ನ ಸಿತ್ವೆ ಬಂದರನ್ನು ಅಭಿವೃದ್ಧಿಪಡಿಸುತ್ತಿದೆ. ಕೋಲ್ಕತ್ತಾವನ್ನು ಮ್ಯಾನ್ಮಾರ್‌ನ ಸಿತ್ವೆ ಬಂದರಿನ ಮೂಲಕ ಭಾರತದ ಮಿಜೋರಾಂ ರಾಜ್ಯಕ್ಕೆ ಜೋಡಿಸುವ ಪ್ರಯತ್ನ ನಡೆಯುತ್ತಿದೆ. ಇದು ಸಿಲಿಗುರಿ ಕಾರಿಡಾರ್ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ, ಈಶಾನ್ಯ ರಾಜ್ಯಗಳಿಗೆ ಪರ್ಯಾಯ ವ್ಯಾಪಾರ ಮಾರ್ಗವನ್ನು ಒದಗಿಸುತ್ತದೆ. ಜತೆಗೆ ಮ್ಯಾನ್ಮಾರ್‌ನ ಮಿಲಿಟರಿ ಆಡಳಿತ ಮತ್ತು ಅಲ್ಲಿನ ಪ್ರಮುಖ ಬಂಡುಕೋರ ಗುಂಪುಗಳೊಂದಿಗೆ ಏಕಕಾಲದಲ್ಲಿ ರಹಸ್ಯ ರಾಜತಾಂತ್ರಿಕ ಮಾತುಕತೆಗಳನ್ನು ನಡೆಸುತ್ತಿದೆ. ಭಾರತವನ್ನು ಆಗ್ನೇಯ ಏಷ್ಯಾದ ಮಾರುಕಟ್ಟೆಯೊಂದಿಗೆ ಜೋಡಿಸಲು ಮಣಿಪುರದ ಮೊರೆಹ್‌ನಿಂದ ಆರಂಭವಾಗಿ ಮ್ಯಾನ್ಮಾರ್ ಮೂಲಕ ಥಾಯ್ಲೆಂಡ್‌ಗೆ ಸಂಪರ್ಕ ಕಲ್ಪಿಸುವ ಈ ಬೃಹತ್ ಹೆದ್ದಾರಿ ಯೋಜನೆಯನ್ನು ವೇಗವಾಗಿ ಪೂರ್ಣಗೊಳಿಸಲು ಯತ್ನಿಸುತ್ತಿದೆ.

ಭಾರತಕ್ಕೇನು ಅಪಾಯ?

ಚೀನಾ ಈಗಾಗಲೇ ಮ್ಯಾನ್ಮಾರ್‌ನ ಕ್ಯೌಕ್‌ಪ್ಯು ಮತ್ತು ಬಾಂಗ್ಲಾದೇಶದ ಚಿತ್ತಗಾಂಗ್‌ನಲ್ಲಿ ಕೈಗಾರಿಕಾ ವಲಯಗಳನ್ನು ಅಭಿವೃದ್ಧಿಪಡಿಸುತ್ತಿದೆ. ಈಗ ಮೋಂಗ್ಲಾ ಕೂಡ ಸೇರಿರುವುದರಿಂದ, ಭಾರತದ ಪೂರ್ವ ಕರಾವಳಿಯ ಅತ್ಯಂತ ಸಮೀಪದಲ್ಲೇ ಚೀನಾ ಬಂದು ಕುಳಿತಂತಾಗುತ್ತದೆ. ಮೋಂಗ್ಲಾ ಬಂದರ್‌ನಿಂದ ಕೋಲ್ಕತ್ತಾ ಕೇವಲ 190 ಕಿ.ಮೀ. ದೂರದಲ್ಲಿದೆ. ಇನ್ನು ಭಾರತದ ಅತ್ಯಂತ ಆಯಕಟ್ಟಿನ ಪ್ರದೇಶವಾದ 'ಚಿಕನ್ ನೆಕ್' ಎಂದು ಕರೆಯುಲ್ಪಡುವ ಸಿಲಿಗುರಿ ಕಾರಿಡಾರ್ ಕೇವಲ 215 ಕಿ.ಮೀ. ದೂರದಲ್ಲಿದೆ. ಮೇಲ್ನೋಟಕ್ಕೆ ಈ ಬಂದರು ಅಭಿವೃದ್ಧಿ ಯೋಜನೆಯಾದರೂ ಭವಿಷ್ಯದಲ್ಲಿ ನೌಕಾಪಡೆಯ ನೆಲೆಗಳನ್ನಾಗಿ ಮಾಡುವ ತಂತ್ರವೂ ಚೀನಾದ್ದಾಗಿದೆ. ಒಂದು ವೇಳೆ ಮೋಂಗ್ಲಾ ಬಂದರಿನಲ್ಲಿ ಚೀನಾ, ತನ್ನ ಅತ್ಯುನ್ನತ ರಾಡಾರ್‌ಗಳನ್ನು ಸ್ಥಾಪಿಸಿದ್ದೇ ಆದಲ್ಲಿ, ಭಾರತದ ಮಿಲಿಟರಿ ಚಲನವಲನಗಳನ್ನು ಸುಲಭದಲ್ಲಿ ಟ್ರ್ಯಾಕ್ ಮಾಡುತ್ತದೆ. ಈ ಹಿಂದೆ ಭಾರತ ಮಿಸೈಲ್ ಪರೀಕ್ಷೆ ನಡೆಸುವಾಗ, ಚೀನಾ ತನ್ನ ಗುಪ್ತಚರ ಕಳ್ಳ ನೌಕೆಗಳನ್ನು ಕಳುಹಿಸಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸುತ್ತಿತ್ತು.

ವಿಕ ಫೋಕಸ್

ಭಾರತವೇನು ಸುಮ್ಮನೆ ಕುಳಿತಿಲ್ಲ...

ಚೀನಾದ ಸುತ್ತುವರಿಕೆ ನೀತಿಗೆ ಪ್ರತಿಯಾಗಿ ಭಾರತವು ಚೀನಾವನ್ನು ಮರಳಿ ಸುತ್ತುವರಿಯುವ 'ನೆಕ್ಲೆಸ್ ಆಫ್ ಡೈಮಂಡ್ಸ್' ಕಾರ್ಯತಂತ್ರವನ್ನು ಬಳಸುತ್ತಿದೆ. ಇದಕ್ಕಾಗಿ ಚೀನಾದ ಗಡಿಗೆ ಹೊಂದಿಕೊಂಡಿರುವ ಮತ್ತು ಹಿಂದೂ ಮಹಾಸಾಗರದ ಆಯಕಟ್ಟಿನ ದೇಶಗಳೊಂದಿಗೆ ಭಾರತ ಮಿಲಿಟರಿ ಒಪ್ಪಂದ ಮಾಡಿಕೊಂಡಿದೆ. ಇರಾನ್‌ನ ಚಾಬಹಾರ್ ಬಂದರು, ಓಮನ್‌ನ ಡುಕ್ಮ್ ಬಂದರು, ಸೀಶೆಲ್ಸ್‌ನ ಅಸಂಪ್ಷನ್ ದ್ವೀಪದಲ್ಲಿ ಭಾರತೀಯ ನೌಕಾಪಡೆಗೆ ಪ್ರವೇಶ ಮತ್ತು ನೆಲೆ ಸಿಕ್ಕಿದೆ. ಇನ್ನು ಇಂಡೋನೇಷ್ಯಾದ ಸಬಾಂಗ್ ಬಂದರು ಮತ್ತು ಸಿಂಗಾಪುರ ಚಾಂಗಿ ನೌಕಾ ನೆಲೆಯಲ್ಲಿ ಭಾರತೀಯ ಯುದ್ಧನೌಕೆಗಳಿಗೆ ಇಂಧನ ಮರುಪೂರಣದ ಸೌಲಭ್ಯವಿದೆ. ಇಂಡೋ- ಪೆಸಿಫಿಕ್ ವಲಯದಲ್ಲಿ ಚೀನಾದ ಆಕ್ರಮಣವನ್ನು ತಡೆಯಲು ಭಾರತವು ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡಿರುವ ಕ್ವಾಡ್ ಒಕ್ಕೂಟವನ್ನು ರಚಿಸಿದೆ. ಇನ್ನು ಸಿಲಿಗುರಿ ಕಾರಿಡಾರ್‌ನಲ್ಲಿ ಹೆಚ್ಚುವರಿ ಸೇನಾ ತುಕಡಿಗಳು ಮತ್ತು ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಗಳನ್ನು ನಿಯೋಜಿಸಿದೆ. ಜತೆಗೆ ಚೀನಾದ ಹೂಡಿಕೆಯ ಮೇಲೂ ನಿಯಂತ್ರಣವನ್ನು ಹೇರಿದೆ.

ಚೀನಾದ ಸ್ಟ್ರಿಂಗ್ ಆಫ್ ಪರ್ಲ್ಸ್

ಚೀನಾಕ್ಕೆ ಬೇಕಾದ ಶೇ.80ಕ್ಕೂ ಹೆಚ್ಚು ತೈಲ ಆಮದು ಮಧ್ಯಪ್ರಾಚ್ಯ ಮತ್ತು ಆಫ್ರಿಕಾದಿಂದ ಹಿಂದೂ ಮಹಾಸಾಗರದ ಮೂಲಕವೇ ನಡೆಯುತ್ತದೆ. ಆದ್ದರಿಂದ ಈ ಸಾಗರದ ಮೇಲೆ ಹಿಡಿತ ಸಾಧಿಸಲು ಚೀನಾ ಪ್ರಯತ್ನಿಸುತ್ತಲೇ ಇದೆ. ಇದಕ್ಕೆ ಇಲ್ಲಿ ಅಡ್ಡಿಯಾಗುವುದು ಭಾರತ. ಆದ್ದರಿಂದ ಭಾರತವನ್ನು ನಿಯಂತ್ರಿಸಲು ಚೀನಾ ಸ್ಟ್ರಿಂಗ್ ಆಫ್ ಪರ್ಲ್ಸ್ ಎಂಬ ಕುಣಿಕೆಯನ್ನು ಸುತ್ತುತ್ತಿದೆ. ಈ ತಂತ್ರದ ಮೂಲಕ ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮಾಲ್ಡೀವ್ಸ್, ಮ್ಯಾನ್ಮಾರ್, ಪಾಕಿಸ್ತಾನ, ಜಿಬೂಟಿಗಳಲ್ಲಿ ನೌಕಾನೆಲೆಗಳನ್ನು ಸ್ಥಾಪಿಸಿ ಭಾರತವನ್ನು ಸುತ್ತುವರಿದಿದೆ. ಈ ಮೂಲಕ ಅಗತ್ಯ ಸಂದರ್ಭದಲ್ಲಿ ಭಾರತವನ್ನು ಒತ್ತಡಕ್ಕೆ ಸಿಲುಕಿಸುವ ಯೋಜನೆ ರೂಪಿಸುತ್ತಿದೆ.

ಗ್ರೇಟರ್ ನಿಕೋಬಾರ್ ಯೋಜನೆ

ಬಂಗಾಳ ಕೊಲ್ಲಿಯ ತುದಿಯಲ್ಲಿರುವ ಅಂಡಮಾನ್ ನಿಕೋಬಾರ್ ದ್ವೀಪವನ್ನು ಭಾರತ ಅತ್ಯಂತ ಶಕ್ತಿಶಾಲಿ ಮಿಲಿಟರಿ ಹಬ್ ಆಗಿ ಪರಿವರ್ತಿಸುತ್ತಿದೆ. ಭಾರತದ ಏಕೈಕ ತ್ರಿವಳಿ ಸೇನಾ ಜಂಟಿ ಕಮಾಂಡ್ ಇದಾಗಿದೆ. ಈಗ ಗ್ರೇಟರ್ ನಿಕೋಬಾರ್‌ನಲ್ಲಿ ಬೃಹತ್ ಮಿಲಿಟರಿ ಮತ್ತು ಆಯಕಟ್ಟಿನ ನೆಲೆಯನ್ನು ವೇಗವಾಗಿ ಅಭಿವೃದ್ಧಿಪಡಿಸುತ್ತಿದೆ. ನಿಕೋಬಾರ್ ದ್ವೀಪವು ಇಂಡೋನೇಷ್ಯಾದ ಸುಮಾತ್ರಾ ಮತ್ತು ಚೀನಾದ ಜೀವನಾಡಿಯಾಗಿರುವ 'ಮಲಕ್ಕಾ ಜಲಸಂಧಿ'ಗೆ ಅತ್ಯಂತ ಸಮೀಪದಲ್ಲಿದೆ (ಕೇವಲ 150 ಕಿ.ಮೀ ದೂರ). ಜಗತ್ತಿನ ಅತ್ಯಂತ ಸುಧಾರಿತ ಯುದ್ಧವಿಮಾನಗಳಾದ ರಫೇಲ್ ಮತ್ತು ಸುಖೋಯ್ 'ಸು-30' ಹಾಗೂ ಭಾರತದ ಬೃಹತ್ ಸರಕು ಸಾಗಣೆ ವಿಮಾನಗಳು ಹಗಲು-ರಾತ್ರಿ ಯಾವುದೇ ಸಮಯದಲ್ಲಿ ಲ್ಯಾಂಡ್ ಆಗಲು ಮತ್ತು ಕಾರ್ಯಾಚರಣೆ ನಡೆಸಲು ಅನುಕೂಲವಾಗುವಂತೆ ಇಲ್ಲಿನ ರನ್‌ವೇಯನ್ನು ವಿಸ್ತರಿಸಲಾಗುತ್ತಿದೆ. ಭಾರತದ ಬೃಹತ್ ಯುದ್ಧನೌಕೆಗಳು, ವಿಧ್ವಂಸಕ ನೌಕೆಗಳು ಮತ್ತು ಪರಮಾಣು ಜಲಾಂತರ್ಗಾಮಿಗಳು ಇಲ್ಲಿ ಬಂದು ನಿಲ್ಲಲು ಮತ್ತು ಇಂಧನ ಮರುಪೂರಣ ಮಾಡಿಕೊಳ್ಳಲು ಬೃಹತ್ ಬಂದರನ್ನು ನಿರ್ಮಿಸಲಾಗುತ್ತಿದೆ. ಇದೇ ಯೋಜನೆಗೆ ಇತ್ತೀಚೆಗೆ ರಾಹುಲ್ ಗಾಂಧಿ ವಿರೋಧ ವ್ಯಕ್ತಪಡಿಸಿದ್ದರು.

santhosh.kumar2@timesofindia.com

ಪಾರಂಪರಿಕ ಬೆಳೆತಳಿಗಳ ಕಾವಲುಗಾರ ಫನಿ

ಜೀವಯಾನ



ಪ್ರಸನ್ನ ಆಡುವಳ್ಳಿ

ಮಳೆಗಾಲ ಬಂದರೂ ಮಾವಿನ ಹಣ್ಣಿನ ಕಾಲ ಮುಗಿದಂತಿಲ್ಲ, ಹಣ್ಣು ಹೆಚ್ಚಿಗೊರಟು ಕಾಣುವಂತೆ ಚೀಪುತ್ತ ತಿಂದಿದ್ದಷ್ಟೇ ಅಲ್ಲ, ಸಾಸಿವೆ, ಸೀಕರಣೆ, ಎಲ್ಲಾ ತಿಂದು, ಜ್ಯೂಸು, ಅಪ್ಪೆಹುಳಿ ಸಾರು ಮಾಡಿ ಕುಡಿದುಬಿಟ್ಟಿದ್ದೇವೆ., ಕೇಸರಿ, ಬಾದಾಮಿ, ಅಪೂಸು, ಬಂಗನಪಲ್ಲಿ, ಕಾಟುಮಾವು ಇತ್ಯಾದಿಗಳಲ್ಲಿ ನಮಗಿಷ್ಟವಾದ್ದೇ ಶ್ರೇಷ್ಠ ಎಂಬ ಹುಸಿ ವಾದಗಳನ್ನೂ ಮಾಡಿ ಮುಗಿಸಿದ್ದೇವೆ. ಹಾಗಿದ್ದೂ ಹೊಸ ಬಗೆಯ ಬಣ್ಣದ, ಆಕಾರದ ಮಾವಿನ ಹಣ್ಣು ಮಾರುಕಟ್ಟೆಯಲ್ಲಿ ಕಂಡಾಕ್ಷಣ ಅದನ್ನು ಕೊಂಡು, ರುಚಿ ನೋಡಿ ವಿಮರ್ಶಿಸುವವರೆಗೆ ಬಹುತೇಕರಿಗೆ ಸಮಾಧಾನವಿಲ್ಲ.

ಮಾವು ಭಾರತದ್ದೇ ಹಣ್ಣಷ್ಟೇ? ಸೀತಾಫಲ, ಸೇಬು, ಪಪ್ಪಾಯ, ಸೀಬೆಗಳಂತೆ ಶತಮಾನಗಳ ಇತ್ತೀಚೆಗೆ ಸಮುದ್ರ ದಾಟಿ ಬಂದಿದ್ದಲ್ಲ, ಹೀಗಾಗಿ ಭಾರತದುದ್ದಕ್ಕೂ ನೂರಾರು ಬಗೆಯ ಮಾವಿನ ತಳಿಗಳಿವೆ. ಅಲ್ಲಿನ ಸ್ಥಳೀಯ ಮಣ್ಣು, ಬಿಸಿಲು, ಮಳೆಗೆ ಒಗ್ಗಿಕೊಂಡು ವಿಶಿಷ್ಟ ಬಗೆಯ ಫಲ ನೀಡುವ ಒಳಪ್ರಭೇಧಗಳಿವೆ. ರೈತರೂ ಕೆಲವು ತಳಿಗಳ ರುಚಿ, ಪರಿಮಳ, ಬಣ್ಣಕ್ಕೆ ಮಾರುಹೋಗಿ, ಜತನವಾಗಿ ಆಯ್ದು, ನೂರಾರು ವರ್ಷಗಳಿಂದ ಕಾಪಾಡಿ ಬೆಳೆಸಿದ ಬಗೆಬಗೆಯ ತಳಿಗಳಿವೆ.

ನೀವು ಮಾರುಕಟ್ಟೆಯಲ್ಲಿ ಕಾಣುವ ಮೂರು ಮತ್ತೊಂದು ತಳಿಯನ್ನಷ್ಟೇ ಬಲ್ಲವರಾದರೆ ಮಂಡ್ಯದ ಮಳವಳ್ಳಿಯ ಕಿರುಗಾವಲಿನ ಸೈಯದ್ ಫನಿ ಖಾನ್ ಅವರ ತೋಟಕ್ಕೆ ಹೋಗಬೇಕು. ಅಲ್ಲಿ ನೂರಕ್ಕೂ ಅಧಿಕ ತಳಿಯ ಮಾವಿನ ಮರಗಳಿವೆ. ಪ್ರತಿಯೊಂದರ ರುಚಿ, ಪರಿಮಳ, ಆಕಾರವೂ ಭಿನ್ನ. ತೋಟದ ತುಂಬ ಬೆಳೆದು ನಿಂತ ಶತಮಾನಕ್ಕೂ ಹಳೆಯ ಮರಗಳಲ್ಲಿ ಇರುವ ಬಗೆಬಗೆಯ ಮಾವಿನ ಹಣ್ಣುಗಳನ್ನು ಸವಿದೇ ನೋಡಬೇಕು. ಕೆಲವು ಸಪ್ಪೆ, ಕೆಲವು ಅತಿಸಿಹಿ, ಮತ್ತೆ ಕೆಲವನ್ನು ತಿಂದರೆ ಅದು ಮೂಸಂಬಿಯೋ ಎನಿಸುವಷ್ಟು ಭಿನ್ನ ಪರಿಮಳ. ಪ್ರತಿಯೊಂದಕ್ಕೂ ಫನಿ ಅವರ ಕುಟುಂಬ ಪಾರಂಪರಿಕವಾಗಿ ವಿಶಿಷ್ಟ ಹೆಸರುಗಳನ್ನು ಇಟ್ಟಿದೆ. ಸಬ್ ಕಾ ಆಮ್, ಮಂಜೇಭಿ ಪಸಂದ್, ಕವ್ವಾ ಪಸಂದ್... ಹೀಗೆ ಪ್ರತಿಯೊಂದಕ್ಕೂ ಅದರ ಗುಣವಿಶೇಷವನ್ನು ಹೇಳುವ ಹೆಸರುಗಳಿವೆ, ಪ್ರತಿ ಹೆಸರಿನ ಹಿಂದೆಯೂ ಒಂದೊಂದು ಕತೆಯಿದೆ.

ಸೈಯದ್ ಫನಿ ಖಾನ್ ಅವರ ತೋಟಕ್ಕೆ ವಿಶಿಷ್ಟ ಇತಿಹಾಸವಿದೆ. ಟಿಪ್ಪು ಸುಲ್ತಾನನ ಕಾಲದಲ್ಲಿ ಅವನು ಸೈನಿಕರಿಗೆ ಒಂದಿಷ್ಟು ಭೂಮಿ ಕೊಟ್ಟು ಅಲ್ಲಿ ಕೃಷಿ ಮಾಡಲು ಪ್ರೋತ್ಸಾಹಿಸುತ್ತಿದ್ದನಷ್ಟೇ. ಟಿಪ್ಪುವಿನ ಸಸ್ಯಪ್ರೀತಿ ಇತಿಹಾಸದಲ್ಲಿ ಸಾಕಷ್ಟು ದಾಖಲಾಗಿದೆ. ಬೆಂಗಳೂರಿನ ಲಾಲ್‌ಬಾಗ್, ಶ್ರೀರಂಗಪಟ್ಟಣದ ಉದ್ಯಾನವನಗಳಷ್ಟೇ ಅಲ್ಲ, ಇನ್ನೂ ಹತ್ತಾರು ಕಡೆಗಳಲ್ಲಿ ಬಗೆಬಗೆಯ ವಿಶಿಷ್ಟ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಿದ್ದ. ಗಂಜಾಮಿನ ಅತ್ತಿಹಣ್ಣು, ದೇವನಹಳ್ಳಿಯ ಚಕ್ಕೋತಾ... ಹೀಗೆ ಹತ್ತಾರು ಬಗೆಯ ವಿದೇಶಿ ಮೂಲದ ತಳಿ-ಬೆಳೆಗಳನ್ನು ಪರಿಚಯಿಸಿದ್ದ. ಬ್ರಿಟಿಷರ ವಿರುದ್ಧ ಹೋರಾಡಲು ನೆಪೋಲಿಯನ್‌ನ ಸಹಕಾರ ಕೇಳಿದ ಪತ್ರದಲ್ಲೇ ಯುರೋಪಿನ ಹಣ್ಣು, ಇತರ ಬೆಳೆಗಳ ಬೀಜಗಳನ್ನೂ, ಅದನ್ನು ಬೆಳೆಸಲು ಬಲ್ಲ ಯುರೋಪಿಯನ್ನರನ್ನೂ ಮೈಸೂರಿಗೆ ಕಳಿಸಬೇಕೆಂದು ಟಿಪ್ಪು ಕೇಳಿಕೊಂಡಿದ್ದುಂಟು.

ಸೈಯದ್ ಫನಿ ಅವರ ಕಿರುಗಾವಲಿನ ತೋಟವೂ ಆ ಕಾಲದ್ದು. ಅವರ ಪೂರ್ವಿಕರು ನೂರಾರು ವರ್ಷಗಳ ಹಿಂದೆ ನೆಟ್ಟು ಬೆಳೆಸಿದ ಮಾವಿನ ಮರಗಳು ಇಂದಿಗೂ ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಂಡಿವೆ. ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳೂ ಕೆಲವು ಮರಗಳು ಎರಡು ಶತಮಾನಕ್ಕೂ ಹಳೆಯವೆಂದು ವೈಜ್ಞಾನಿಕವಾಗಿ ಕಾರ್ಬನ್ ಡೇಟಿಂಗ್ ಮಾಡಿ ಪ್ರಮಾಣಿಸಿದ್ದಾರೆ.

ಟಿಪ್ಪುವಿನ ಮರಣಾನಂತರ ಬ್ರಿಟಿಷರು ಮೈಸೂರಿನ ಜನಜೀವನದ ಬಗ್ಗೆ ಬುಕಾನನ್‌ನಿಂದ ಸರ್ವೆ ಮಾಡಿಸಿದ್ದರಷ್ಟೇ. ಹಾಗೆಯೇ, ಊರೂರು ಸುತ್ತುತ್ತ ಮಳವಳ್ಳಿಗೆ ಬಂದ ಬುಕಾನನ್ ಅಲ್ಲಿ ಸುತ್ತಮುತ್ತ ಸಾಕಷ್ಟು ಮಾವಿನ ತೋಪುಗಳಿದ್ದವೆಂದು ತನ್ನ ಪಯಣದ ದಾಖಲಿಸುವ ಪುಸ್ತಕದಲ್ಲಿಯೂ ನಮೂದಿಸಿದ್ದಾನೆ. ಬಳಿಕ ಬಂದ ಮೈಸೂರು ಅರಸರ ಕಾಲದಲ್ಲಿ ನೀರಾವರಿಯ ವ್ಯವಸ್ಥೆ ಸುಗಮವಾಗುತ್ತಲೇ ಭತ್ತದ ಕೃಷಿ ಹೆಚ್ಚಾಗತೊಡಗಿತು. ಹಳೆಯ ಕಾಲದ ಮಾವಿನ ಮರಗಳನ್ನೆಲ್ಲ ಕಡಿದು ಸಾಗಿಸಲಾಯ್ತು ಎನ್ನುತ್ತಾರೆ ಫನಿ ಖಾನ್. ಈಗ ಅವರ ತೋಟದ ತುಂಬೆಲ್ಲ ಇರುವ ಮಾವಿನ ಮರಗಳ ನಡುವೆಯೇ ಭತ್ತವನ್ನೂ ಬೆಳೆಯುತ್ತ, ಮರ ಆಧಾರಿತ ಕೃಷಿಯ ಸಾಧ್ಯತೆಗಳನ್ನು ತೋರಿಸುತ್ತಿದ್ದಾರೆ.

ಕಿರುಗಾವಲಿನ ಈ ತೋಟದಲ್ಲಿ ಇನ್ನೊಂದು ವಿಶೇಷವಿದೆ. ಭಾರತದ ಉದ್ದಗಲದ ಸುಮಾರು ಸಾವಿರದ ಮುನ್ನೂರಕ್ಕೂ ಅಧಿಕ ಬಗೆಯ ಸಾಂಪ್ರದಾಯಿಕ ಭತ್ತದ ತಳಿಗಳು ಸೈಯದ್ ಫನಿ ಖಾನರ ಸಂಗ್ರಹದಲ್ಲಿದೆ. ತಮ್ಮ ಮನೆಯ ಮಹಡಿಯಲ್ಲೇ ಪುಟ್ಟ ಭತ್ತ ಸಂಗ್ರಹಾಲಯ ಮಾಡಿ ಪ್ರತಿಯೊಂದನ್ನೂ ಅಚ್ಚುಕಟ್ಟಾಗಿ ಜೋಡಿಸಿ, ಅದರ ಹೆಸರು, ಗುಣಲಕ್ಷಣಗಳ ವಿವರ ಬರೆದಿಟ್ಟಿದ್ದಾರೆ. ಅಷ್ಟೇ ಅಲ್ಲ, ಪ್ರತಿವರ್ಷ ಆ ಬೀಜಗಳನ್ನು ಬಿತ್ತಿ ಆಸಕ್ತರಿಗೆ ಹಂಚುತ್ತಾರೆ.

ಕಾಡಿನಲ್ಲಿನ ವೈವಿಧ್ಯವಷ್ಟೇ ಅಲ್ಲ, ಪ್ರತಿ ಪ್ರಭೇಧದೊಳಗಿನ ಇಂಥ ತಳಿ-ವಿಶಿಷ್ಟತೆಗಳನ್ನೂ ಉಳಿಸಿಕೊಳ್ಳುವುದು ಬಹುಮುಖ್ಯ. ಏಕ ಬೆಳೆ ಕೃಷಿಯ ಹಾಗೆಯೇ ಏಕ ತಳಿಯ ಕೃಷಿಯೂ ಅಪಾಯಕಾರಿಯೇ. ತುಸು ಹವಾಮಾನ ಬದಲಾದರೂ, ಕೀಟಾದಿ ಜಂತುಗಳು ಬಂದಾಗ ಏಕತಳಿಯ ಬೆಳೆ ಬಲಿಯಾಗುವುದೇ ಹೆಚ್ಚು.

ಏಕಬೆಳೆ- ತಳಿ ಕೃಷಿಯು ಮಾಡಬಹುದಾದ ಅವಾಂತರಗಳಿಗೆ ಹತ್ತೊಂಬತ್ತನೆಯ ಶತಮಾನದ ನಡುಭಾಗದಲ್ಲಿ ಐರ್ಲೆಂಡಿನಲ್ಲಿ ನಡೆದ ಬರಗಾಲವೇ ಸಾಕ್ಷಿ. ಸೂಕ್ಷ್ಮಾಣು ಜೀವಿಯೊಂದು ಉಂಟುಮಾಡುವ ಆಲೂಗಡ್ಡೆ ಕೊಳೆ ರೋಗ ಕೆಲವೇ ವರ್ಷಗಳಲ್ಲಿ ಐರ್ಲೆಂಡಿನಲ್ಲಿ ಆಹಾರ ಕೊರತೆಯನ್ನುಂಟುಮಾಡಿತು. ಭೀಕರ ಬರಗಾಲಕ್ಕೆ ಸುಮಾರು 10 ಲಕ್ಷ ಜನ ಬಲಿಯಾದರು. ಆಹಾರ ಹುಡುಕಿ ಅಷ್ಟೇ ಸಂಖ್ಯೆಯ ಜನ ಗುಳೆಹೋದರು. ಒಂದು ದಶಕದ ಅವಧಿಯಲ್ಲಿ ದೇಶದ ಜನಸಂಖ್ಯೆಯ ಕಾಲುಭಾಗ ಕಡಿಮೆಯಾಗಿಹೋಯ್ತು. ಆಲೂಗಡ್ಡೆಯ ಮೂಲಸ್ಥಳವಾದ ಮಧ್ಯ ಹಾಗೂ ದಕ್ಷಿಣ ಅಮೆರಿಕದಲ್ಲಿ ಹುಡುಕಿದ್ದರೆ ಹತ್ತಾರು ರೋಗ ನಿರೋಧಕ ತಳಿಗಳಿದ್ದವು. ಅವುಗಳು ಹೆಚ್ಚೇನೂ ಇಳುವರಿ ನೀಡದಿದ್ದರೂ ಅವುಗಳ ರೋಗ ನಿರೋಧಕ ಗುಣವನ್ನು ಬಳಸಿ ಹೊಸ ತಳಿಗಳನ್ನು ಮಾಡಿದ್ದರೆ ಆ ದೇಶದ ಭವಿಷ್ಯವೇ ಬದಲಾಗುತ್ತಿತ್ತು.

ಮಾವಿನ ತಳಿ ನಡುವೆ ಸೈಯದ್ ಫನಿ ಖಾನ್

"ದಶಕಗಳ ಹಿಂದೆ ತೋಟದ ಮಾವನ್ನು ಹರಾಜು ಪಡೆಯಲು ಜನ ಸಾಲುಗಟ್ಟಿ ಕಾದಿರುತ್ತಿದ್ದರು. ಈಗ ಮಾರುಕಟ್ಟೆಯ ಮಾಮೂಲಿ ತಳಿಗಳ ನಡುವೆ ಇಂಥ ಅಪರೂಪದ ತಳಿಯ ಮಾವುಗಳಿಗೆ ಬೇಡಿಕೆ ಕಡಿಮೆಯಾಗಿದೆ," ಎನ್ನುತ್ತಾರೆ ಸೈಯದ್ ಫನಿ ಖಾನ್. ಕೃಷಿ ವಿಶ್ವವಿದ್ಯಾಲಯಗಳಂಥ ಸಂಸ್ಥೆಗಳು ಮಾಡಬೇಕಾದ ಕೆಲಸವನ್ನು ಕಿರಿಗಾವಲಿನ ಸೈಯದ್ ಫನಿ ಖಾನ್, ಕಳೆದ ಬಾರಿ ಪದ್ಮ ಪುರಸ್ಕೃತರಾದ ಕಾಸರಗೋಡಿನ ಸತ್ಯನಾರಾಯಣ ಬೇಳೇರಿಯಂಥ ರೈತರು ಮಾಡುತ್ತಿದ್ದಾರೆ. ಹೆಚ್ಚೆಂದರೆ ಒಂದಿಷ್ಟು ಪ್ರಶಸ್ತಿ ನೀಡಿ ಸರಕಾರಗಳೂ ಕೈತೊಳೆದುಕೊಳ್ಳುತ್ತಿವೆ.

ಬದಲಾಗುತ್ತಿರುವ ಹವಾಮಾನದಿಂದಾಗಿ ಮುಂಬರುವ ದಿನಗಳಲ್ಲಿ ಕೃಷಿಗೆ ಹೊಸ ಸವಾಲುಗಳು ಎದುರಾಗಲಿವೆ. ಹೊಲ-ತೋಟಗಳಲ್ಲಿನ ಜೀವವೈವಿಧ್ಯ ಇದ್ದಾಗಲಷ್ಟೇ ನಮ್ಮ ಊಟದ ಬಟ್ಟಲು ತುಂಬಲಿದೆ. ಮಾರುಕಟ್ಟೆಯಲ್ಲಿ ಅಪೂಸು, ಬಂಗನಪಲ್ಲಿಗಳಷ್ಟೇ ಇದ್ದರೆ ಏನು ಚಂದ ಹೇಳಿ? ಅಲ್ಲಿ ಕಾಟುಮಾವಿಗೂ ತುಸು ಜಾಗವಿರಲಿ.

ವಾಚಕರ ವಿಜಯ

ಆರೋಗ್ಯ ಸಂಜೀವಿನಿಯ ವೈಫಲ್ಯ

ಸರಕಾರಿ ನೌಕರರು ಮತ್ತು ಅವರ ಕುಟುಂಬಗಳಿಗೆ ನಗದು ರಹಿತ ಚಿಕಿತ್ಸೆ ನೀಡುವ ಉದ್ದೇಶದ 'ಆರೋಗ್ಯ ಸಂಜೀವಿನಿ' ಯೋಜನೆ ಅಕ್ಷರಶಃ ಹಳ್ಳ ಹಿಡಿದಿದೆ. ನೌಕರರ ವೇತನದಿಂದ ಪ್ರತಿ ತಿಂಗಳು ಭಾರಿ ಮೊತ್ತವನ್ನು ಕಡಿತಗೊಳಿಸುತ್ತಿದ್ದರೂ, ನೌಕರರಿಗೆ ಯಾವುದೇ ಪ್ರಯೋಜನ ಸಿಗುತ್ತಿಲ್ಲ. ನಿಗದಿಪಡಿಸಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಹೋದರೆ, ಆಸ್ಪತ್ರೆಯವರು ಯೋಜನೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿ ನಗದು ಪಾವತಿಸುವಂತೆ ಸೂಚಿಸುತ್ತಿದ್ದಾರೆ. ಅನಿವಾರ್ಯವಾಗಿ ನಗದು ಪಾವತಿಸಿ ಚಿಕಿತ್ಸೆ ಪಡೆದರೆ, ವೈದ್ಯಕೀಯ ಮರುಪಾವತಿ (Medical Reimbursement) ಪಡೆಯಲು ಹೋದಾಗ 'ಅನುದಾನವಿಲ್ಲ' ಎಂಬ ಉತ್ತರ ಸಿಗುತ್ತಿದೆ. ಇತ್ತ ವೈದ್ಯಕೀಯ ಭತ್ಯೆಯೂ ಇಲ್ಲ, ಅತ್ತ ಯೋಜನೆಯ ಪ್ರಯೋಜನವೂ ಇಲ್ಲದೆ ನೌಕರರು ಪರದಾಡುವಂತಾಗಿದೆ. ಈ ಅವ್ಯವಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರಕಾರ ತಕ್ಷಣವೇ ಸ್ಪಂದಿಸಬೇಕು. ಸರಕಾರಿ ನೌಕರರ ಸಂಘಟನೆಗಳು ಕೇವಲ ಯೋಜನೆ ಜಾರಿಯಾದಾಗ ಹೆಮ್ಮೆ ಪಡದೆ, ಅದರ ವಾಸ್ತವತೆಯನ್ನು ಪರಿಶೀಲಿಸಿ ನೌಕರರಿಗೆ ಸಕಾಲದಲ್ಲಿ ಸೌಲಭ್ಯ ಸಿಗುವಂತೆ ಒತ್ತಾಯಿಸಬೇಕೆಂದು ಈ ಮೂಲಕ ಕೋರಿಕೆ.

- ಸುಜ್ಜಲೂರು ವಿಜಯ್ ಸಣ್ಣಮಾದಯ್ಯ ತಿ. ನರಸೀಪುರ

ಹೈಮಾಸ್ಟ್ ಕಂಬಗಳ ಬಗ್ಗೆ ಎಚ್ಚರ

ನಗರ, ಪಟ್ಟಣಗಳ ವಿವಿಧ ಬಡಾವಣೆಗಳು, ಉದ್ಯಾನವನಗಳು ಮತ್ತು ವೃತ್ತಗಳಲ್ಲಿ ಅಳವಡಿಸಿರುವ ಹೈಮಾಸ್ಟ್ ಹಾಗೂ ಬೀದಿ ದೀಪದ ಕಬ್ಬಿಣದ ಕಂಬಗಳಲ್ಲಿ ಮಳೆಗಾಲದಲ್ಲಿ ವಿದ್ಯುತ್ ಸೋರಿಕೆ ಸಾಮಾನ್ಯವಾಗುತ್ತಿದೆ. ಇದರಿಂದ ಶಾಕ್ ಉಂಟಾಗಿ, ಜೀವಹಾನಿಯಾದ ಘಟನೆಗಳು ವರದಿಯಾಗುತ್ತಲೇ ಇವೆ. ಆದ್ದರಿಂದ, ನಾಗರಿಕರು ಇಂಥ ಕಬ್ಬಿಣದ ಹೈಮಾಸ್ಟ್ ಕಂಬಗಳ ಹತ್ತಿರ ಹೋಗದಂತೆ, ಅವುಗಳನ್ನು ಮುಟ್ಟದಂತೆ ಹಾಗೂ ಕಂಬಗಳಿಗೆ ಯಾವುದೇ ಬಗೆಯ ಕಟೌಟ್‌ಗಳನ್ನು ಕಟ್ಟದಂತೆ ಮುನ್ನೆಚ್ಚರಿಕೆ ವಹಿಸುವುದು ಒಳಿತು. ಸಾರ್ವಜನಿಕರ ಹಿತದೃಷ್ಟಿಯಿಂದ ಅಳವಡಿಸಿರುವ ಈ ಸೌಲಭ್ಯಗಳನ್ನು ಸುರಕ್ಷಿತವಾಗಿ ಬಳಸುವುದೇ ಸೂಕ್ತ.

- ಶರಣಪ್ಪ ಬೆಳಮ ಹೆಬಳಿ, ಕಲಬುರಗಿ

ಎಸ್‌ಐಆರ್‌ನಿಂದ ಅನ್ಯಾಯವಾಗದಿರಲಿ

ದೇಶದಲ್ಲಿ ಚುನಾವಣೆಗಳು ಪ್ರಾಮಾಣಿಕವಾಗಿ ನಡೆಯಬೇಕು, ಇದಕ್ಕೆ ಎಲ್ಲ ರಾಜಕೀಯ ಪಕ್ಷಗಳ ಸಹಕಾರವೂ ಅತ್ಯಗತ್ಯ. ಈಗ ನಡೆಯುತ್ತಿರುವ ಮತಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವ್ಯವಸ್ಥೆಯು ಒಂದು ನಿರ್ದಿಷ್ಟ ವರ್ಗದ ಮತದಾನದ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನ ಎಂದು ಕಾಂಗ್ರೆಸ್ ನಾಯಕರು ಆರೋಪಿಸುತ್ತಿದ್ದಾರೆ. ಇದು ಎಷ್ಟು ಸರಿಯೋ, ಇಲ್ಲವೋ... ಸಾಮಾನ್ಯರಾದ ನಮಗಂತೂ ತಿಳಿಯದು. ಆದರೆ, ಮತದಾನವು ಸಂವಿಧಾನದತ್ತವಾದ ಹಕ್ಕು, ಅದನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಯಾವುದೇ ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದು ಪ್ರಜಾಪ್ರಭುತ್ವಕ್ಕೆ ಮಾಡುವ ದ್ರೋಹವಾಗುತ್ತದೆ. ಎಸ್‌ಐಆರ್‌ನಿಂದ ಯಾರಿಗೂ ಅನ್ಯಾಯವಾಗದಿರಲಿ ಎಂಬುದೇ ಕಳಕಳಿ.

- ವಿ.ಜಿ. ಇನಾಮದಾರ ಸಾರವಾಡ

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. **Whatsapp: 63664 22240 E-mail:** editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:-** ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

ನಿತ್ಯ ಭವಿಷ್ಯ

ರಾಜಗುರು ದ್ವಾರಕನಾಥ್

ಪ್ರಶ್ನೆ: ಸೈನಿಕನಾಗಿ ನಿವೃತ್ತನಾಗಿದ್ದೇನೆ. ನನಗೆ ಬೇರೆ ಒಳ್ಳೆಯ ಕೆಲಸ ಸಿಗುವುದೆ?

ಜನ್ಮ ದಿನಾಂಕ: 04.08.1973 **ನಕ್ಷತ್ರ:** ಸ್ವಾತಿ

ಪರಿಹಾರ: ದೇಶವನ್ನು ಕಾಪಾಡಿದ ನಿಮಗೆ ಎಲ್ಲ ದೈವಗಳು ಒಲಿದು ಬಂದು ಭಾಗ್ಯದ ಬಾಗಿಲು ತೆರೆಯುತ್ತದೆ. ಮಹಾ ನಕ್ಷತ್ರದಲ್ಲಿ ಹುಟ್ಟಿದ ನೀವು ದೇಶ ಸೇವೆ ಮಾಡಿ ಪುಣ್ಯ ವೃದ್ಧಿಸಿಕೊಂಡಿರುವಿರಿ. ದುರ್ಗೆಯನ್ನು ಅನನ್ಯ ಪೂಜಿಸಿ, ಎಲ್ಲ ಕೆಲಸದಲ್ಲೂ ಜಯ ನಿಮ್ಮದೆ.

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 03-07-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಶ್ರವಣ.
ತಿಥಿ: ತದಿಗೆ. **ಯೋಗ:** ವಿಷ್ಕಂಭ.
ಕರಣ: ಭದ್ರ. **ವಾರ:** ಶುಕ್ರವಾರ.

ರಾಹು ಕಾಲ: ಬೆ. 10.30 - 12.00
ಗುಳಿಕ ಕಾಲ: ಬೆ. 7.30-9.00
ಯಮಗಂಡ ಕಾಲ: ಮ. 3.00-4.30
ಸೂರ್ಯಉದಯ: ಬೆ. 5.59 ಸೂರ್ಯಅಸ್ತ: ಸಂ. 6.48

ಪಬ್ಲಿಕ್ ಶಾಲೆಗಳಿಗೆ ₹1741 ಕೋಟಿ ಎಡಿಬಿ ನೆರವು

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ಆರಂಭಿಸಲು ಉದ್ದೇಶಿಸಿರುವ 500 ಕೆಪಿಎಸ್ ಶಾಲೆಗಳ ಅಭಿವೃದ್ಧಿಗೆ 1741.37 ಕೋಟಿ ರೂ. ಸಾಲ ನೀಡಲು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಒಪ್ಪಿಗೆ ನೀಡಿದೆ.

ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ, ಉದ್ಯೋಗಾವಕಾಶ ಸೃಷ್ಟಿಸುವ ಕೌಶಲಗಳನ್ನು ಕೆಪಿಎಸ್ ಶಾಲೆಗಳ ಮೂಲಕ ಬೋಧಿಸಲು ತಯಾರಿ ನಡೆದಿದ್ದು ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ನೆರವಿನ ಹಸ್ತ ಸಿಕ್ಕಿದೆ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ, ಗಣಿತ ಸೇರಿದಂತೆ ಸಮಗ್ರ ಕಲಿಕೆಗೆ ಪಬ್ಲಿಕ್ ಶಾಲೆಗಳಲ್ಲಿ ಆದ್ಯತೆ ನೀಡಲಾಗುತ್ತಿದ್ದು ಕಂಪನಿಗಳ ಅಗತ್ಯಕ್ಕೆ ತಕ್ಕ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲು ಕೂಡ ಚಿಂತನೆ ನಡೆದಿದೆ. "ದಕ್ಷಿಣ ಭಾರತದಲ್ಲಿ ಕರ್ನಾಟಕ ಅತಿ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯ. 15 ರಿಂದ 64 ವರ್ಷದೊಳಗಿನ ಶೇ. 70ರಷ್ಟು ದುಡಿಯುವ ವರ್ಗವನ್ನು ಕರ್ನಾಟಕ ಹೊಂದಿದೆ. ಆದರೆ, ಶೇ.48.3ರಷ್ಟು ಮಂದಿ ಮಾತ್ರ ಪದವಿಪೂರ್ವ ಹಂತದವರೆಗೆ ಶಿಕ್ಷಣ ಪಡೆದಿದ್ದಾರೆ. ಶೇ.30ರಷ್ಟು ಯುವಜನರಿಗೆ ಕೌಶಲಗಳನ್ನು ಕಲಿಸುವ ಮೂಲಕ ಉನ್ನತ ಶಿಕ್ಷಣ, ಉದ್ಯೋಗಾವಕಾಶ ಪಡೆಯಲು ನೆರವಾಗುವ ಅಗತ್ಯವಿದೆ. ಈ ಸವಾಲುಗಳು ಕರ್ನಾಟಕವನ್ನು ಜಾಗತಿಕ ತಂತ್ರಜ್ಞಾನದ ಹಬ್ ಆಗಿ ಬೆಳೆಯುವ ಕನಸಿಗೆ ಅಡ್ಡಿಯಾಗುತ್ತಿವೆ," ಎಂದು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಅಭಿಪ್ರಾಯಪಟ್ಟಿದೆ.

ಮೊದಲ ಬಾರಿ ಶಿಕ್ಷಣಕ್ಕೆ ನೆರವು: ಕರ್ನಾಟಕಕ್ಕೆ ಅತಿ ಹೆಚ್ಚಿನ ಮೊತ್ತದ ಸಾಲ ನೀಡುವ ಮೂಲಕ ದೇಶದಲ್ಲಿಯೇ ಮೊದಲ ಬಾರಿಗೆ ಸಾರ್ವಜನಿಕ ಶಿಕ್ಷಣಕ್ಕೆ ಅತಿದೊಡ್ಡ ಪ್ರಮಾಣದಲ್ಲಿ ಆರ್ಥಿಕ ಸಹಕಾರ ನೀಡಲು ಎಡಿಬಿ ಮುಂದಾಗಿದೆ. ಇದಕ್ಕೆ ಪೂರಕವಾಗಿ ಅತಿ ಕಡಿಮೆ ಆದಾಯ ಇರುವ ದೇಶಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿಗೆ ನೆರವು ನೀಡುವ ಇಂಟರ್ ನ್ಯಾಷನಲ್ ಫೈನಾನ್ಸ್ ಫೆಸಿಲಿಟಿ ಫಾರ್ ಎಜುಕೇಷನ್ ಕೂಡ ಕೈಜೋಡಿಸಿವೆ.

ಚುಡಾಯಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ

ಚಿಂತಾಮಣಿ (ಚಿಕ್ಕಬಳ್ಳಾಪುರ): ನಗರದ ನೂತನ್ ಶಾಲೆ ಬಳಿ ಪಾನಮತ್ತ ಪುಂಡರಿಬ್ಬರು ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿಯನ್ನು ಚುಡಾಯಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಯುವಕರ ಗುಂಪು ಬುಧವಾರ ರಾತ್ರಿ ವಿದ್ಯಾರ್ಥಿನಿ ಮನೆಗೆ ನುಗ್ಗಿದಾಂಧಲೆ ನಡೆಸಿದೆ.ತನ್ನ ತಂಗಿಯನ್ನು ಶಾಲೆಯಿಂದ ಕರೆದುಕೊಂಡು ಬರಲು ನೂತನ್ ಶಾಲೆ ಬಳಿ ಕಾಯುತ್ತಿದ್ದ ವೇಳೆ ಮೈಮುಟ್ಟಲು ಬಂದಿದ್ದ ಪಾನಮತ್ತ ಯುವಕರಿಬ್ಬರನ್ನು ವಿದ್ಯಾರ್ಥಿನಿ ಮೇಘನಾ ತಳ್ಳಿದ್ದಳು. ಚುಡಾಯಿಸಿದ್ದು ಏಕೆ ಎಂದು ವಿದ್ಯಾರ್ಥಿನಿ ತಾಯಿ ಪ್ರಶ್ನಿಸಿದ್ದಕ್ಕೆ ಆಕ್ರೋಶಗೊಂಡ ಯುವಕರ ಗುಂಪು ಮನೆಗೆ ನುಗ್ಗಿ ಮೇಘನಾಳನ್ನು ಥಳಿಸಿದ್ದಲ್ಲದೇ, ಒದ್ದು ಚಾಕುವಿನಿಂದ ಕುತ್ತಿಗೆ ಕೊಯ್ಯಲು ಯತ್ನಿಸಿದೆ. ಸ್ಥಳೀಯರು ಮೇಘನಾಳನ್ನು ರಕ್ಷಿಸಿದ್ದಾರೆ. ಕಾರ್ತಿಕ್, ಅಕ್ಷಯ್, ಗಂಗಾಧರ್, ವಿನೋದ್ ಸೇರಿದಂತೆ ಹಲವರ ವಿರುದ್ಧ ವಿದ್ಯಾರ್ಥಿನಿ ತಾಯಿ ನಗರ ಠಾಣೆಗೆ ದೂರು ನೀಡಿದ್ದು, ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಮಕ್ಕಳು ಮನೆ ತಲುಪುವವರೆಗೂ ಶಾಲೆಯೇ ಹೊಣೆ

ಬೆಂಗಳೂರು: ಶಾಲಾ ಬಸ್ ಶಾಲಾ ಆವರಣದಲ್ಲಷ್ಟೇ ಅಲ್ಲದೆ, ಮಗು ಬಸ್ ಹತ್ತಿದಾಗಿನಿಂದ ಸುರಕ್ಷಿತವಾಗಿ ಪೋಷಕರ ಬಳಿ ಸೇರುವವರೆಗೂ ರಕ್ಷಣೆಯ ಜವಾಬ್ದಾರಿ ಶಾಲಾ ಆಡಳಿತ ಮಂಡಳಿಯದ್ದೇ ಆಗಿರಲಿದೆ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಶಾಲಾ ಬಸ್ ಅಪಘಾತದಲ್ಲಿ ವಿದ್ಯಾರ್ಥಿಯೊಬ್ಬ ಕಣ್ಣು ಕಳೆದುಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿ ವಿರುದ್ಧದ ಪ್ರಕರಣ ರದ್ದುಪಡಿಸಲು ನಿರಾಕರಿಸಿದೆ.

ಶಾಲಾ ಬಸ್ ದುರಂತದಲ್ಲಿ 4ನೇ ತರಗತಿಯ ವಿದ್ಯಾರ್ಥಿ ಕಣ್ಣು ಕಳೆದುಕೊಂಡ ಸಂಬಂಧ ದಾಖಲಾಗಿದ್ದ ಪ್ರಕರಣ ರದ್ದುಕೋರಿ ಮಂಡ್ಯ ಜಿಲ್ಲೆಯ ಮದ್ದೂರಿನ ಖಾಸಗಿ ಶಾಲಾ ಆಡಳಿತ ಮಂಡಳಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಈ ಆದೇಶ ನೀಡಿ, ಅರ್ಜಿ ವಜಾಗೊಳಿಸಿದೆ.

"ಶಾಲಾ ಬಸ್‌ನಲ್ಲಿ ಮಕ್ಕಳ ಸುರಕ್ಷತೆ ಎನ್ನುವುದು ದಾಕ್ಷಿಣ್ಯ ವಿಷಯವಲ್ಲ, ಇದು 'ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಾವಳಿ-2018'ರಡಿ ಕಡ್ಡಾಯವಾಗಿ ಪಾಲಿಸಬೇಕಾದ ಶಾಸನಬದ್ಧ ಜವಾಬ್ದಾರಿ. ಮಗು ಶಾಲಾ ಬಸ್ ಹತ್ತಿದ ಮೇಲೆ, ಕೊನೆಯ ಸ್ಟಾಪ್ ಬರುವವರೆಗೂ ಶಾಲಾ ಮಂಡಳಿ ತಾನು ಹೊಣೆಗಾರರಲ್ಲ ಎಂದು ಹೇಳಲು ಸಾಧ್ಯವಿಲ್ಲ, ಹೀಗಾಗಿ, ಘಟನೆ ನಡೆದ ಸಂದರ್ಭದಲ್ಲಿ ಬಸ್‌ನಲ್ಲಿ ಅಟೆಂಡರ್ ಇದ್ದರೆ? ಸಿಸಿಟಿವಿ ಕೇವಲ 'ಅಲಂಕಾರಿಕ ವಸ್ತು' ಆಗಿತ್ತೇ ಅಥವಾ ಚಾಲನೆಯಲ್ಲಿತ್ತೆ? ನಿಷೇಧಿತ ಅಥವಾ ಅಪಾಯಕಾರಿ ವಸ್ತುಗಳನ್ನು ಮಕ್ಕಳು ಬಸ್‌ನೊಳಗೆ ತರಲು ಹೇಗೆ ಸಾಧ್ಯವಾಯಿತು? ಈ ಬಗ್ಗೆ ತನಿಖೆಯಿಂದಲೇ ಉತ್ತರ ಸಿಗಬೇಕಾಗಿದೆ," ಎಂದು ಪೀಠ ಪ್ರತಿಪಾದಿಸಿದೆ.

ಪಿಐಎಲ್ ತ್ವರಿತ ವಿಚಾರಣೆಗೆ ಮನವಿ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆಗಾಗಿ 516 ಎಕರೆ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳಲು ಸರಕಾರ ಹೊರಡಿಸಿರುವ ಅಧಿಸೂಚನೆ ರದ್ದುಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಪರಿಗಣಿಸುವಂತೆ ಅರ್ಜಿದಾರರು ಹೈಕೋರ್ಟ್‌ಗೆ ಗುರುವಾರ ಮನವಿ ಮಾಡಿದರು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಕಂಪ್ಲಾಪುರ ಗ್ರಾಮದ ಸಾಮಾಜಿಕ ಕಾರ್ಯಕರ್ತ ರಾಜೇಶ್ ಕಂಪ್ಲಾಪುರ ಬಸವಣ್ಣ ಅವರ ಅರ್ಜಿ ಆಲಿಸಿದ ಸಿಜೆ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠ, "ಕಚೇರಿ ಪರಿಶೀಲನೆ ನಡೆಸಿದ ನಂತರ 4ದಿನಗಳ ಬಳಿಕ ಅರ್ಜಿ ವಿಚಾರಣೆಗೆ ನಿಗದಿಯಾಗಲಿದೆ," ಎಂದು ತಿಳಿಸಿತು.

ಸಿಇಟಿ: ಅರ್ಜಿ ತಿದ್ದುಪಡಿಗೆ ಕೊನೆ ಅವಕಾಶ

ಬೆಂಗಳೂರು: ಸಿಇಟಿಗೆ ಸಲ್ಲಿಸಿರುವ ಅರ್ಜಿಯಲ್ಲಿನ ಮಾಹಿತಿ ತಿದ್ದುಪಡಿಗೆ ಅಭ್ಯರ್ಥಿಗಳ ಅರ್ಹತೆಗೆ ಅನುಗುಣವಾಗಿ ಜು.3ರಿಂದ 6ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕೆಇಎ ತಿಳಿಸಿದೆ.

ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಿಸಿರುವ ವಿವರಗಳನ್ನು ಮಾರ್ಪಾಡು ಮಾಡುವ ಮುನ್ನ ಅರ್ಜಿಯಲ್ಲಿ ಮುದ್ರಿತವಾಗಿರುವ ಮಾಹಿತಿ ಗಮನವಿಟ್ಟು ಪರಿಶೀಲಿಸಿ ನಂತರ ತಿದ್ದುಪಡಿ ಮಾಡಬೇಕು ಹಾಗೂ ಮೀಸಲು ವಿವರಗಳನ್ನು ತಪ್ಪದೆ ಪರಿಶೀಲಿಸಬೇಕು. ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರುವವರಿಗೆ ಇದು ಅನ್ವಯವಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ವಿವರಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಎಂಇ, ಎಂ.ಟೆಕ್ ಆಯ್ದ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಜು.10ರ ಬೆಳಗ್ಗೆ 10.30ರಿಂದ ಸಂಜೆ 4ರೊಳಗೆ ಮೂಲ ದಾಖಲೆ ಪರಿಶೀಲನೆಗೆ ಖುದ್ದು ಹಾಜರಾಗಲು ಸೂಚಿಸಲಾಗಿದೆ. ಪದವಿ ಪರೀಕ್ಷೆಯ ಎಲ್ಲ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳು, ಕೆಇಎ ಆನ್‌ಲೈನ್ ಅರ್ಜಿಯ ಪ್ರತಿ, ಗುರುತು ಚೀಟಿ ಹಾಗೂ ಇತರೆ ಅಗತ್ಯ ದಾಖಲೆಗಳನ್ನು ತರಬೇಕು. ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ರ‍್ಯಾಂಕಿಂಗ್ ನೀಡಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ. ಜೈವಿಕ ತಂತ್ರಜ್ಞಾನ, ಕೆಮಿಕಲ್ ಎಂಜಿನಿಯರಿಂಗ್, ಎನ್ವಿರಾನ್‌ಮೆಂಟಲ್ ಎಂಜಿನಿಯರಿಂಗ್, ಪಾಲಿಮರ್ ಸೈನ್ಸ್, ಜವಳಿ ತಂತ್ರಜ್ಞಾನ, ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ಇದು ಅನ್ವಯವಾಗುತ್ತದೆ.

ಬಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ

(ಸ್ವಾಯತ್ತ ಸಂಸ್ಥೆ)

ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಗಾವಿ – 590001. ಇ-ಮೇಲ್: belgaum.bims@gmail.com

ಸಂಖ್ಯೆ: ಬಿಮ್ಸ್/ಸಿಬ್ಬಂದಿ(1)/79/2026–27 ದಿನಾಂಕ: 02–07–2026

CORRIGENDUM TO RECRUITMENT ADVERTISEMENT DATED 11-06-2026

Applications are invited in the prescribed form from the eligible candidates for filling up of the following Posts for Super Speciality Hospital BIMS Belagavi. The last date of application is **18-07-2026 before 5.00 PM** and Interview date will be notified later on.

Sl. No.	Designation	Department	Vacant Post	Classification	Pay Scale	Age Limit
1	Professor (02)	1. Urology	1	GM (O) - 01 371(J) GM (O) - 01	144200-218200	GM - 42 Years + 5 years age relaxation OBC - 45 Years + 5 years age relaxation SC & ST - 47 Years + 5 years age relaxation
		2. Surgical Gastroenterology	1			
2	Associate Professor (07)	1. Neurology	1	SC (O) - 01 ST (O) - 01 GM (O) - 01 GM (W) - 01 GM (R) - 01 Cat-1 (O) - 01 371 (J) GM (O) - 01	131400-217100	GM - 39 Years + 5 years age relaxation OBC - 42 Years + 5 years age relaxation SC & ST - 44 Years + 5 years age relaxation
		2. Cardiology	1			
		3. Urology	1			
		4. Nephrology	1			
		5. Surgical Gastroenterology	1			
		6. Medical Gastroenterology	1			
		7. Plastic Surgery	1			
3	Assistant Professor (11)	1. Neurology	1	SC (O) - 01 SC (W) - 01 GM (O) - 01 GM (W) - 02 GM (R) - 01 GM (PH) - 01 ST (O) - 01 Cat-1 (O) - 01 2A (O) - 01 2B (O) - 01	79800-211500	GM - 35 Years + 5 years age relaxation OBC - 38 Years + 5 years age relaxation SC & ST - 40 Years + 5 years age relaxation
		2. Neurosurgery	1			
		3. Cardiology	1			
		4. Urology	1			
		5. Nephrology	1			
		6. Surgical Gastroenterology	1			
		7. Medical Gastroenterology	1			
		8. Plastic Surgery	1			
		9. Anaesthesiology	2			
		10. Endocrinology	1			

Note: 1) The application minimum Qualification, Experience & Instructions may be downloaded from the institute Website: **www.bimsbelgaum.karnataka.gov.in**
2) Above 5 years age relaxation is as per Government Order No. ಸಿಆಸುಇ 262 ಸೇನೆನಿ 2025 ದಿನಾಂಕ: 29–01–2026
3) Candidates who have already submitted their applications need not submit new application again.

ಸಹಿ/– ನಿರ್ದೇಶಕರು
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ,
ಬೆಳಗಾವಿ.

ವಾಸಾಸಂಇ/ಬೆಳಗಾವಿ/525/ಅಡ್ವರ್ಟೋ/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ

ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್, ಕಲಬುರಗಿ

ಸಂಖ್ಯೆ: ಕಕರಸಾ/ಕಾನಿಅ/ಡಿಬಿ/ಟೆ/265/2026–27 ದಿನಾಂಕ: 30/06/2026

:: ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ:02/2026–27 (2ನೇ ಕರೆ) ::

Through GOK e-procurement platform WWW.kppp.karnataka.gov.in

1) ಕಾಮಗಾರಿ ವಿವರ : ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೂತನ ಕೇಂದ್ರ ಕಛೇರಿ ಆಡಳಿತ ಕಟ್ಟಡವನ್ನು ನಿರ್ಮಿಸುವ ಕಾಮಗಾರಿ, 2) ಲೆಕ್ಕ ಶೀರ್ಷಿಕೆ: ಬಂಡವಾಳ ಮತ್ತು ಆಂತರಿಕ ಅನುದಾನ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ : ರೂ. **2000.00** ಲಕ್ಷ, ಗರಿಷ್ಠ ರೂ. **2000.00** ಲಕ್ಷ, 4) ಗುತ್ತಿಗೆದಾರರ ಅರ್ಹತೆ: ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ: **10–07–2026 ಸಾಯಂಕಾಲ 5:00 ಗಂಟೆಯವರೆಗೆ** 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **15–07–2026 ಸಾಯಂಕಾಲ 17.00 ಗಂಟೆಯವರೆಗೆ** 8) ಟೆಂಡರ್ ಬಿಡ್ ತೆರೆಯುವ ದಿನಾಂಕ: **17–07–2026 ಮುಂಜಾನೆ 11:00 ಗಂಟೆಯವರೆಗೆ,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033 / 08472–220663, 10) ಅಂತರಜಾಲ ತಾಣದ ವಿಳಾಸ: ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ. WWW.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/286/ಕೆ.ಎಸ್.ಎಂ.ಸಿ.&ಎ/2026–27

ಬನ್ನೇರುಘಟ್ಟ ಜೈವಿಕ ಉದ್ಯಾನವನ

ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ದೂರವಾಣಿ ಸಂಖ್ಯೆ: 080–29776466/67
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಟೆಂಡರ್/ಸಿವಿಲ್ ಕಾಮಗಾರಿ/ಸಿಆರ್–02/2026–27 ದಿನಾಂಕ: 29–06–2026

ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ರವರು **ಬನ್ನೇರುಘಟ್ಟ ಜೈವಿಕ ಉದ್ಯಾನವನದ ಮೃಗಾಲಯದೊಳಗೆ ನ್ಯೂ ಆಟರ್ ಹೋಲ್ಡಿಂಗ್ ಹೌಸ್ ನಿರ್ಮಾಣ ಕಾಮಗಾರಿ ಕೈಗೊಳ್ಳಲು** ಅರ್ಹ ಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಕರೆಯಲಾಗಿರುತ್ತದೆ.

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **30–06–2026 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ವಿಚಾರಣೆಗಳು ಮತ್ತು ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯ: **13–07–2026.** ನಿಗಧಿತ ಇ.ಎಂ.ಡಿ ಹಾಗೂ ಟೆಂಡರ್ ಪ್ರೊಸೆಸ್ಸಿಂಗ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **14–07–2026 ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **16–07–2026 ರಂದು ಬೆಳಿಗ್ಗೆ 11.30 ಗಂಟೆಗೆ.**

ಸಹಿ/–
ಉಪ ನಿರ್ದೇಶಕರು

ವಾಸಾಸಂಇ/ವಾ.ಪ್ರ/1440/ಅಡ್ವರ್ಟೋ/2026–27

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕೊಳ್ಳಪಟ್ಟಿದೆ)
3ನೇ ಮಹಡಿ, ಕೌಶಲ್ಯ ಭವನ, ಬನ್ನೇರುಘಟ್ಟ ಮುಖ್ಯರಸ್ತೆ, ಡೈರಿ ಸರ್ಕಲ್, ಬೆಂಗಳೂರು–560029.
ದೂ.ಸಂಖ್ಯೆ : 080–29522222. E-mail ID: skilldev.2017@gmail.com

No.:KSDC/CMKKY/RAMP/CR-41/2025-26 ದಿನಾಂಕ:01–07–2026

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ **"MSME-RAMP"** ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ನೊಂದಾಯಿತ ಬಿಡ್ಡುದಾರರು (Private VTP's) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯ ಶೀರ್ಷಿಕೆ: **"EOI from Private Vocational Training Providers to provide training under the MSME RAMP Scheme Call-2"** ಟೆಂಡರ್ ದಾಖಲೆಯ ಸಂಖ್ಯೆ:**KSDC/2026-27/PREQUAL_TENDER-NUMBER_9** ದಾಖಲೆ ಡೌನ್‌ಲೋಡ್ ಮಾಡಲು ಲಭ್ಯವಾಗುವ ದಿನಾಂಕ:**02–07–2026** & ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ: **15–07–2026.** ಇ–ಟೆಂಡರ್ ಅಧಿಸೂಚನೆಯ ದಾಖಲೆಗಳನ್ನು, ಟೆಂಡರ್ ಸಂಸ್ಕರಣ ಶುಲ್ಕಗಳು, ಇಎಂಡಿ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಪೋರ್ಟಲ್‌ನಲ್ಲಿ ಮತ್ತು ಸಹಾಯಕವಾಣಿ ಸಂಖ್ಯೆ: **Ph No:+91–9240214000/+91–9240214001** ಅಥವಾ ಕೆಲಸದ ಸಮಯದಲ್ಲಿ ನೀವು ಈ ಕಛೇರಿಯನ್ನು ಸಹ ಸಂಪರ್ಕಿಸಬಹುದು.

ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ
ಕಾರ್ಯನಿರ್ವಾಹಕ ನಿರ್ದೇಶಕರು–3
ಕೆ.ಎಸ್.ಡಿ.ಸಿ., ಬೆಂಗಳೂರು

ಡಿಐಪಿಆರ್/ಸಿಪಿ/1455/ಸಿಸಿಎಲ್/2026–27

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ

ವಿಶೇಷ ವಿಭಾಗ ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಸಂಖ್ಯೆ: ಕಾಇ/ಲೋಇ/ರಾ.ವಿ.ವಿ/ಟೆಂ–06/2026–27 ದಿನಾಂಕ: 01.07.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2026–27ನೇ ಸಾಲಿನಲ್ಲಿ ಅರ್ಹಗುತ್ತಿಗೆದಾರರಿಂದ **03 ಸಂಖ್ಯೆಯ ಅಂದಾಜು ಮೊತ್ತ ರೂ.100.00 ಲಕ್ಷದಿಂದ ರೂ. 200.00 ಲಕ್ಷಗಳವರೆಗಿನ** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇಎಂಡಿ ಮುಂತಾದ ಇತರೆ ಮಾಹಿತಿಗಳನ್ನು **http://kppp.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಚೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಟೆಂಡರ್ ಡಾಕ್ಯುಮೆಂಟ್‌ನ್ನು ದಿನಾಂಕ: **03.07.2026 ರಿಂದ 10.07.2026 ರವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು **ದಿನಾಂಕ: 10.07.2026 ವೇಳೆ 16.00 ಗಂಟೆಯೊಳಗೆ** ಸಲ್ಲಿಸುವುದು. 3) ಪ್ರೀ–ಬಿಡ್ ಸಭೆಯ ದಿನಾಂಕ: **07.07.2026ರ ಬೆಳಿಗ್ಗೆ 11.30 ಗಂಟೆಗೆ** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **13.07.2026 ಬೆಳಿಗ್ಗೆ 11:30 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ

DIPR/BSD/151/SA/2026-27

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
DR. MANMOHAN SINGH BENGALURU CITY UNIVERSITY

ಆಗು ನೀ ಅನಿಕೇತನ BE BOUNDLESS

ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಇ–ಮೇಲ್: registrar@bcu.ac.in

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ–ಪ್ರವೇಶ/2026-27/033 ದಿನಾಂಕ: 01.07.2026

2026–27ನೇ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2026–27ನೇ ಶೈಕ್ಷಣಿಕ ಸಾಲಿಗೆ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು / ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(**Through the UUCMS Online portal https://uucms.karnataka.gov.in/Login/Index**) ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ/ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು/ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:

ಕ್ರ.ಸಂ.	ಕೋರ್ಸುಗಳು	ಕೇಂದ್ರಗಳು
1	**ಕಲಾ ನಿಕಾಯ: ಎಂ.ಎ.:** 1. ಕನ್ನಡ 2. ಇಂಗ್ಲೀಷ್ 3. ಫ್ರೆಂಚ್ 4. ಜರ್ಮನ್ 5. ಸ್ಪಾನಿಷ್ 6. ಜಪಾನೀಸ್ 7. ಅರ್ಥಶಾಸ್ತ್ರ 8. ಇತಿಹಾಸ 9. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ 10. ರಾಜ್ಯಶಾಸ್ತ್ರ 11. ಸಮಾಜ ಶಾಸ್ತ್ರ 12. ಸಮಾಜಕಾರ್ಯ **ಪಿಜಿ ಡಿಪ್ಲೋಮಾ:** 1. ಚೈನಿಸ್ 2. ಜರ್ಮನ್ 3. ಜಪಾನೀಸ್ 4. ಫ್ರೆಂಚ್ 5. ಸ್ಪಾನಿಷ್ 6. ಕೋರಿಯನ್ 7. ಇಟಲಿಯನ್	ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜು ಮುಖ್ಯ ಆವರಣ.
	ವಿಜ್ಞಾನ ನಿಕಾಯ: ಎಂ.ಎಸ್ಸಿ: 1. ಭೌತಶಾಸ್ತ್ರ 2. ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4. ಜೀವರಸಾಯನಶಾಸ್ತ್ರ 5. ಪರಿಸರ ಮತ್ತು ಹವಮಾನ ಬದಲಾವಣೆ 6.ಸಸ್ಯಶಾಸ್ತ್ರ 7. ಪ್ರಾಣಿಶಾಸ್ತ್ರ 8. ಗಣಕ ವಿಜ್ಞಾನ 9.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ **ಸ್ವಯಂ ಹಣಕಾಸು ಯೋಜನೆ ಅಡಿಯಲ್ಲಿ:** 10. ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12.ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ 13. ಮನಃಶಾಸ್ತ್ರ 14. ವಿಧಿ ವಿಜ್ಞಾನ (ಫೋರೆನ್ಸಿಕ್ ಸೈನ್ಸ್) 15. ಆಹಾರ ಮತ್ತು ಪೌಷ್ಠಿಕಾಂಶ ವಿಜ್ಞಾನ 16. ಭ್ರೂಣಶಾಸ್ತ್ರ ಮತ್ತು ಸಂತಾನೋತ್ಪತ್ತಿ ತಂತ್ರಜ್ಞಾನ **ಪಿಜಿ ಡಿಪ್ಲೋಮಾ:** 1. ಸೈಬರ್ ಸೆಕ್ಯುರಿಟಿ 2. ಬಯೋ ಇನ್ಫೋಮೆಟಿಕ್ಸ್	
	ವಾಣಿಜ್ಯ ನಿಕಾಯ: ಎಂ.ಕಾಂ. 1. ಸಾಮಾನ್ಯ 2. ಇಂಟರ್‌ನ್ಯಾಷನಲ್ ಬಿಸಿನೆಸ್ 3. ಫೈನಾನ್ಸಿಯಲ್ ಅನಾಲಿಸಿಸ್ 4. ಫಿನ್ ಟೆಕ್. **ಪಿಜಿ ಡಿಪ್ಲೋಮಾ:** 1. ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2. ಮಾನವ ಸಂಪನ್ಮೂಲ ನಿರ್ವಹಣೆ 3. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ 4.ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ 5.ಫಿನ್ ಟೆಕ್	
	ಶಿಕ್ಷಣ ನಿಕಾಯ ಎಂ.ಎ: ಎಜುಕೇಷನ್	
2	**ವಾಣಿಜ್ಯ ನಿಕಾಯ: ಎಂ.ಕಾಂ:** ಸಾಮಾನ್ಯ	ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಬೆಂಗಳೂರು
3	**ಕಲಾ ನಿಕಾಯ: ಎಂ.ಎ:** 1. ಕನ್ನಡ 2. ಇಂಗ್ಲೀಷ್ 3. ಇತಿಹಾಸ 4. ಅರ್ಥಶಾಸ್ತ್ರ 5. ಸಮಾಜ ಶಾಸ್ತ್ರ 6. ರಾಜ್ಯಶಾಸ್ತ್ರ 7. ಸಮಾಜಕಾರ್ಯ 8. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ **ಎಂ.ವಿ.ಎ:** 1. ಅನಿಮೇಷನ್‌ಡಿಸೈನ್ 2. ಇಂಟಿರಿಯರ್‌ಡಿಸೈನ್ 3. ಅಪ್ಲೈಡ್‌ಆರ್ಟ್ಸ್, 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್ 6. ಪ್ರಿಂಟ್ ಮೇಕಿಂಗ್ 7.ಸ್ಕಲ್ಪಚರ್	ಸಂಯೋಜಿತ ಕಾಲೇಜುಗಳು (ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಅನ್ನು ಪರಿಶೀಲಿಸುವುದು)
	ವಿಜ್ಞಾನ ನಿಕಾಯ: ಎಂ.ಎಸ್ಸಿ: 1. ಭೌತಶಾಸ್ತ್ರ, 2. ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4. ಜೀವರಸಾಯನಶಾಸ್ತ್ರ 5.ಸಸ್ಯಶಾಸ್ತ್ರ 6.ಪ್ರಾಣಿಶಾಸ್ತ್ರ 7.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ 8.ಗಣಕ ವಿಜ್ಞಾನ 10.ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12. ಮನಃಶಾಸ್ತ್ರ 13.ಮಾನಸಿಕ ಸಮಾಲೋಚನೆ 14.ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಾಜಿ 15.ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್ 16.ನ್ಯೂಟ್ರೇಷನ್ ಅಂಡ್ ಡೈಟಿಟಿಕ್ಸ್ **ಪಿಜಿ ಡಿಪ್ಲೋಮಾ:** ಮನೋವೈಜ್ಞಾನಿಕ ಸಮಾಲೋಚನೆ **ವಾಣಿಜ್ಯ ನಿಕಾಯ: ಎಂ.ಕಾಂ:** 1.ಸಾಮಾನ್ಯ 2. ಫೈನಾನ್ಸಿಯಲ್ ಅನಾಲಿಸಿಸ್ 3.ಇಂಟರ್‌ನ್ಯಾಷನಲ್ ಬಿಸಿನೆಸ್ 4. ಎಂಟಿಟಿಎಂ: ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರ್ಯಾವೆಲ್ ಮ್ಯಾನೇಜ್‌ಮೆಂಟ್	
	ಪಿಜಿ ಡಿಪ್ಲೋಮಾ: 1. ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2. ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ 3. ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್	

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು: 1) ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal ಮೂಲಕವೇ Online ನಲ್ಲಿ ದಿನಾಂಕ: 01.07.2026 ರಿಂದ https://uucms.karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.** 2) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. 3) ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು. 4) ವಿದ್ಯಾರ್ಥಿಗಳು **ರೂ. 500/–** ಅರ್ಜಿ (ಪ.ಜಾ/ಪ.ಪಂ, ಪ್ರವರ್ಗ–1 ಮತ್ತು ತೃತೀಯ ಲಿಂಗ ಅಭ್ಯರ್ಥಿಗಳಿಗೆ ರೂ. 250/– ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಶುಲ್ಕದೊಂದಿಗೆ **ಗರಿಷ್ಠ 3 ವಿಷಯಗಳಿಗೆ** ಅರ್ಜಿ ಸಲ್ಲಿಸಲು UUCMS Portal ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ ರೂ. 100/– ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಪಾವತಿಸಬೇಕು. 5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in / http://bcu.karnataka.gov.in ಸಂಪರ್ಕಿಸಲು ಕೋರಿದೆ. 6) 2026–27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು **ದಿನಾಂಕ: 31.07.2026 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸಬಹುದಾಗಿದ್ದು ಆನಂತರ ದಿನಾಂಕ: 10.08.2026 ರ ವರೆಗೆ ರೂ. 250/– ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.** 7) UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. 8) ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001"** ಸಲ್ಲಿಸತಕ್ಕದ್ದು. 9) ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು. 10) **ಸೂಚನೆ:** ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 20 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸ್‌ನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ. 11) ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇವರನ್ನು ಸಂಪರ್ಕಿಸಬಹುದಾಗಿದೆ. ಮಿಂಚಂಚೆ: **registrar@bcu.ac.in& registrarbcu@gmail.com.**

ಸಹಿ/–
ಕುಲಸಚಿವರು

DIPR/CP/1454./Adverto/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ, 1ನೇ, ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಕೆಐಎಡಿಬಿ/ವಿ.ಭೂ.ಅ/ಕೇಂಕ/1579/2026–27 ದಿನಾಂಕ:02.07.2026

ಸಾರ್ವಜನಿಕ ಪ್ರಕಟಣೆ

(ಸರ್ಕಾರದ ಆದೇಶ ಸಂಖ್ಯೆ:ಸಿಐ 121 ಎಸ್‌ಪಿಕ್ಯೂ 2021, ಬೆಂಗಳೂರು ದಿನಾಂಕ:25.06.2026 ರನ್ವಯ)

ಸರ್ಕಾರದ ಆದೇಶ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ಬೆಂಗಳೂರು ದಿನಾಂಕ:25.06.2026 ರಂತೆ "ಇದೊಂದು ವಿಶೇಷ ಪ್ರಕರಣ (Exceptional case) ಎಂದು ಪರಿಗಣಿಸಿ **ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 1777–02.08 ಎಕರೆ/ಗುಂಟೆ ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆಗಳಿಂದ ಕೈಬಿಡಲು/ಹೊರತುಪಡಿಸಲು ಹಾಗೂ ಈ ಸಂಪೂರ್ಣ ಪ್ರದೇಶವನ್ನು ಹಸಿರು ವಲಯವನ್ನಾಗಿ ಮುಂದುವರೆಸುವ ಸಲುವಾಗಿ "ಶಾಶ್ವತ ವಿಶೇಷ ಕೃಷಿ ವಲಯ"ವೆಂದು (Permanent Special Agriculture Zone) ಘೋಷಿಸಲು** ಈ ಕೆಳಕಂಡಂತೆ ಆದೇಶಿಸಿದೆ.

a) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28, ಉಪ ಕಲಂ (4) ರನ್ವಯ ಹೊರಡಿಸಿರುವ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ದಿನಾಂಕ: 28.06.2024 ರಲ್ಲಿರುವ 439–32.08 ಎಕರೆ/ಗುಂಟೆ ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021 ದಿನಾಂಕ:19.04.2025 ರಲ್ಲಿರುವ 841–26.12 ಎಕರೆ/ಗುಂಟೆ ಭೂಮಿಯನ್ನು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 1(3), 3(1), 28(1) ಪ್ರಾಥಮಿಕ ಅಧಿಸೂಚನೆ ಹಾಗೂ 28(4) ಅಂತಿಮ ಅಧಿಸೂಚನೆಗಳಿಂದ ಕೈಬಿಡಲಾಗಿದೆ.

b) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28, ಉಪಕಲಂ (4) ರನ್ವಯ ಹೊರಡಿಸಿರುವ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ದಿನಾಂಕ:27.08.2021 ರಲ್ಲಿರುವ 1777–02.08 ಎಕರೆ/ಗುಂಟೆ ಭೂಮಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ ಬಾಕಿ ಪ್ರಾಥಮಿಕ ಅಧಿಸೂಚನೆಯಲ್ಲಿಯೇ ಮುಂದುವರೆದಿರುವ 495–23.04 ಎಕರೆ/ಗುಂಟೆ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 4 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 1(3), 3(1), 28(1) ಪ್ರಾಥಮಿಕ ಅಧಿಸೂಚನೆಯಿಂದ ಹೊರತುಪಡಿಸಲಾಗಿದೆ.

c) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 1777–02.08 ಎಕರೆ/ಗುಂಟೆ ಭೂಮಿಯನ್ನು ಹಸಿರು ವಲಯವನ್ನಾಗಿ ಮುಂದುವರೆಸುವ ಸಲುವಾಗಿ "ಶಾಶ್ವತ ವಿಶೇಷ ಕೃಷಿ ವಲಯ" ವೆಂದು (Permanent Special Agriculture Zone) ಘೋಷಿಸಿದೆ. ನಗರಾಭಿವೃದ್ಧಿ ಇಲಾಖೆಯು ಸಂಬಂಧಪಟ್ಟ ಸಮವರ್ತಿತ ಅಧಿಸೂಚನೆಯನ್ನು ಹೊರಡಿಸುವುದು.

d) "ಶಾಶ್ವತ ವಿಶೇಷ ಕೃಷಿ ವಲಯ"ದ ರೂಪ ರೇಷೆಗಳನ್ನು ಸಿದ್ಧಪಡಿಸಲು ತಜ್ಞರ ಸಮಿತಿಯನ್ನು ರಚಿಸುವುದು ಮತ್ತು ಪ್ರತ್ಯೇಕವಾಗಿ ರೂಪು ರೇಷೆಗಳನ್ನು ಹೊರಡಿಸುವುದು.

e) ರೈತರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಅಧಿಸೂಚನೆಗೆ ಒಳಪಟ್ಟ ಒಟ್ಟು 1777–02.08 ಎಕರೆ/ಗುಂಟೆ ಜಮೀನಿನ ಸರ್ವೆ ನಂಬರ್‌ಗಳ ಪಹಣಿ ಕಲಂ 11 ರಲ್ಲಿ "ಶಾಶ್ವತ ವಿಶೇಷ ಕೃಷಿ ವಲಯ" ಎಂದು ನಮೂದು ಮಾಡುವುದು.

f) ಭೂಸ್ವಾಧೀನಕ್ಕೆ ಒಳಪಟ್ಟಿರುವ ಒಟ್ಟು 1777–02.08 ಎಕರೆ/ಗುಂಟೆ ಪೈಕಿ ಸ್ವಯಂ ಪ್ರೇರಿತರಾಗಿ ಭೂಮಾಲೀಕರು KIAD ಮಂಡಳಿಗೆ ತಮ್ಮ ಜಮೀನುಗಳನ್ನು ನೀಡಲು ಮುಂದೆ ಬಂದಲ್ಲಿ ಅಂತಹ ಜಮೀನುಗಳನ್ನು ಅವಶ್ಯಕತೆ ಅನುಸಾರ ಮತ್ತು ನಿಯಮಾನುಸಾರ ಮಂಡಳಿಗೆ ಪಡೆಯುವುದು.

g) ಜಮೀನುಗಳನ್ನು ಭೂಮಾಲೀಕರು ಸ್ವಯಂ ಪ್ರೇರಿತರಾಗಿ ಮಂಡಳಿಗೆ ನೀಡಲು 3 ತಿಂಗಳ ಗಡುವನ್ನು ನೀಡುವುದು ಮತ್ತು ಅಂತಹ ಜಮೀನುಗಳಿಗೆ ಭೂದರ ನಿರ್ಧರಣ ಸಮಿತಿಯು ನಿಯಮಾನುಸಾರ ನಿಗದಿಪಡಿಸುವ ದರವನ್ನು ಭೂಮಾಲೀಕರಿಗೆ ನೀಡುವುದು.

ಈ ಆದೇಶವನ್ನು ದಿನಾಂಕ:04.12.2025 ರಂದು ನಡೆದ ಸಚಿವ ಸಂಪುಟದ ಪ್ರಕರಣ ಸಂಖ್ಯೆ: 1031/2025 ರಲ್ಲಿ ನೀಡಿರುವ ಅನುಮೋದನೆಯಂತೆ, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 412 ವೆಚ್ಚ–1/2025(ಪಿ1) ದಿನಾಂಕ:04.12.2025 ರಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಟಿಪ್ಪಣಿ LAW-OPN 834, 2025 Dated:03.12.2025 ರಲ್ಲಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಕಡತ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021(ಪಿ1) ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿರುತ್ತದೆ".

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 1777–02.08 ಎಕರೆ/ಗುಂಟೆ ಜಮೀನುಗಳ ಪೈಕಿ ಭೂಮಾಲೀಕರು ಸ್ವಯಂ ಪ್ರೇರಿತರಾಗಿ ತಮ್ಮ ಜಮೀನುಗಳನ್ನು KIAD ಮಂಡಳಿಗೆ ನೀಡಲು ಇಚ್ಛಿಸಿದ್ದಲ್ಲಿ, ಅಂತಹ ಜಮೀನುಗಳನ್ನು ಅವಶ್ಯಕತೆ ಅನುಸಾರ ಮತ್ತು ನಿಯಮಾನುಸಾರ KIAD ಮಂಡಳಿಗೆ ಪಡೆಯಲು ದಿನಾಂಕ: 31.10.2026 ರವರೆಗೆ ಅವಧಿ ವಿಸ್ತರಿಸಿ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 121 ಎಸ್‌ಪಿಕ್ಯೂ 2021, ಬೆಂಗಳೂರು ದಿನಾಂಕ:25.06.2026 ರ ಆದೇಶದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 1777–02.08 ಎಕರೆ/ಗುಂಟೆ ಜಮೀನುಗಳ ಸ್ವತ್ತಿನ ಭೂಮಾಲೀಕರು/ಖಾತೆದಾರರು/ ಹಿತಾಸಕ್ತಿಯುಳ್ಳವರಿಗೆ ಮಂಡಳಿಯು ಅವಕಾಶ ನೀಡುವ ಉದ್ದೇಶವನ್ನು ಹೊಂದಿದ್ದು, ಸ್ವಯಂ ಪ್ರೇರಿತರಾಗಿ ಭೂಮಾಲೀಕರು/ಖಾತೆದಾರರು/ ಹಿತಾಸಕ್ತಿಯುಳ್ಳವರು ಭೂಸ್ವಾಧೀನ ಪ್ರಕ್ರಿಯೆಗೆ ದಿನಾಂಕ: 31.10.2026 ರವರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೇಂದ್ರ ಕಛೇರಿ, ಕೆಐಎಡಿಬಿ 1ನೇ ಮಹಡಿ, ಅರವಿಂದ ಭವನ ಬಿಲ್ಡಿಂಗ್, ನೃಪತುಂಗ ರಸ್ತೆ, ಬೆಂಗಳೂರು ರವರ ಕಛೇರಿಗೆ ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರದಲ್ಲಿ ಹಾಜರಾಗಿ ಕಛೇರಿ ವೇಳೆಯಲ್ಲಿ ಒಪ್ಪಿಗೆಯನ್ನು ಸೂಚಿಸತಕ್ಕದ್ದು.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ಕೇಂದ್ರ ಕಛೇರಿ, ಬೆಂಗಳೂರು

ವಾಸಾಸಂಇ/ಉನಿ–ಸಿ.ಪಿ/1432/ಕೆಎಸ್‌ಎಂಸಿಎ/2026–27

FIXED DEPOSIT
2047ರಲ್ಲಿ ಎಫ್‌ಡಿಗೆ ಕೇವಲ 3% ಬಡ್ಡಿ? ಪ್ಲಾನ್ ಹೀಗಿರಲಿ
ಉದ್ಯಮಕ್ಕೆ ಉದ್ಯೋಗಿಗಳೇ ಹೇಗೆ ಅಸಲಿ ಬಂಡವಾಳ?
ಈ ವಾರದ ಸಂಚಿಕೆಯಲ್ಲಿ ತಪ್ಪದೆ ಓದಿ!
ವಿಕ ಮನಿ ₹
ಅಲ್ಪಾವಧಿಯಲ್ಲಿಯೇ ಜನಮೆಚ್ಚಿದ ಕನ್ನಡದ ಮೊದಲ ಹಣಕಾಸು ವಾರಪತ್ರಿಕೆ
ಪತ್ರಿಕೆಗಾಗಿ ಸಂಪರ್ಕಿಸಿ
72594 58080

ಹೊಸ ಭವಿಷ್ಯ ನಿಧಿ ಯೋಜನೆ ಜಾರಿ | ಶೇ.12ಕ್ಕಿಂತ ಹೆಚ್ಚು ಪಾಲು ನೀಡುವುದು ಐಚ್ಛಿಕ

ಪಿಎಫ್‌ಗೆ ₹1,800 ಮಾತ್ರ ಕಡ್ಡಾಯ

- 8 ಕೋಟಿ ಸಕ್ರಿಯ ಚಂದಾದಾರರಿಗೆ ತ್ವರಿತ ಸೇವೆ
- ಇಪಿಎಫ್ ಯೋಜನೆಯು ಡಿಜಿಟಲ್ ಸೇವೆಗಳಿಗೆ ಹೆಚ್ಚಿನ ಒತ್ತು
- ಇನ್ನು ಮುಂದೆ ಎಲ್ಲವೂ ಪಾರದರ್ಶಕ ಮತ್ತು ಕ್ಷಿಪ್ರ
- ಪಿಎಫ್ ಹಣವನ್ನು ಪಡೆಯುವ ವಿಧಾನಗಳು ಸುಲಭ

ಹೊಸದಿಲ್ಲಿ: ಕೇಂದ್ರ ಸರಕಾರ 1952 ಉದ್ಯೋಗಿಗಳ ಭವಿಷ್ಯ ನಿಧಿ(ಇಪಿಎಫ್) ಯೋಜನೆ ಬದಲಿಗೆ ಹೊಸ ಭವಿಷ್ಯ ನಿಧಿ ಯೋಜನೆ-2026 ಜಾರಿಗೆ ತಂದಿದೆ.

ಭವಿಷ್ಯ ನಿಧಿಗೆ ಉದ್ಯೋಗಿಗಳು ನೀಡುವ ಪಾಲಿನಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಆದರೆ ಎಷ್ಟು ಮೊತ್ತ ಕಡ್ಡಾಯ ಮತ್ತು ಉದ್ಯೋಗಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳಬೇಕಾದರೆ ಏನು ಮಾಡಬೇಕು ಎಂಬುದರ ಕುರಿತು ಜೂನ್ 29ರಂದು ಹೊಸ ನಿಯಮಗಳು ಜಾರಿಗೆ ಬಂದಿದೆ.

ಹೊಸ ನಿಯಮ ಏನು?

ಉದ್ಯೋಗಿಗೆ ತಿಂಗಳ ಮೂಲ ವೇತನ 15 ಸಾವಿರ ಇದ್ದಾಗ ಕಡ್ಡಾಯವಾಗಿ ಅವರು ಭವಿಷ್ಯ ನಿಧಿಗೆ ಶೇ.12ರಷ್ಟು ಪಾಲನ್ನು ಕೊಡಲೇಬೇಕು. 15 ಸಾವಿರ ರೂ.ಗೆ ಶೇ.12ರಷ್ಟು ಅಂದರೆ 1,800 ರೂ. ಆಗಿರುತ್ತದೆ. ಉದ್ಯೋಗದಾತ ಕಂಪನಿಗಳು ಇಷ್ಟೇ ಮೊತ್ತವನ್ನು ಸಂದಾಯ ಮಾಡಬೇಕು. ಇದು ಕಡ್ಡಾಯವಾಗಿರುತ್ತದೆ. ಹಿಂದೆ ಕಂಪನಿಯ ನೀತಿಗಳು ಅಥವಾ ಪರಸ್ಪರ ಒಪ್ಪಂದಗಳ ಆಧಾರದ ಮೇಲೆ ಅನೇಕ ಉದ್ಯೋಗಿಗಳು 15 ಸಾವಿರಕ್ಕಿಂತಲೂ ಹೆಚ್ಚು ಮೂಲ ವೇತನದ ಮೇಲೂ ಪಿಎಫ್ ಕಡಿತ ಮಾಡಿಸುತ್ತಿದ್ದರು. ಆದರೆ ಹೊಸ ನಿಯಮಗಳು ಈಗ ಕಡ್ಡಾಯ ಮತ್ತು ಸ್ವಯಂಪ್ರೇರಿತ ಪಾಲಿನ ನಡುವೆ ಸ್ಪಷ್ಟ ವ್ಯತ್ಯಾಸವನ್ನು ಕಲ್ಪಿಸಿವೆ.

ಉದ್ಯೋಗಿಗಳು ತಮ್ಮ ನಿವೃತ್ತಿ ಉಳಿತಾಯಕ್ಕಾಗಿ ಭವಿಷ್ಯ ನಿಧಿಗೆ ಹೆಚ್ಚಿನ ಪಾಲನ್ನು ನೀಡಬಹುದು. ಕಡ್ಡಾಯ ಮಿತಿ(1,800ರೂ.) ಯನ್ನು ದಾಟಿ ಪಾವತಿಸುವ ಮೊತ್ತ ಸ್ವಯಂ ಪ್ರೇರಿತ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ಮುಖ್ಯವಾದ ಅಂಶವೆಂದರೆ ತನ್ನ ಭವಿಷ್ಯ ನಿಧಿಗೆ ಉದ್ಯೋಗಿ ಹೆಚ್ಚಿನ ಪಾಲನ್ನು ಸಲ್ಲಿಸಿದರೆ ಅಷ್ಟೇ ಮೊತ್ತವನ್ನು ಕಂಪನಿಯೂ ಕಡ್ಡಾಯವಾಗಿ ಪಾವತಿ ಮಾಡಬೇಕು ಎಂದೇನೂ ಇಲ್ಲ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಉದ್ಯೋಗ ಒಪ್ಪಂದ ಅಥವಾ ಕಂಪನಿಯ ನೀತಿಯಲ್ಲಿ ಮೊದಲೇ ತೀರ್ಮಾನವಾಗದ ಹೊರತು, ಉದ್ಯೋಗದಾತರು (ಕಂಪನಿ) ಈ ಹೆಚ್ಚುವರಿ ಸ್ವಯಂಪ್ರೇರಿತ ದೇಣಿಗೆಗೆ ಸಮನಾದ ಮೊತ್ತವನ್ನು ನೀಡಲು ಕಾನೂನುಬದ್ಧವಾಗಿ ಬಾಧ್ಯಸ್ಥರಾಗಿರುವುದಿಲ್ಲ.

ಹೊಸ ಯೋಜನೆಯು ಪ್ರಸ್ತುತ ಇರುವ ಇಪಿಎಫ್ ದೇಣಿಗೆ ದರಗಳನ್ನು ಬದಲಾಯಿಸಿಲ್ಲ. ಉದ್ಯೋಗಿಗಳು ಮತ್ತು ಉದ್ಯೋಗದಾತರು ತಲಾ ಶೇ. 12 ರಷ್ಟು ಕೊಡುಗೆ ನೀಡುವುದನ್ನು ಮುಂದುವರಿಸುತ್ತಾರೆ. ಆದರೆ, ಅಸ್ತಿತ್ವದಲ್ಲಿರುವ ಅಧಿಸೂಚನೆಗಳ ಅಡಿಯಲ್ಲಿ ಈಗಾಗಲೇ ಭವಿಷ್ಯ ನಿಧಿಗೆ ಶೇ.10ರಷ್ಟು ಪಾಲು ನೀಡುತ್ತಿರುವ ಸಂಸ್ಥೆಗಳು ಅದನ್ನೇ ಮುಂದುವರಿಸುತ್ತವೆ.

ಹಣ ಹಿಂಪಡೆಯುವ ನಿಯಮಗಳು ಸರಳ

ಇಪಿಎಫ್ ಯೋಜನೆ 2026 ರಲ್ಲಿ ಭಾಗಶಃ ಹಣ ಹಿಂಪಡೆಯುವ ನಿಯಮಗಳನ್ನೂ ಸರಳಗೊಳಿಸಲಾಗಿದೆ. ಕಳೆದ ವರ್ಷ ಉದ್ಯೋಗಿಗಳ ಭವಿಷ್ಯ ನಿಧಿಯ ಕೇಂದ್ರ ಟ್ರಸ್ಟ್ ಮಂಡಳಿ ಅನುಮೋದಿಸಿದ್ದ ಬದಲಾವಣೆಗಳನ್ನು ಈಗ ಹೊಸ ಯೋಜನೆಯಲ್ಲಿ ಸೇರಿಸಲಾಗಿದೆ. ಹಣ ಹಿಂಪಡೆಯುವ ನಿಯಮಗಳನ್ನು ಮೂರು ಪ್ರಮುಖ ಗುಂಪುಗಳಾಗಿ ಸರಳಗೊಳಿಸಲಾಗಿದೆ. ಚಂದಾದಾರರು ಅನಾರೋಗ್ಯ, ಶಿಕ್ಷಣ ಮತ್ತು ಮದುವೆಯಂತಹ ಅಗತ್ಯ ಸಂದರ್ಭಗಳಿಗಾಗಿ, ವಸತಿ ಸಂಬಂಧಿತ ಉದ್ದೇಶಗಳಿಗಾಗಿ ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿಪಡಿಸಿದ ಷರತ್ತುಗಳು ಮತ್ತು ಕನಿಷ್ಠ ಬ್ಯಾಲೆನ್ಸ್ ಕಾಯ್ದುಕೊಳ್ಳುವ ಷರತ್ತುಗಳಿಗೆ ಒಳಪಟ್ಟು ಹಣವನ್ನು ಹಿಂಪಡೆಯಬಹುದು.

ಎಲ್ಲವೂ ಡಿಜಿಟಲ್ ಮಯ

ಇದರೊಂದಿಗೆ ಹೊಸ ಇಪಿಎಫ್ ಯೋಜನೆಯು ಡಿಜಿಟಲ್ ಸೇವೆಗಳಿಗೆ ಹೆಚ್ಚಿನ ಒತ್ತು ನೀಡಿದೆ. ಎಲೆಕ್ಟ್ರಾನಿಕ್ ಫೈಲಿಂಗ್, ಆನ್‌ಲೈನ್ ಕ್ಲೈಮ್ ಪ್ರೊಸೆಸಿಂಗ್, ಇ-ಪಾಸ್‌ಬುಕ್ ಮತ್ತು ಯುಎಎನ್ ಸಮನ್ವಯವನ್ನು ಉತ್ತೇಜಿಸುತ್ತದೆ. ಉದ್ಯೋಗಿಗಳು ಸುದೀರ್ಘ ಕಾಗದ ಪತ್ರಗಳ ಕೆಲಸವಿಲ್ಲದೆ ವೇಗವಾಗಿ, ಪಾರದರ್ಶಕವಾಗಿ ಮತ್ತು ಸುಲಭವಾಗಿ ಇಪಿಎಫ್ ಸೇವೆಗಳನ್ನು ಪಡೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ. ಹೆಚ್ಚಿನ ಸಂಬಳ ಪಡೆಯುವ ಉದ್ಯೋಗಿಗಳಿಗೆ ಈ ಹೊಸ ಯೋಜನೆಯು ಮೂಲ ಪಿಎಫ್ ದೇಣಿಗೆ ದರವನ್ನಾಗಲಿ ಅಥವಾ ನಿವೃತ್ತಿಯ ನಂತರ ಸಿಗುವ ಸೌಲಭ್ಯಗಳನ್ನಾಗಲಿ ಕಡಿಮೆ ಮಾಡುವುದಿಲ್ಲ. ಬದಲಿಗೆ, ಯಾವುದು ಕಡ್ಡಾಯ ಮತ್ತು ಯಾವುದು ಸ್ವಯಂಪ್ರೇರಿತ ಎಂಬುದರ ಕುರಿತು ಹೆಚ್ಚಿನ ಸ್ಪಷ್ಟತೆಯನ್ನು ನೀಡುತ್ತದೆ.

ಹೊಸ ಮಾಧ್ಯಮ ಅಭಿಯಾನ ಆರಂಭ

ಸನ್‌ಪ್ಯೂರ್‌ಗೆ ಸುದೀಪ್, ಪ್ರಿಯಾಮಣಿ ರಾಯಭಾರಿ

ಬೆಂಗಳೂರು: ಎಂ.ಕೆ. ಆಗ್ರೋಟೆಕ್ (ಮಾಸೂಮ್ ಗ್ರೂಪ್ ಕಂಪನಿ)ನ ಖಾದ್ಯ ತೈಲ ಬ್ರಾಂಡ್ ಸನ್‌ಪ್ಯೂರ್ 30 ವರ್ಷಗಳ ಮೈಲುಗಲ್ಲಿನ ಸಂಭ್ರಮಾಚರಣೆಯಲ್ಲಿದ್ದು, ಕಿಚ್ಚ ಸುದೀಪ್ ಮತ್ತು ಪ್ರಿಯಾಮಣಿ ಸಾರಥ್ಯದಲ್ಲಿ ಹೊಸ ಮಾಧ್ಯಮ ಅಭಿಯಾನ ಆರಂಭಿಸಿದೆ.

ಮೂರು ದಶಕಗಳಿಂದಲೂ, ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಗೋವಾ ಮತ್ತು ಒಡಿಶಾದ ಅಡುಗೆ ಮನೆಗಳಲ್ಲಿ, ಸನ್‌ಪ್ಯೂರ್ ರಿಫೈಂಡ್ ಸೂರ್ಯಕಾಂತಿ ಎಣ್ಣೆ ವಿಶ್ವಾಸಾರ್ಹ ಆಯ್ಕೆಯಾಗಿ ಬಳಕೆಯಲ್ಲಿದೆ. 'ಸನ್‌ಪ್ಯೂರ್‌ಎಲ್ಲಿದೆ, ಸಂತೋಷ ಅಲ್ಲಿದೆ' ಎಂಬ ಹೃದಯಸ್ಪರ್ಶಿ ಟ್ಯಾಗ್‌ಲೈನ್ ಸುತ್ತ ನಿರ್ಮಾಣವಾಗಿರುವ ಈ ಟಿವಿ ಜಾಹೀರಾತು, ಆಕರ್ಷಕ ನಿರೂಪಣೆಯ ಮೂಲಕ ದೈನಂದಿನ ಜೀವನದ ಆಪ್ತತೆಯನ್ನು ಸೆರೆ ಹಿಡಿಯುತ್ತದೆ.

ಕಿಚ್ಚ ಸುದೀಪ್ ಕೂಡ ತನ್ನ ಸಿನಿ ಜೀವನ ಮೂರು ದಶಕಗಳನ್ನು ಪೂರೈಸಿದ್ದಾರೆ. ಹಾಗಾಗಿ, ಇದು ನಂಬಿಕೆ ಮತ್ತು ಸ್ಥಿರತೆ ಮೇಲೆ ನಿರ್ಮಾಣವಾದ ಎರಡು ಬ್ರ್ಯಾಂಡ್‌ಗಳ ಸಂಭ್ರಮಾಚರಣೆಯಾಗಿದೆ. ಪ್ರಿಯಾಮಣಿಯವರು ತಮ್ಮ ಆಪ್ತತೆ, ಗಾಂಭೀರ್ಯ ಮತ್ತು ಸರಳತೆಯಿಂದ ಆಧುನಿಕ ಭಾರತೀಯ ಗೃಹಿಣಿಯನ್ನು ಸುಂದರವಾಗಿ ಪ್ರತಿನಿಧಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮಾಸೂಮ್ ಗ್ರೂಪ್‌ನ ನಿರ್ದೇಶಕ ಮಸ್ಸೂನ್ ಖಾನ್, ''ಸನ್‌ಪ್ಯೂರ್‌ನ ಪ್ರಯಾಣದಲ್ಲಿ ಈ ವರ್ಷ ಮೈಲುಗಲ್ಲಾಗಿದೆ. ನಮ್ಮ ಈ ಹೊಸ ಅಭಿಯಾನವು ಗ್ರಾಹಕರೊಂದಿಗಿನ ಶಾಶ್ವತ ಸಂಬಂಧ ಮತ್ತು ನಮ್ಮ ಬ್ರ್ಯಾಂಡ್‌ನ ಶುದ್ಧತೆ, ಗುಣಮಟ್ಟ, ಕಾಳಜಿ ಮತ್ತು ಒಗ್ಗಟ್ಟನ್ನು ಪ್ರದರ್ಶಿಸುವ ಮೌಲ್ಯಗಳ ಆಚರಣೆಯಾಗಿದೆ,'' ಎಂದು ಹೇಳಿದ್ದಾರೆ.

ಕೆನೋಲಾ ಎಣ್ಣೆ ಬಿಡುಗಡೆ

30 ವರ್ಷಗಳ ಸಂಭ್ರಮಾಚರಣೆಯಲ್ಲಿ ಎಂ.ಕೆ ಆಗ್ರೋಟೆಕ್ ಸಂಸ್ಥೆಯು ಆರೋಗ್ಯ ಪ್ರಜ್ಞೆಯುಳ್ಳ ಗ್ರಾಹಕರಿಗಾಗಿ ಪ್ರೀಮಿಯಂ ಖಾದ್ಯ ತೈಲ ಸನ್‌ಪ್ಯೂರ್ ಚಾಂಪಿಯನ್ ರಿಫೈನ್ಡ್ ಕೆನೋಲಾ ಎಣ್ಣೆಯನ್ನು ಬಿಡುಗಡೆ ಮಾಡಿದೆ. ಇದು ಮೊನೊ ಅನ್‌ಸ್ಯಾಚುರೇಟೆಡ್ ಕೊಬ್ಬಿನಾಮ್ಲ (ಎಂಯುಎಫ್‌ಎ) ಮತ್ತು ಒಮೆಗಾ 3ಯಿಂದ ಸಮೃದ್ಧವಾಗಿದೆ.

ವಾಟ್ಸ್‌ಆ್ಯಪ್ ಬಳಿಕ ಟೆಲಿಗ್ರಾಂ, ಸಿಗ್ನಲ್‌ಗೆ ಕೇಂದ್ರದ ನೋಟಿಸ್

ಹೊಸದಿಲ್ಲಿ: 'ಯೂಸರ್‌ನೇಮ್' ಬಳಕೆಗೆ ಸಂಬಂಧಿಸಿದಂತೆ ಮೆಟಾ ಸಂಸ್ಥೆಯ ಒಡೆತನದ ವಾಟ್ಸ್‌ಆ್ಯಪ್‌ಗೆ ಬುಧವಾರ ನೋಟಿಸ್ ನೀಡಿದ್ದ ಕೇಂದ್ರ ಸರಕಾರವು, ಸದ್ಯಕ್ಕೆ ಟೆಲಿಗ್ರಾಂ ಮತ್ತು ಸಿಗ್ನಲ್ ಆ್ಯಪ್‌ಗಳ ಸಂಸ್ಥೆಗಳಿಗೂ ನೋಟಿಸ್ ನೀಡಿದೆ. ಈ ಆ್ಯಪ್ ಗಳಲ್ಲಿ ಇರುವ ಯೂಸರ್‌ನೇಮ್ ವೈಶಿಷ್ಟ್ಯದ ಕುರಿತು ಕೇಂದ್ರವು ಪ್ರಶ್ನೆಗಳನ್ನು ಕೇಳಿದೆ. ವಂಚನೆ ಮತ್ತು ನಕಲು ಮಾಡುವ ಅಪಾಯಗಳಿಗೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿರುವ ಕೇಂದ್ರವು , ಇಂಥ ಸಮಸ್ಯೆಗಳನ್ನು ಹೇಗೆ ಪರಿಹರಿಸಲಾಗುವುದು ಎಂದು ಕಂಪನಿಗಳನ್ನು ಪ್ರಶ್ನಿಸಿದೆ. ಈ ವೈಶಿಷ್ಟ್ಯವು ಬಳಕೆದಾರರಿಗೆ ಫೋನ್ ಸಂಖ್ಯೆಗಳನ್ನು ಹಂಚಿಕೊಳ್ಳದೆಯೇ ಆನ್‌ಲೈನ್ ವೇದಿಕೆಯನ್ನು ಬಳಸಬಹುದಾದ ಯೂಸರ್‌ನೇಮ್ ರಚಿಸಲು ಅವಕಾಶ ನೀಡುತ್ತದೆ. ವಾಟ್ಆ್ಯಪ್ ಬಳಕೆಗೆ ಯೂಸರ್‌ನೇಮ್ ವೈಶಿಷ್ಟ್ಯ ಪರಿಚಯಿಸಲು ಮುಂದಾಗಿದ್ದ ಮೆಟಾಗೆ ಕೇಂದ್ರ ಐಟಿ ಸಚಿವಾಲಯ ಈಗಾಗಲೇ ಹಲವು ಪ್ರಶ್ನೆಗಳನ್ನು ಕೇಳಿದೆ. ಇದರಿಂದ ಆನ್ ಲೈನ್ ವಂಚನೆ, ಡಿಜಿಟಲ್ ಅರೆಸ್ಟ್, ಅನ್ಯರ ಸೋಗಿನಲ್ಲಿ ನಡೆಯುವ ದಾಳಿಗಳು ಹೆಚ್ಚಾಗಬಹುದು ಎಂದು ಕೇಂದ್ರವು ಆತಂಕ ವ್ಯಕ್ತಪಡಿಸಿತ್ತು.

ಗೇಲ್ ಇಂಡಿಯಾ ಹಣಕಾಸು ನಿರ್ದೇಶಕರಾಗಿ ಎಸ್.ಕೆ.ಸಿನ್ಹಾ ಅಧಿಕಾರ ಸ್ವೀಕಾರ

ಹೊಸದಿಲ್ಲಿ: ದೇಶದ ಪ್ರಮುಖ ಸಂಯೋಜಿತ ಇಂಧನ ಸಂಸ್ಥೆ ಗೇಲ್ ಇಂಡಿಯಾ ಲಿಮಿಟೆಡ್‌ನ ಹಣಕಾಸು ನಿರ್ದೇಶಕರಾಗಿ ಎಸ್.ಕೆ. ಸಿನ್ಹಾ ಅಧಿಕಾರ ವಹಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಅವರು ಹಣಕಾಸು ಮತ್ತು ಲೆಕ್ಕಪತ್ರ ವಿಭಾಗದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ತೈಲ ಮತ್ತು ಅನಿಲ ಕ್ಷೇತ್ರದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸುದೀರ್ಘ ಸಲ್ಲಿಸಿರುವ ಸಿನ್ಹಾ 1994 ರಲ್ಲಿ ಮ್ಯಾನೇಜ್‌ಮೆಂಟ್ ಟ್ರೈನಿಯಾಗಿ (ಹಣಕಾಸು ಮತ್ತು ಲೆಕ್ಕಪತ್ರ) ಗೇಲ್ (ಇಂಡಿಯಾ) ಲಿಮಿಟೆಡ್‌ಗೆ ಸೇರಿದರು ಮತ್ತು ಅಂದಿನಿಂದ ಪ್ರಮುಖ ಹಣಕಾಸು ವಿಭಾಗಗಳಲ್ಲಿ ಹಲವು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಉತ್ತಮ ಆಡಳಿತ, ಕಾನೂನು ಪಾಲನೆ, ವೆಚ್ಚದ ಅತ್ಯುತ್ತಮ ಬಳಕೆಯ ಉಪಕ್ರಮಗಳು, ಬೃಹತ್ ಪ್ರಮಾಣದ ಹೂಡಿಕೆಗಳ ಮೌಲ್ಯಮಾಪನ ಮತ್ತು ಪರಿಣಾಮಕಾರಿ ಟ್ರೆಜರಿ ನಿರ್ವಹಣೆಯ ಮೂಲಕ ಸಂಸ್ಥೆಯ ಮೌಲ್ಯವನ್ನು ಹೆಚ್ಚಿಸುವಲ್ಲಿ ಗಮನಾರ್ಹ ಕೊಡುಗೆ ನೀಡಿದ್ದಾರೆ. ಹಣಕಾಸು ವಲಯದಲ್ಲಿ ಡಿಜಿಟಲ್ ರೂಪಾಂತರದ ಉಪಕ್ರಮಗಳನ್ನು ಮುನ್ನಡೆಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಸತತ 2ನೇ ದಿನವೂ ಷೇರುಪೇಟೆ ಏರಿಕೆ

ಮುಂಬಯಿ: ಕಚ್ಚಾ ತೈಲದ ಬೆಲೆ ಇಳಿಕೆ, ಮಧ್ಯಪ್ರಾಚ್ಯ ಬಿಕ್ಕಟ್ಟು ನಿವಾರಣೆಯ ಅಡೆತಡೆಗಳ ನಿವಾರಣೆ ಪ್ರಕ್ರಿಯೆಗೆ ಚುರುಕು ಮತ್ತು ಐಟಿ ಷೇರುಗಳ ಖರೀದಿ ಭರಾಟೆಯಿಂದ ಗುರುವಾರ ಷೇರುಪೇಟೆ ಏರಿಕೆಯನ್ನು ಕಾಯ್ದುಕೊಂಡಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 579.48 ಅಂಕ ಜಿಗಿದು 77,502.12ರಲ್ಲಿ ವಹಿವಾಟು ಕೊನೆಗೊಂಡಿತು. ದಿನದ ಒಂದು ಹಂತದಲ್ಲಿ ಏರಿಕೆ ಮಟ್ಟ 656.29 ರಷ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 169.85 ಅಂಕ ಹೆಚ್ಚಿ 24,175.70ರಲ್ಲಿ ಸ್ಥಿರಗೊಂಡಿತು. ಬುಧವಾರ ಸೆನ್ಸೆಕ್ಸ್ 43.97 ಅಂಕ ಹಾಗೂ ನಿಫ್ಟಿ 140.10 ಅಂಕ ಜಿಗಿದಿತ್ತು.

ಇನ್ಫೋಸಿಸ್ ಷೇರುಗಳು ಶೇ.5.64ರಷ್ಟು ಜಿಗಿದವು. ಟೆಕ್ ಮಹೀಂದ್ರಾ ಶೇ.4.32, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಶೇ.4.28, ಎಚ್‌ಸಿಎಲ್ ಟೆಕ್ ಶೇ.4.12 ಹಾಗೂ ಬಜಾಜ್ ಫಿನ್‌ಸರ್ವ್, ಅದಾನಿ ಪೋರ್ಟ್ಸ್ ಹಾಗೂ ಐಸಿಐಸಿಐ ಬ್ಯಾಂಕ್ ಷೇರುಗಳು ಏರಿಕೆ ಕಂಡವು.

ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ ಶೇ. 7.89ರಷ್ಟು ಕುಸಿಯಿತು. ಜಪಾನ್‌ನ ನಿಕ್ಕೈ 225 ಇಂಡೆಕ್ಸ್ ಶೇ.2.47ರಷ್ಟು ಕುಗ್ಗಿತು. ಶಾಂಘೈನ ಎಸ್ಎಸ್‌ಇ ಕಾಂಪೊಸಿಟ್ ಇಂಡೆಕ್ಸ್ ಶೇ. 2.3ರಷ್ಟು ಪತನಗೊಂಡಿತು. ಹಾಂಕಾಂಗ್‌ನ ಹ್ಯಾಂಗ್ ಸೆಂಗ್ ಇಂಡೆಕ್ಸ್ ಶೇ. 0.76ರಷ್ಟು ಏರಿತು. ಐರೋಪ್ಯ ಮಾರುಕಟ್ಟೆ ಸಕಾರಾತ್ಮಕವಾಗಿತ್ತು.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಇಳಿಕೆಯ ಹಾದಿಯಲ್ಲೇ ಇದೆ. ಗುರುವಾರ ಶೇ.1.45ರಷ್ಟು ಕಡಿಮೆಯಾಗಿ ಬ್ಯಾರೆಲ್‌ಗೆ 70.53 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರ 1,140.50 ಕೋಟಿ ರೂ. ಮೌಲ್ಯದ ಈಕ್ವಿಟಿಗಳನ್ನು ಮಾರಾಟ ಮಾಡಿದ್ದಾರೆ.

ಮತ್ತೆ ಕುಸಿದ ರೂಪಾಯಿ ಮೌಲ್ಯ

ಗುರುವಾರ ಕೂಡ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 18 ಪೈಸೆ ಇಳಿದು 95.34 ರೂ. ಆಗಿದೆ. ಕಚ್ಚಾ ತೈಲದ ಬೆಲೆ ಇಳಿಕೆಯಾಗಿದ್ದರೂ ರೂಪಾಯಿ ನಿರೀಕ್ಷಿತ ಪ್ರಮಾಣದಲ್ಲಿ ಏರಿಕೆಯಾಗಿಲ್ಲ. ಕರೆನ್ಸಿ ವಿನಿಮಯ ಮಾರುಕಟ್ಟೆಯ ಆರಂಭಿಕ ಹಂತ ವಹಿವಾಟಿನಲ್ಲಿ ಏರಿಕೆ ಕಂಡಿತು. ನಂತರ ಇಳಿದು ಹೋಯಿತು.

ಸೆನ್ಸೆಕ್ಸ್	ನಿಫ್ಟಿ
77,502.12	24,175.70
579.48 ↑	↑ 169.85

ಬೆಳ್ಳಿ (1 ಕೆ.ಜಿ) ಬೆಂಗಳೂರು ₹ 2,45,000

ಯುಎಸ್ $ 95.34 | ಪೆಟ್ರೋಲ್ ₹111.68 | ಡೀಸೆಲ್ ₹99.56

ಚಿನ್ನ, ಬೆಳ್ಳಿ ಧಾರಣೆ ಜಿಗಿತ

ಹೊಸದಿಲ್ಲಿ: ಇಳಿಕೆ ಹಾದಿಯಲ್ಲಿದ್ದ ಬಂಗಾರ ಗುರುವಾರ ಏರಿಕೆ ಹಾದಿಗೆ ಮರಳಿತು. ಅಪರಂಜಿ ಚಿನ್ನದ ಧಾರಣೆ 10 ಗ್ರಾಂಗೆ 3,000 ರೂ. ಏರಿ 1,47,500 ರೂ. ಆಗಿದೆ. ಬುಧವಾರ 1,300 ರೂ. ಕಡಿಮೆಯಾಗಿತ್ತು. ಬೆಳ್ಳಿ ಧಾರಣೆ ಗುರುವಾರ ಕೂಡ ಏರಿಕೆಯನ್ನು ಕಾಯ್ದುಕೊಂಡಿತು.

ಕೆ.ಜಿಗೆ 5,000 ರೂ. ಜಂಪ್ ಆಗಿ 2,40,000 ರೂ. ಆಗಿದೆ. ಬುಧವಾರ ಕೂಡ 5,000 ರೂ. ಹೆಚ್ಚಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಧಾರಣೆಯಲ್ಲಿ ಶೇ.1 ರಷ್ಟು ಏರಿ ಔನ್ಸ್‌ಗೆ 4,070.04 ಡಾಲರ್ ಆಗಿದೆ. ಬೆಳ್ಳಿ ಬೆಲೆ ಔನ್ಸ್‌ಗೆ ಶೇ.1.3 ರಷ್ಟು ಹೆಚ್ಚಿ 59.89ಡಾಲರ್ ಆಗಿದೆ. ''ರೂಪಾಯಿ ಹೊರತುಪಡಿಸಿ ಉಳಿದ ಕರೆನ್ಸಿಗಳಿಗೆ ಹೋಲಿಸಿದರೆ ಡಾಲರ್ ಕೊಂಚ ಬಲಹೀನಗೊಂಡಿತು. ಹೀಗಾಗಿ ಬಂಗಾರ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಹವಾ ಉಂಟಾಯಿತು,'' ಎಂದು ಹೂಡಿಕೆ ತಜ್ಞ ಪ್ರವೀಣ್ ಸಿಂಗ್ ಹೇಳಿದ್ದಾರೆ.

''ಈ ವರ್ಷದ ದ್ವಿತೀಯಾರ್ಧದಲ್ಲಿ ಚಿನ್ನದ ಮಾರುಕಟ್ಟೆ ಪಾಲಿಗೆ ನಿರ್ಣಾಯಕವಾಗಿರುತ್ತದೆ. ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರ ಕುರಿತು ಕೈಗೊಳ್ಳುವ ನಿರ್ಧಾರಗಳು ಮತ್ತು ಮಧ್ಯಪ್ರಾಚ್ಯ ಬಿಕ್ಕಟ್ಟಿನ ಶಮನದಲ್ಲಿ ಉಂಟಾಗುವ ಬೆಳವಣಿಗೆಗಳು ಚಿನ್ನದ ಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ,'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಎಷ್ಟು?

ಉದ್ಯಾನ ನಗರಿಯಲ್ಲಿ ಅಪರಂಜಿ ಚಿನ್ನ 10 ಗ್ರಾಂಗೆ 3,000 ರೂ. ಅಧಿಕವಾಗಿ 1,43,780 ರೂ. ಆಗಿದೆ. ಇಷ್ಟೇ ತೂಕದ ಆಭರಣ ಚಿನ್ನದ ಬೆಲೆಯಲ್ಲಿ 2,750 ರೂ. ಏರಿ 1,31,800 ರೂ. ಆಗಿದೆ. ಬೆಳ್ಳಿ ಬೆಲೆ ಕೆ.ಜಿಗೆ 5 ಸಾವಿರ ಜಿಗಿದು 2,45,000 ರೂ.ಆಗಿದೆ.

ದೇಶದಲ್ಲಿ ಹಬ್ಬದ ಹಂಗಾಮ ಹಾಗೂ ಮದುವೆ ಋತು ಆರಂಭವಾದಾಗ ಚಿನ್ನ ಮತ್ತು ಬೆಳ್ಳಿ ಧಾರಣೆ ಗಣನೀಯವಾಗಿ ಏರಿಕೆಯಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಕೇಕೆ ಸ್ಪೆಷಲ್ ಗುಂಟೂರು ಅಮ್ಮಾಯಿ

ಸೋನು ಶ್ರೀನಿವಾಸ್ ಗೌಡ

ಕೇಕೆ ಚಿತ್ರದ ವಿಶೇಷ ಹಾಡು ಗುಂಟೂರು ಅಮ್ಮಾಯಿ ರಿಲೀಸ್ ಆಗಿದೆ. ಗುಂಟೂರು ಅಮ್ಮಾಯಿ... ಹಾಟು ಘಾಟು ಬೀಟ್ಸ್ ಇರೋ ತೆಲುಗು ಮಿಶ್ರಿತ ಕನ್ನಡ ಹಾಡು ರಂಗಾಗಿ ಮೂಡಿ ಬಂದಿದೆ. ಸೋನು ಶ್ರೀನಿವಾಸ್ ಗೌಡ ಈ ಹಾಡಿಗೆ ಹೆಜ್ಜೆ ಹಾಕಿರೋದು ವಿಶೇಷ. 'ಒಂದು ರೆಡಿ ಇರುವ ಹಾಡಿಗೆ ರೀಲ್ಸ್ ಮಾಡುವುದು ಸುಲಭ. ಹೊಸ ಹಾಡಿಗೆ ಹೆಜ್ಜೆ ಹಾಕುವುದು ಕಷ್ಟ. ಹಾಡಿನ ಚಿತ್ರೀಕರಣವನ್ನು ಎಂಜಾಯ್ ಮಾಡಿದ್ದೇನೆ. ಮತ್ತೆ ಮತ್ತೆ ಕೇಳಬೇಕು ಎನ್ನಿಸುವ ಈ ಹಾಡು, ವೈರಲ್ ಆಗುವುದು ಪಕ್ಕಾ' ಎಂದಿದ್ದಾರೆ.

ಈ ಚಿತ್ರವನ್ನು ಸೋಮಶೇಖರ್ ಜಿ.ಕೆ. ನಿರ್ದೇಶಿಸಿದ್ದು, ಬಹುತೇಕ ಹೊಸ ಕಲಾವಿದರೇ ಮುಖ್ಯ ಭೂಮಿಕೆಯಲ್ಲಿದ್ದಾರೆ. ಭರತ್ ಇಂಡಿಯಾ ಛಾಯಾಗ್ರಹಣ ಈ ಚಿತ್ರಕ್ಕಿದೆ. ಚಿತ್ರಕ್ಕೆ ಕಿರಣ್ ತೋಟಂಬೈಲ್ ಸಂಗೀತ ಸಂಯೋಜಿಸಿ, ಸಾಹಿತ್ಯ ಬರೆದಿದ್ದಾರೆ. ಐಶ್ವರ್ಯಾ ರಂಗರಾಜನ್ ದನಿಯಾಗಿದ್ದಾರೆ. ■

ನಿವಿನ್ ಪೌಲಿ 50ನೇ ಚಿತ್ರ ವಿಜಯಂ

ಮಲಯಾಳಂ ಸಿನಿಮಾ ಪ್ರೇಕ್ಷಕರು ಕುತೂಹಲದಿಂದ ಕಾಯುತ್ತಿದ್ದ ಬಹುನಿರೀಕ್ಷಿತ ಘೋಷಣೆ ಕೊನೆಗೂ ಹೊರ ಬಿದ್ದಿದೆ. 12 ವರ್ಷಗಳ ನಂತರ ಬ್ಲಾಕ್ ಬಸ್ಟರ್ ಸಿನಿಮಾ ನೀಡಿದ್ದ 'ಪ್ರೇಮಂ' ಜೋಡಿ ನಟ ನಿವಿನ್ ಪೌಲಿ ಮತ್ತು ನಿರ್ದೇಶಕ ಆಲ್ಫೋನ್ಸ್ ಪುತ್ರೇನ್ 'ವಿಜಯಂ' ಎಂಬ ಹೊಸ ಚಿತ್ರಕ್ಕಾಗಿ ಮತ್ತೆ ಒಂದಾಗಿದ್ದಾರೆ. 'ವಿಜಯಂ' ನಿವಿನ್ ಪೌಲಿ ಅವರ 50ನೇ ಸಿನಿಮಾ. ರೇಸಿಂಗ್ ಪ್ರಪಂಚದ ಹಿನ್ನೆಲೆಯಲ್ಲಿ ಸಾಗುವ ಈ ಚಿತ್ರವನ್ನು ಆಲ್ಫೋನ್ಸ್ ಪುತ್ರೇನ್ ಬರೆದು, ನಿರ್ದೇಶಿಸುವುದರ ಜೊತೆಗೆ ಸಂಕಲನ ಮಾಡುತ್ತಿದ್ದಾರೆ. 'ವಿಜಯಂ' ಚಿತ್ರದ ಹಿನ್ನೆಲೆ ಸಂಗೀತವನ್ನು ಸ್ಟೀವ್ ಕೊಟ್ಟೂರ್ ಸಂಯೋಜಿಸಿದ್ದಾರೆ. ■

ಲವ್ 2 ಲಸ್ಸಿ ಸಾಂಗ್ ಲಾಂಚ್

ಹರಿಪ್ರಾಣ ನಿರ್ದೇಶನ ಮಾಡಿರುವ 'ಲವ್ 2 ಲಸ್ಸಿ' ಸಿನಿಮಾದ ಹಾಡು ಇತ್ತೀಚೆಗೆ ರಿಲೀಸ್ ಆಗಿದೆ.

ಈ ಸಿನಿಮಾದ ಪ್ರಮುಖ ಪಾತ್ರಗಳಲ್ಲಿ ಜೀವಿತಾ ಮತ್ತು ಆರ್ಯನ್ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಜಗನ್, ತಾರಾ, ವೈಷ್ಣವಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಎಂ.ಎ.ಅರ್ಜುನ್ ಧೋಣಿ ಸಂಕಲನ, ವಿನು ಮನಸ್ಸು ಸಂಗೀತ ನಿರ್ದೇಶನವಿದೆ.

ನಿರ್ದೇಶಕ ಹರಿಪ್ರಾಣ ಮಾತನಾಡಿ, 'ನೈಜ ಘಟನೆ ಆಧರಿಸಿದ ಪುತ್ತೂರು ಹುಡುಗಿ ಬೆಂಗಳೂರು ಹುಡುಗನ ಲವ್ ಸ್ಟೋರಿ ಇದು. 2006-2007ರಲ್ಲಿ ನಡೆದ ಟ್ರಾಜಿಡಿ ಲವ್ ಸ್ಟೋರಿ' ಎಂದು ಹೇಳಿದ್ದಾರೆ.

ನಟ ಆರ್ಯನ್, 'ಲವ್ 2 ಲಸ್ಸಿ' ಸಿನಿಮಾ ರಿಯಲ್ ಆಗಿ ನಡೆದ ಕಥೆ ಆಗಿದ್ದರಿಂದ ನಟನೆಗೆ ಒಪ್ಪಿಕೊಂಡೆ. ಕಥೆ ಚೆನ್ನಾಗಿದೆ' ಎಂದಿದ್ದಾರೆ.

'ಈ ಚಿತ್ರದ ಹಾಡುಗಳು ಅದ್ಭುತವಾಗಿ ಮೂಡಿ ಬಂದಿವೆ. ಲವ್ ಸ್ಟೋರಿಯಾದರೂ ಫ್ಯಾಮಿಲಿಗೆ ಕನೆಕ್ಟ್ ಆಗುವಂತಹ ಹಲವು ವಿಚಾರಗಳು ಇದರಲ್ಲಿ ಇವೆ' ಎಂದಿದ್ದಾರೆ ನಟಿ ಜೀವಿತಾ. ■

ಜೀವಿತಾ, ಆರ್ಯನ್

ವಿಧಿಗೆ ಸಾಥ್ ನೀಡಿದ ಡಾ.ಜಯಮಾಲ

ಮಹಿಳೆ ಕೇಂದ್ರಿತವಾದ ಕಥೆಯನ್ನು ಹೊಂದಿರುವ 'ವಿಧಿ' ಚಿತ್ರದ ಪೋಸ್ಟರ್ ಅನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ.ಜಯಮಾಲ ಅನಾವರಣಗೊಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಡಾ.ಜಯಮಾಲ, 'ಈ ಸಿನಿಮಾವು ಹೆಣ್ಣು ಮಗಳ ಕಥೆ ಹೊಂದಿದೆ ಎನ್ನಲಾಗಿದೆ. ಇಂತಹ ಚಿತ್ರಗಳು ಪ್ರಸಕ್ತ ಮಹಿಳೆಯರಿಗೆ ಧೈರ್ಯ ತುಂಬುವಂತಿರಬೇಕು' ಎಂದಿದ್ದಾರೆ.

ಜಗದೀಶ್ ಕೊಪ್ಪ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಮೂರನೇ ಸಿನಿಮಾ ಇದು. ಸಿನಿಮಾದ ನಾಯಕಿ, ತಾರಾಗಣ ಹಾಗೂ ತಂತ್ರಜ್ಞರ ಮಾಹಿತಿ ಇನ್ನಷ್ಟೇ ಹೊರ ಬರಬೇಕಿದೆ. ■

ರೈತನ ಬದಲು ಸೈನಿಕನ ಕೊರಳಿಗೆ ಮುತ್ತಿನ ಹಾರ

ಲವಲVK cine ಸ್ವಾರಸ್ಯ

ಯಾವುದೋ ಸನ್ನಿವೇಶಕ್ಕೆ ಹಾಕಿದ ಟ್ಯೂನೊಂದು, ಇನ್ಯಾವುದೋ ಚಿತ್ರಕ್ಕೆ, ಮತ್ಯಾವುದೋ ಸನ್ನಿವೇಶಕ್ಕೆ ಬಳಕೆಯಾದ ಹಲವು ಉದಾಹರಣೆಗಳಿವೆ. ಆ ಪೈಕಿ 'ಮುತ್ತಿನ ಹಾರ' ಚಿತ್ರದ 'ದೇವರು ಹೊಸೆದ ಪ್ರೇಮದ ದಾರ' ಹಾಡು ಸಹ ಒಂದು. ಕನ್ನಡ ಚಿತ್ರರಂಗದ ಅತ್ಯಂತ ಜನಪ್ರಿಯ ವಿಷಾದ ಗೀತೆಗಳಲ್ಲೊಂದಾದ ಈ ಹಾಡು ಹುಟ್ಟಿದ್ದರ ಹಿಂದೆ ಒಂದು ಸ್ವಾರಸ್ಯಕರ ಘಟನೆ ಇದೆ. ವಿಶೇಷವೆಂದರೆ, ಈ ಟ್ಯೂನ್ ಹಾಕಿದ್ದು ಈ ಚಿತ್ರಕ್ಕಲ್ಲ. ಬದಲಿಗೆ ಒಂದು ನಾಟಕಕ್ಕೆ. ಇದನ್ನು ಕೇಳಿ ಇಷ್ಟಪಟ್ಟ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅದನ್ನು 'ಮುತ್ತಿನ ಹಾರ' ಚಿತ್ರಕ್ಕೆ ಬಳಸಿಕೊಂಡರಂತೆ. ಈ ಕುರಿತು ಮಾತನಾಡುವ ಚಿತ್ರಕ್ಕೆ ಸಂಗೀತ ಸಂಯೋಜಿಸಿರುವ ಹಂಸಲೇಖ, 'ವರಕವಿ ದ.ರಾ. ಬೇಂದ್ರೆ ಅವರು ರೈತನನ್ನು 'ಭೂಮಿತಾಯಿಯ ಚೊಚ್ಚಲ ಮಗ' ಎಂದಿದ್ದಾರೆ. 'ಭೂಮಿತಾಯಿಯಾ ಚೊಚ್ಚಲ ಮಗನ ನೋಡಿಹಿರೇನು ಕಣ್ತೆರೆದೊಮ್ಮೆ' ಎಂದು ಪದ್ಯ ಬರೆದಿದ್ದಾರೆ. ಆ ಪದ್ಯವನ್ನು ನಾನು ಒಂದು ನಾಟಕದ ಪ್ರಾರ್ಥನೆಯ ಗೀತೆಯನ್ನಾಗಿ ಮಾಡಿದ್ದೆ. ಆ ಹಾಡನ್ನು ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರಿಗೆ ಕೇಳಿಸಿದ್ದೆ. ಅವರು ಈ ಸಂದರ್ಭದಲ್ಲಿ 'ಮುತ್ತಿನ ಹಾರ' ಚಿತ್ರ ಮಾಡುತ್ತಿದ್ದರು. ಚಿತ್ರದಲ್ಲಿನ ಸನ್ನಿವೇಶಕ್ಕೆ ಈ ಟ್ಯೂನು ಬಹಳ ಸೂಕ್ತವಾಗಿರುವುದರಿಂದ, ಟ್ಯೂನನ್ನು ಮಾತ್ರ 'ಮುತ್ತಿನ ಹಾರ' ಚಿತ್ರಕ್ಕೆ ಬಳಸಿಕೊಳ್ಳುವುದಾಗಿ ಹೇಳಿದರು. ಕೊನೆಗೆ ಅದೇ ಟ್ಯೂನ್ ಇಟ್ಟುಕೊಂಡು ಹೊಸ ಸಾಹಿತ್ಯ ಬರೆದೆ. ಆಗ ಹುಟ್ಟಿದ್ದೇ 'ದೇವರು ಹೊಸೆದ ಪ್ರೇಮದ ದಾರ' ಎನ್ನುತ್ತಾರೆ. ದ.ರಾ. ಬೇಂದ್ರೆ ಅವರ ಪದ್ಯವನ್ನು ಅವರು ಬಿಡಲಿಲ್ಲ. ಕೆಲವು ವರ್ಷಗಳ ನಂತರ ರಾಜೇಂದ್ರ ಸಿಂಗ್ ಬಾಬು ಅವರು 'ಭೂಮಿತಾಯಿಯ ಚೊಚ್ಚಲ ಮಗ' ಚಿತ್ರವನ್ನು ಮಾಡಿದಾಗ, ಅದರಲ್ಲಿ ವರಕವಿಯವರ 'ಭೂಮಿತಾಯಿಯ ಚೊಚ್ಚಲ ಮಗ' ಪದ್ಯವನ್ನು ಬೇರೆ ಟ್ಯೂನ್‌ನೊಂದಿಗೆ ಬಳಸಿಕೊಂಡರು. ವಿಶೇಷವೆಂದರೆ ಈ ಹಾಡಿಗೆ ಡಾ. ರಾಜಕುಮಾರ್ ಧ್ವನಿಯಾಗಿದ್ದರು. ■

-ಲಕ್ಷ್ಮೀಪತಿ

ವಿಜಯಬಂಧ - 3



ಎಡದಿಂದ ಬಲಕ್ಕೆ

3. ಅವಳ ಪಕ್ಕದಲ್ಲಿ ಕುಳಿತವಳು ನನ್ನ ಹಿರಿಯ ಸಹೋದರಿ 2
4. ಈ ಸರಳ ಗಾಯನ ಶೈಲಿಯಲ್ಲಿ ಕವಿತೆಯು ಸಾಹಿತ್ಯ ಗಮಗಮಿಸುತ್ತದೆ 6
7. ಪ್ರಾಣವನ್ನು ಮೊದಲು ತಿರುಗಿಸಿಟ್ಟುಕೊಂಡ ಪ್ರಧಾನಮಂತ್ರಿ 3
8. ನಗರದ ವರ್ತನೆಯನ್ನು ತಿಳಿದುಕೊಂಡ ವ್ಯಾಪಾರಿ 3
9. ಭಾನಗಡಿ ಮಾಡಿದವನಿಗೆ ಈ ಪಾಲು ಸಿಗಲಿಲ್ಲ 2
10. ತನಯನು ಹೀಗೆ ಗೌರವದಿಂದ ತಲೆಬಾಗಿದ್ದಾನೆ 2
12. ಮಾರ್ದನಿಯನ್ನು ಕಿವಿಗೊಟ್ಟು ಕೇಳಿಸಿಕೊಂಡು ನಿಂತ ಮಹಿಳೆ 3
14. ಪಾಯದ ನಡುವೆ ಕುಡಿಯಲು ಸಿದ್ಧಪಡಿಸಿದ ದ್ರವವಿದೆ 3
15. ಜಯದೊಳಗೆ ಭೂಮಿಯನ್ನು ಆವರಿಸಿರುವ ಮಂಡಲವಿದೆ 6
18. ಶಂಕರನಿಗೇಕೆ ಬಂತು ಈ ಅನುಮಾನ? 2

ಮೇಲಿನಿಂದ ಕೆಳಕ್ಕೆ

1. ಹಸಿರು ಮೇಯ್ದು ಶಾಂತವಾಗಿ ಬದುಕುವ ಜೀವಿ 2
2. ಎಳೆದ ಗೆರೆ ಇಲ್ಲಿ ಉಲ್ಟಾ ಆಗಿದೆ 2
3. ನಿಜ,ಈಕೆ ಮರಣವನ್ನೂ ಮೀರಿದವರ ಹೆತ್ತವಳು-ಅದಿತಿ 6
5. ಮಗನು ಬೆಳೆಸುತ್ತಿರುವ ಸುವಾಸನಾ ಎಲೆಗಳ ಸಸ್ಯ 3
6. ತನ್ನವರು ಇರುವ ಹುಟ್ಟಿದ ಮನೆ 3
8. ನಾಗರಿಕರ ಪಾಲನೆಗೆ ಸ್ಥಳೀಯ ಆಡಳಿತಾಧಿಕಾರವುಳ್ಳ ಪುರಸಭೆ 6
11. ಜಯಕ್ಕಾಗಿ ಕಾಯುತ್ತಿರುವ ಮಗ 3
13. ಪ್ರಾಣದ ಅಸ್ತಿತ್ವವೇ ಇಲ್ಲದ ಸ್ಥಿತಿ 3
16. ನಾಗರಿಕನ ಕರದಲ್ಲಿರುವ ಹಕ್ಕಿಯುರೆಕ್ಕೆ 2
17. ಮರಣಲೋಕವನ್ನು ಆಳುವ ದೇವರು 2

ವಿಜಯಬಂಧ | 2

ಎಡದಿಂದ ಬಲಕ್ಕೆ: 2.ಅನುವಾದ 4.ಸಾವು 5.ವಜನು 6.ಪರಿಸರ 8.ಮನೋಹರ 10.ತಂಗುದಾಣ 12.ರಸಕವಿ 14.ನಮುನ 16.ವಿಷ 17.ಶತಾವರಿ

ಮೇಲಿನಿಂದ ಕೆಳಕ್ಕೆ: 1.ತೇವ 2.ಅನುಗ್ರಹ 3.ದಳಪತಿ 4.ಸಾಹಸ 7.ರಣಾಂಗಣ 8.ಮಧುಕರ 9.ಅವಿನಾಶ 11.ಗುಳ್ಳೆನರಿ 13.ವಿಶೇಷ 15.ನದಿ

ರಾಜಾಸಂಗಮೇಶ ಎನ್. ಹಿರೇಮಠ

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.
ದೂ: 9513747474

ವೃಷಭ, ಕನ್ಯಾ, ಮಕರ -ಈ ರಾಶಿಯವರಿಗೆ ವಿಮಲ ಯೋಗ

ಮೇಷ: ಕುಟುಂಬದ ವ್ಯಕ್ತಿಗಳ ಜೊತೆ ವಿಶೇಷ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಪೂರಕ ಘಟನೆಗಳು ನಡೆಯಲಿವೆ. ಕತ್ತಲೆಯ ಬಗೆಗೆ ಇರುವ ಭಯವು ಇಂದು ಹೆಚ್ಚು ತೊಂದರೆಯನ್ನು ಕೊಡಬಹುದು. **ಶುಭ ಸಂಖ್ಯೆ :** 5, **ಅದೃಷ್ಟ ಬಣ್ಣ:** ಕಂದು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಹೊಸ ವಿಷಯಗಳನ್ನು ಕಲಿತು ಅದನ್ನು ಅಳವಡಿಸಿಕೊಳ್ಳುವ ಜೀವನಶೈಲಿ ನಿಮ್ಮದಾಗುತ್ತದೆ. ಉತ್ತಮ ವಿಚಾರಗಳು ಒಬ್ಬರಿಂದ ಇನ್ನೊಬ್ಬರಿಗೆ ತಿಳಿದು ವಿವಾಹದ ವಿಚಾರದಲ್ಲಿ ಅನುಕೂಲವಾಗಲಿದೆ. **ಶುಭ ಸಂಖ್ಯೆ :** 6, **ಅದೃಷ್ಟ ಬಣ್ಣ:** ಹಸಿರು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಮನಃಶಾಂತಿಯನ್ನು ವೃದ್ಧಿಸಿಕೊಳ್ಳಲು ಈಗ ಮನಸ್ಸಿನಲ್ಲಿರುವ ಕೆಲವು ವಿಷಯಗಳನ್ನು ಹೊರಗೆ ಹಾಕುವುದರ ಸಲುವಾಗಿ ಧ್ಯಾನ ಅಭ್ಯಾಸ ಮಾಡಿಕೊಳ್ಳಿ. ಲಘು ಪ್ರಯಾಣ ಮಾಡಬೇಕಾಗುವುದು. **ಶುಭ ಸಂಖ್ಯೆ :** 4, **ಅದೃಷ್ಟ ಬಣ್ಣ:** ಹಳದಿ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಭವಿಷ್ಯದ ಯೋಜನೆಗಳಿಗೆ ಗಮನ ಕೊಡಬೇಕಾಗಿ ಬರುವುದು. ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿರುವವರಿಗೆ ವ್ಯವಹಾರಗಳಲ್ಲಿ ಹೇಳುವ ಲಾಭ ಇಲ್ಲದಿದ್ದರೂ ಹೆದರುವ ಅವಶ್ಯಕತೆ ಇರುವುದಿಲ್ಲ. **ಶುಭ ಸಂಖ್ಯೆ :** 2, **ಅದೃಷ್ಟ ಬಣ್ಣ:** ನೀಲಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ವೈಯಕ್ತಿಕ ಗಳಿಕೆಗಿಂತ ಕಂಪನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಗಮನ ಹರಿಸಿ. ಲೋಹ ಮತ್ತು ಮರದ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗುತ್ತದೆ. ಹೊಸ ಕೆಲಸಕ್ಕೆ ಪ್ರಯತ್ನಿಸಬಹುದು. **ಶುಭ ಸಂಖ್ಯೆ :** 1, **ಅದೃಷ್ಟ ಬಣ್ಣ:** ಪಾಚಿ ಹಸಿರು
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ವಿರೋಧಿಗಳ ಅಥವಾ ಸಂಬಂಧಿಕರ ಟೀಕೆಗಳಿಗೆ ಕಿವಿಯೊಡ್ಡಿದರೆ, ಕೇವಲ ಸಮಯ ಹಾಳಾಗುವುದು ಎಂದು ತಿಳಿದಿರಲಿ. ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ. **ಶುಭ ಸಂಖ್ಯೆ :** 3, **ಅದೃಷ್ಟ ಬಣ್ಣ:** ಕಂಚು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಸಂಸ್ಥೆಯೊಂದರಲ್ಲಿ ಸಲಹೆಗಾರರಾಗಿ ನೇಮಕಗೊಂಡಿರುವ ನಿಮಗೆ ವ್ಯಾವಹಾರಿಕ ನಷ್ಟದ ಸಂಭವ ಎದುರಾಗಬಹುದು. ಅರಣ್ಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸ ಇರುವುದು. ತಂದೆಯ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು. **ಶುಭ ಸಂಖ್ಯೆ :** 9, **ಅದೃಷ್ಟ ಬಣ್ಣ:** ಕಪ್ಪು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಗಣಿತದ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುವ ಕನಸಿಗೆ ಪುಷ್ಟಿ ಸಿಗಲಿದೆ. ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ. ವೈಯಕ್ತಿಕ ವಿಚಾರಗಳತ್ತ ಗಮನಹರಿಸಿ. **ಶುಭ ಸಂಖ್ಯೆ :** 3, **ಅದೃಷ್ಟ ಬಣ್ಣ:** ಕೇಸರಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಕೃಷಿ ಭೂಮಿ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭ. ನಿಮ್ಮ ದಾರಿಗೆ ಎದುರಾಗಿ ಉತ್ತಮ ಅವಕಾಶಗಳು ಹುಡುಕಿಕೊಂಡು ಬರಲಿವೆ. ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. **ಶುಭ ಸಂಖ್ಯೆ :** 8, **ಅದೃಷ್ಟ ಬಣ್ಣ:** ಬಿಳಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಅಪರೂಪದ ಮತ್ತು ಸಂತೋಷಮಯ ಔತಣಕೂಟವೊಂದರಲ್ಲಿ ಭಾಗವಹಿಸಲಿದ್ದೀರಿ. ವಿದ್ಯಾರ್ಥಿಗಳು ಉದ್ಯೋಗದ, ಹಣದ ಆಸೆಯನ್ನು ಬಿಟ್ಟು ಓದು ಮುಂದುವರಿಸಿ. **ಶುಭ ಸಂಖ್ಯೆ :** 2, **ಅದೃಷ್ಟ ಬಣ್ಣ:** ಬೂದು
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಆಲಸ್ಯ ಮನೋಭಾವ ಹೆಚ್ಚಾಗಿ ಉತ್ಸಾಹ ಕಳೆದುಕೊಳ್ಳಬಹುದು. ಹಿಂದಿನ ಕೆಲಸದಲ್ಲಿನ ದೋಷಗಳನ್ನು ಈ ಬಾರಿ ಪುನರಾವರ್ತಿಸದೆ ಅಚ್ಚುಕಟ್ಟಾಗಿ ಮಾಡುವ ಬಗ್ಗೆ ಹೆಚ್ಚಿನ ಪ್ರಯತ್ನವಿರಲಿ. **ಶುಭ ಸಂಖ್ಯೆ :** 7, **ಅದೃಷ್ಟ ಬಣ್ಣ:** ಹಸಿರು
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಯೋಜನೆಯ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಅನಾಯಾಸವಾಗಿ ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯ ಕೂಡಿ ಬರಲಿದೆ. **ಶುಭ ಸಂಖ್ಯೆ :** 1, **ಅದೃಷ್ಟ ಬಣ್ಣ:** ಖಾಕಿ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಭಾರತ-ಜಪಾನ್ ಅಭಿವೃದ್ಧಿಗೆ ಪಂಚಸೂತ್ರ

ಪ್ರಧಾನಿ ಮೋದಿ –ತಕ್ಕೈಚಿ ದ್ವಿಪಕ್ಷೀಯ ಸಭೆ | 10 ಶತಕೋಟಿ ಯೆನ್ ಹೂಡಿಕೆಗೆ ಜಪಾನ್ ಒಲವು

ಹೊಸದಿಲ್ಲಿ: ಭಾರತ-ಜಪಾನ್ ನಡುವಿನ ವ್ಯಾಪಾರ ಬಲವರ್ಧನೆ, ಸೆಮಿಕಂಡಕ್ಟರ್ ಪೂರೈಕೆ ಸರಪಳಿ ಬಲಪಡಿಸುವುದು, ಅತ್ಯಾಧುನಿಕ ತಂತ್ರಜ್ಞಾನ ನೆರವು, ರಕ್ಷಣೆ, ಭದ್ರತೆಯಲ್ಲಿ ಸಹಕಾರ, ಸಮಗ್ರ ಆರ್ಥಿಕ ಪಾಲುದಾರಿಕೆ, ಆರೋಗ್ಯ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ಇಂಧನ ಭದ್ರತೆ ವಿಷಯದಲ್ಲಿ ಒಪ್ಪಂದಕ್ಕೆ ಮುಂದಾಗಿವೆ.

ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆ ನಡುವೆ ರಕ್ಷಣೆ, ಆರ್ಥಿಕ ಭದ್ರತೆ, ತಂತ್ರಜ್ಞಾನ ಸಹಕಾರ, ಇಂಧನ ಅಭಿವೃದ್ಧಿ, ಪ್ರಾದೇಶಿಕ ಸ್ಥಿರತೆಯ ಸೂತ್ರದಡಿ ಕೆಲಸ ಮಾಡಲು ಉಭಯ ದೇಶಗಳು ನಿರ್ಧರಿಸಿವೆ.

ಮೂರು ದಿನಗಳ ಪ್ರವಾಸದ ಅಂಗವಾಗಿ ಭಾರತಕ್ಕೆ ಮೊದಲ ಬಾರಿಗೆ ಆಗಮಿಸಿರುವ ಜಪಾನ್ ಪ್ರಧಾನಿ ಸನೆ ತಕ್ಕೈಚಿ ಅವರು ಭಾರತ-ಜಪಾನ್ 16ನೇ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಂಡರು. ಉಭಯ ದೇಶಗಳ ನಡುವಿನ ಬಾಂಧವ್ಯ ವೃದ್ಧಿ ಕುರಿತು ಮೋದಿ ಅವರೊಂದಿಗೆ ಮಾತುಕತೆ ನಡೆಸಿದರು. ''ಭಾರತ-ಜಪಾನ್ ನಡುವಿನ ಸಂಬಂಧ ಸಾಮೂಹಿಕ ಬೆಳವಣಿಗೆ, ಸಮೃದ್ಧಿ, ಸ್ಥಿರ ಕಾರ್ಯತಂತ್ರ, ನಂಬಿಕೆ ಹಾಗೂ ಒಮ್ಮತದ ಪಾಲುದಾರಿಕೆಯ ಬಂಧವಾಗಿದೆ,'' ಎಂದು ತಕ್ಕೈಚಿ ಹೇಳಿದರು.

ತಕ್ಕೈಚಿ ಕಿರಿಯ ಸಹೋದರಿಯಂತೆ..

ಇದಕ್ಕೂ ಮೊದಲು ಗುರುವಾರ ಬೆಳಗ್ಗೆ ಹೊಸದಿಲ್ಲಿ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಜಪಾನ್ ಪ್ರಧಾನಿ ತಕ್ಕೈಚಿ ಅವರನ್ನು ಖುದ್ದು ಪ್ರಧಾನಿ ಮೋದಿ ಅವರು ಸ್ವಾಗತಿಸಿದರು. ಶೃಂಗಸಭೆ ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಸನೆ ತಕ್ಕೈಚಿ ನನ್ನ ಕಿರಿಯ ಸಹೋದರಿ ಇದ್ದಂತೆ. ಮೊದಲ ಬಾರಿಗೆ ಭಾರತಕ್ಕೆ ಬಂದಿರುವ ಅವರಿಗೆ ಹೃದಯಪೂರ್ವಕ ಸ್ವಾಗತ ಕೋರುವೆ. ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾದ ಅವರು ದೂರದೃಷ್ಟಿಯ ನಾಯಕಿ,'' ಎಂದು ಮೋದಿ ಶ್ಲಾಘಿಸಿದರು.

ಐದು ಕ್ಷೇತ್ರಗಳ ಮೇಲೆ ಉಭಯ ದೇಶಗಳ ಗಮನ

1 ವ್ಯೂಹಾತ್ಮಕ ಪಾಲುದಾರಿಕೆ
ಭಾರತ-ಜಪಾನ್ ಬಂಧವನ್ನು ಜಾಗತಿಕ ಕಾರ್ಯತಂತ್ರ ಪಾಲುದಾರಿಕೆಯಾಗಿ ಬಲಪಡಿಸುವುದು. ರಕ್ಷಣೆ, ಭದ್ರತೆ, ಆರ್ಥಿಕ ಸ್ಥಿರತೆ, ತಂತ್ರಜ್ಞಾನ, ನಾವೀನ್ಯ ತಂತ್ರಜ್ಞಾನದ ಅನ್ವೇಷಣೆಯಲ್ಲಿ ಸಹಕಾರ ಬಲಪಡಿಸಲು ಉಭಯ ನಾಯಕರು ಸಮ್ಮತಿಸಿದರು.

2 ರಕ್ಷಣಾ ಸಹಕಾರಕ್ಕೆ ಒತ್ತು
ಕಡಲ ಭದ್ರತೆ ಹೆಚ್ಚಿಸುವುದು, ಕಾಲಕಾಲಕ್ಕೆ ಸಮರಾಭ್ಯಾಸ ನಡೆಸುವ ಮೂಲಕ ಕಡಲ ಕ್ಷೇತ್ರದ ಕುರಿತು ಅರಿವು ಮೂಡಿಸುವುದು, ತಂತ್ರಜ್ಞಾನ ವರ್ಗಾವಣೆ ಮೂಲಕ ರಕ್ಷಣಾ ಸಹಕಾರ ಬಲಗೊಳಿಸಲು ಉಭಯ ದೇಶಗಳು ಒಪ್ಪಿಕೊಂಡವು.

3 ಆರ್ಥಿಕ ರಕ್ಷಣೆ
ಆರ್ಥಿಕ ಭದ್ರತೆಗೆ ಉಭಯ ದೇಶಗಳು ಜಂಟಿ ಸಹಕಾರ ಘೋಷಣೆ ಮಾಡಿದ್ದು, ಸೆಮಿಕಂಡಕ್ಟರ್, ನಿರ್ಣಾಯಕ ಖನಿಜಗಳ ಪೂರೈಕೆ ಸರಪಳಿ ಬಲಪಡಿಸುವುದು, ಸ್ವಚ್ಛ ಇಂಧನ ಅಭಿವೃದ್ಧಿ, ಔಷಧ ಹಾಗೂ ಮಾಹಿತಿ ತಂತ್ರಜ್ಞಾಣ ಕ್ಷೇತ್ರದಲ್ಲಿ ಸಹಕಾರ ವೃದ್ಧಿ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕ್ಷೇತ್ರದಲ್ಲಿ ಸಹಕಾರ ಬಲಪಡಿಸಲು ಚೌಕಟ್ಟು ರೂಪಿಸಲು ಸಮ್ಮತಿಸಿವೆ.

4 ಮೂಲಸೌಕರ್ಯಕ್ಕೆ ಒತ್ತು
ಶೃಂಗಸಭೆಯಲ್ಲಿ ಇಂಧನ, ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲು ನಿರ್ಧರಿಸಲಾಗಿದೆ. ಜೈವಿಕ ಅನಿಲ, ಹೈಡ್ರೋಜನ್, ಅಮೋನಿಯಂ ಇಂಧನ ಅಭಿವೃದ್ಧಿ, ಪೆಟ್ರೋಲಿಯಂ ನಿಕ್ಷೇಪಗಳ ರಕ್ಷಣೆ, ಅಭಿವೃದ್ಧಿಗೆ ಕಾರ್ಯತಂತ್ರ ಸಹಕಾರ ನೀತಿ ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ. ಭಾರತದ ಹೈಸ್ಪೀಡ್ ರೈಲು ಯೋಜನೆಗೆ ಬೆಂಬಲ, ಭವಿಷ್ಯದ ಸೂಪರ್‌ಫಾಸ್ಟ್ ರೈಲ್ವೆ ಯೋಜನೆಗಳಿಗೆ ಸಹಕಾರ ನೀಡಲು ಜಪಾನ್ ಸಮ್ಮತಿಸಿದೆ.

5 ಪ್ರಾದೇಶಿಕ ಭದ್ರತೆ
ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಮಿಲಿಟರಿ ಚಟುವಟಿಕೆ, ಉತ್ತರ ಕೊರಿಯಾದ ಕ್ಷಿಪಣಿ ಉತ್ಪಾದನೆ ಕಾರ್ಯಕ್ರಮ, ಹೆಚ್ಚುತ್ತಿರುವ ಉಗ್ರವಾದದ ಬಗ್ಗೆ ಕಳವಳ ವ್ಯಕ್ತಪಡಿಸಿದ ಉಭಯ ದೇಶಗಳು, ಇಂಡೊ-ಪೆಸಿಫಿಕ್ ವಲಯದಲ್ಲಿ ಕ್ವಾಡ್ ದೇಶಗಳ ಸಹಕಾರ ಬಲಪಡಿಸುವ ನಿರ್ಣಯ ಕೈಗೊಂಡಿವೆ. ವಿಶ್ವಸಂಸ್ಥೆ ಸುಧಾರಣೆ, ಭದ್ರತಾ ಮಂಡಳಿಯಲ್ಲಿ ಭಾರತ-ಜಪಾನ್‌ಗೆ ಕಾಯಂ ಸದಸ್ಯತ್ವ ನೀಡುವ ಅಗತ್ಯವಿದೆ ಎಂದು ಉಭಯ ದೇಶಗಳ ಪ್ರಧಾನಿಗಳು ಪ್ರತಿಪಾದಿಸಿದರು.

ಮುಂದಿನ ಒಂದು ದಶಕದ ಅವಧಿಯಲ್ಲಿ ಭಾರತದ ವಿವಿಧ ಕ್ಷೇತ್ರಗಳಲ್ಲಿ ಜಪಾನ್ 10 ಶತಕೋಟಿ ಯೆನ್ ಹೂಡಿಕೆ ಮಾಡಲಿದೆ. 120 ವ್ಯಾಪಾರ ಒಪ್ಪಂದಗಳ ಮೂಲಕ ಭಾರತಕ್ಕೆ ಬೃಹತ್ ಪ್ರಮಾಣದ ಹೂಡಿಕೆ ಹರಿದು ಬರಲಿದೆ.
– ಸನೆ ತಕ್ಕೈಚಿ ಜಪಾನ್ ಪ್ರಧಾನಿ

ಮುಂಬಯಿನಲ್ಲಿ ಭಾರೀ ಮಳೆ ಕೊಚ್ಚಿಹೋದ ಪಾದಚಾರಿ

ಮುಂಬಯಿ: ದೇಶದ ವಾಣಿಜ್ಯ ರಾಜಧಾನಿ ಮಹಾರಾಷ್ಟ್ರದ ಮುಂಬಯಿನಲ್ಲಿ ಭಾರೀ ಮಳೆಯಿಂದ ತುಂಬಿ ಹರಿಯುತ್ತಿದ್ದ ರಸ್ತೆಯಲ್ಲಿ ಮ್ಯಾನ್‌ಹೋಲ್‌ಗೆ ಬಿದ್ದು 60 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ.

ಮೃತ ವ್ಯಕ್ತಿಯನ್ನು ಅಸ್ಲಾಮ್ ಇಸಾಕ್ ಶೇಖ್ (60) ಎಂದು ಗುರುತಿಸಲಾಗಿದೆ. ಎರಡು ದಿನಗಳ ಹಿಂದಷ್ಟೇ ಶಾಲಾ ಬಸ್ ಮೇಲೆ ಮರ ಬಿದ್ದು 11 ವರ್ಷ ಬಾಲಕ ಮೃತಪಟ್ಟ ಘಟನೆ ಜರುಗಿತ್ತು. ಇದರ ಬೆನ್ನಿಗೇ ಮತ್ತೊಂದು ದುರಂತ ನಡೆದಿರುವುದು ಬೃಹನ್ಮುಂಬಯಿ ಮಹಾನಗರ ಪಾಲಿಕೆ (ಬಿಎಂಸಿ) ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ನಿದರ್ಶನವಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾಗಿದೆ.

ತುಂಬಿ ಹರಿಯುತ್ತಿದ್ದ ರಸ್ತೆಯಲ್ಲಿ ತೆರೆದ ಮ್ಯಾನ್‌ಹೋಲ್‌ಗೆ ಬಿದ್ದು ಸಾವು

ನಗರದ ಚಾಂದಿವಲಿ ಪ್ರದೇಶದಲ್ಲಿ ಚರಂಡಿಗಳ ಸ್ವಚ್ಛಗೊಳಿಸಲು ಮ್ಯಾನ್‌ಹೋಲ್ ಮುಚ್ಚಳ ತೆಗೆಯಲಾಗಿತ್ತು. ಭಾರೀ ಮಳೆಯಿಂದ ತುಂಬಿ ಹರಿಯುತಿದ್ದ ರಸ್ತೆಯಲ್ಲಿ ಮೊಬೈಲ್ ಫೋನ್‌ನಲ್ಲಿ ಮಾತನಾಡಿಕೊಂಡು ಬರುತ್ತಿದ್ದ ಇಸ್ಲಾಂ ಶೇಖ್ ತೆರೆದ ಮ್ಯಾನ್‌ಹೋಲ್ ಒಳಗೆ ಜಾರಿ ಬಿದ್ದಿದ್ದಾರೆ. ಕೂಡಲೇ ಕಾರ್ಯಾಚರಣೆಗೆ ಇಳಿದ ವಿಪತ್ತು ನಿರ್ವಹಣಾ ತಂಡಗಳು, ಚರಂಡಿಯಲ್ಲಿ ಬಿದ್ದು ಕೊಚ್ಚಿಕೊಂಡು ಹೋಗಿದ್ದ ವ್ಯಕ್ತಿಯ ಮೃತದೇಹವನ್ನು ಪತ್ತೆ ಮಾಡಿವೆ.

ಘಟನಾ ಸ್ಥಳಕ್ಕೆ ದೌಡಾಯಿಸಿದ ಬಿಎಂಸಿ ಉಪ ಮೇಯರ್ ಸಂಜಯ್ ಘಡಿ, ವಾರ್ಡ್ ಸಮಿತಿ ಮುಖ್ಯಸ್ಥ ವಿಜೇಂದ್ರ ಶಿಂಧೆ ಹಲವು ಅಧಿಕಾರಿಗಳು ಪರಿಶೀಲನೆ ನಡೆಸಿದರು. ಮ್ಯಾನ್‌ಹೋಲ್ ಮುಚ್ಚದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಉಪಮೇಯರ್ ಭರವಸೆ ನೀಡಿದರು. ಮೃತ ವ್ಯಕ್ತಿಯ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಘೋಷಣೆ ಮಾಡಲಾಗಿದೆ.

ಮ್ಯಾನ್‌ಹೋಲ್ ದುರಂತಕ್ಕೆ ಬೃಹನ್ಮುಂಬಯಿ ಪಾಲಿಕೆಯ ನಾಲ್ವರು ಅಧಿಕಾರಿಗಳ ತಲೆದಂಡವಾಗಿದೆ.

ಉತ್ತರಾಖಂಡದಲ್ಲಿ ಮಳೆ ಆರ್ಭಟ

ಡೆಹ್ರಾಡೂನ್: ಮುಂಗಾರು ಮಳೆಯು ಆರ್ಭಟಕ್ಕೆ ಅಲಕನಂದಾ ಹಾಗೂ ಮಂದಾಕಿನಿ ನದಿಗಳು ಉಕ್ಕಿ ಹರಿದಿವೆ. ರುದ್ರಪ್ರಯಾಗದಲ್ಲಿ ಕೇದಾರನಾಥ್ ಯಾತ್ರೆ ಮಾರ್ಗದಲ್ಲಿ ಭೂ ಕುಸಿದಿದೆ. ಭಾರಿ ಮಳೆಯಿಂದ ಬದರಿನಾಥ ರಾಷ್ಟ್ರೀಯ ಹೆದ್ದಾರಿ ಮೇಲೆ ಬೃಹತ್ ಪ್ರಮಾಣದ ಕಲ್ಲುಮಣ್ಣು ಕುಸಿದಿದೆ. ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಮುಂಜಾಗ್ರತಾ ಕ್ರಮವಾಗಿ ಯಾತ್ರಾರ್ಥಿಗಳ ಪ್ರಯಾಣವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

Quick ನ್ಯೂಸ್

- ಐತಿಹಾಸಿಕ ಒಪ್ಪಂದಗಳು ಮತ್ತು ನಕ್ಷೆಗಳ ಆಧಾರದ ಮೇಲೆ ಗಡಿ ವಿವಾದ ಬಗೆಹರಿಸಲು ಭಾರತದೊಂದಿಗೆ ರಾಜತಾಂತ್ರಿಕ ಮಾತುಕತೆಗೆ ಸಿದ್ಧ ಎಂದು ನೇಪಾಳ ವಿದೇಶಾಂಗ ಸಚಿವ ಶಿಶಿರ್ ಖನಾಲ್.
- ಮನಾಲಿ ಮತ್ತು ಲೇಹ್ ಸಂಪರ್ಕಿಸುವ ವಿಶ್ವದ ಅತಿ ಉದ್ದದ ಅಟಲ್ ಸುರಂಗದ ಅಟಲ್ ಸುರಂಗದ ಬಳಿ ಭೀಕರ ಅಪಘಾತ; ನಿರ್ಮಾಣ ಹಂತದ ಸೇತುವೆ ಮೇಲಕ್ಕೆ ನೆಗೆದು, ಸರಳಿಗೆ ಸಿಲುಕಿದ ಕಾರು.
- ಕತಾರ್ ಉಡುಗೊರೆ ನೀಡಿದ್ದ ವಿಮಾನದಲ್ಲಿ ಚೊಚ್ಚಲ ಹಾರಾಟ ನಡೆಸಿದ ಅಮೆರಿಕ ಅಧ್ಯಕ್ಷ ಟ್ರಂಪ್; ಹೊಸ ಏರ್‌ಫೋರ್ಸ್ ಒನ್ ವಿಮಾನ ಹಸ್ತಾಂತರವಾಗುವವರೆಗೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಲಿದೆ.
- ಈಶಾನ್ಯ ಭಾರತದಲ್ಲಿ 'ಡಬಲ್ ಎಂಜಿನ್' ಸರಕಾರದ ಭರವಸೆ ಗಾಳಿಯಲ್ಲಿ ಮಾಯ, ಪ್ರವಾಹದಲ್ಲಿ ನಲುಗುತ್ತಿದ್ದರೂ ಕೇಂದ್ರದ ಅಲಕ್ಷ್ಯ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವ್ಯಂಗ್ಯ.
- 2 ದಶಕಗಳ ನಂತರ ಸರಕಾರಿ ಬಂಗಲೆ ಖಾಲಿ ಮಾಡಿ ಸ್ವಂತ ಮನೆಗೆ ತೆರಳಿದ ಬಿಹಾರದ ಮಾಜಿ ಸಿಎಂ ರಾಬ್ಡಿ ದೇವಿ; 2005ರಲ್ಲಿ ಪ್ರತಿಪಕ್ಷ ನಾಯಕಿಯಾಗಿದ್ದ ರಾಬ್ಡಿ ದೇವಿ ಅವರಿಗೆ ಬಂಗಲೆಯನ್ನು ಮಂಜೂರಾಗಿತ್ತು.
- ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಧರಣಿ ಎಚ್ಚರಿಕೆ ಹಿನ್ನೆಲೆಯಲ್ಲಿ ಹೊಸ ಆರ್‌ಟಿಐ ನಿಯಮಗಳಿಗೆ ಮಹಾರಾಷ್ಟ್ರ ಸರಕಾರದಿಂದ ತಡೆ. ಆರ್‌ಟಿಐ ಅರ್ಜಿ ಸಲ್ಲಿಕೆಗೆ ದುಬಾರಿ ಶುಲ್ಕಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ.

ಕಡಲ್ಗಳ್ಳರ ದಾಳಿ ವಿಫಲಗೊಳಿಸಿದ ತ್ರಿಖಂಡ್

ಹೊಸದಿಲ್ಲಿ: ಅರಬ್ಬಿ ಸಮುದ್ರದ ಗಲ್ಫ್ ಆಫ್ ಅದೇನ್ ಬಳಿ ಭಾರತದ ಕಡೆಗೆ ಸಾಗುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ಕಡಲ್ಗಳ್ಳರ ದಾಳಿಯನ್ನು ವಿಫಲಗೊಳಿಸುವಲ್ಲಿ ಭಾರತೀಯ ನೌಕಾಪಡೆಯ ಯುದ್ಧನೌಕೆ 'ಐಎನ್‌ಎಸ್ ತ್ರಿಖಂಡ್' ಯಶಸ್ವಿಯಾಗಿದೆ. ಕಡಲ್ಗಳ್ಳರು ದಾಳಿ ಮಾಡಿದ್ದ ಎಂ.ವಿ. ಗೋಲ್ಡನ್ ಆರ್ಸನಲ್ ಹಡಗಿಗೆ ಪ್ರವೇಶಿಸಿದ್ದ ಭಾರತೀಯ ನೌಕಾಪಡೆಯ ಸಾಗರ ಕಮಾಂಡೋಗಳು (ಎಂಎಆರ್‌ಸಿಒಎಸ್) ರಕ್ಷಣೆ ನೀಡಿದ್ದಾರೆ. ಹಡಗು ಭಾರತಕ್ಕೆ ನಿರ್ಣಾಯಕ ಸರಕನ್ನು ಸಾಗಣೆ ಮಾಡುತ್ತಿತ್ತು. ಕಡಲ್ಗಳ್ಳರ ದಾಳಿಯಾಗುತ್ತಿದ್ದಂತೆ ಹಡಗಿನ ಸಿಬ್ಬಂದಿ ತಮ್ಮನ್ನು ತಾವು ಸುರಕ್ಷತಾ ಕೊಠಡಿಯಲ್ಲಿ ಲಾಕ್ ಮಾಡಿಕೊಂಡು ಬಳಿಕ ದಾಳಿ ಕುರಿತಂತೆ ನೌಕಾ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಹಡಗಿನ ಸಮೀಪಕ್ಕೆ ಭಾರತದ ಯುದ್ಧನೌಕೆ ತೆರಳುತ್ತಿದ್ದಂತೆ ಕಡಲ್ಗಳ್ಳರು ಅಲ್ಲಿಂದ ಕಾಲ್ಕಿತ್ತಿದ್ದಾರೆ. ಬಳಿಕ, ಹಡಗು ಅಪಾಯಮುಕ್ತವಾಗಿದೆ ಎಂದು ಘೋಷಿಸಲಾಯಿತು.

ಜೈಲಲ್ಲಿ ತಿಂಗಳು, ಸಿಎಂ ಹುದ್ದೆಯಿಂದ ವಜಾ!

ಹೊಸದಿಲ್ಲಿ: ಮುಂಗಾರು ಅಧಿವೇಶನದಲ್ಲಿ ಕೇಂದ್ರ ಸರಕಾರವು 130ನೇ ಸಾಂವಿಧಾನಿಕ ತಿದ್ದುಪಡಿ ವಿಧೇಯಕ-2025 ಅನ್ನು ಮಂಡಿಸಲು ಸಜ್ಜಾಗಿದೆ. ಪ್ರಧಾನಿ, ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಅಥವಾ ರಾಜ್ಯ ಸಚಿವರು ಕ್ರಿಮಿನಲ್ ಪ್ರಕರಣಗಳಲ್ಲಿ ಸಿಲುಕಿ ಸತತ 30 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದರೆ, ಅವರು 31ನೇ ದಿನ ಸ್ವಯಂಚಾಲಿತವಾಗಿ ತಮ್ಮ ಅಧಿಕಾರದಿಂದ ವಜಾಗೊಳ್ಳುವ ನಿಯಮವನ್ನು ಈ ವಿಧೇಯಕ ಒಳಗೊಂಡಿದೆ. ಕಾನೂನಿನ ಪ್ರಕಾರ, ಕನಿಷ್ಠ 5 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಜೈಲು ಶಿಕ್ಷೆಗೆ ಗುರಿಯಾಗಬಹುದಾದ ಅಪರಾಧಗಳಲ್ಲಿ ಭಾಗಿಯಾಗಿರುವ ಉನ್ನತ ಸಾಂವಿಧಾನಿಕ ಹುದ್ದೆಯವರು, ಬಂಧನಕ್ಕೊಳಗಾದ 30 ದಿನಗಳೊಳಗೆ ನ್ಯಾಯಾಲಯದಿಂದ ಜಾಮೀನು ಪಡೆಯಬೇಕು. ಈ ನಿಟ್ಟಿನಲ್ಲಿ ವಿಫಲರಾದರೆ, ಮುಂದಿನ ದಿನವೇ ಅವರ ಹುದ್ದೆ ತಾನಾಗಿಯೇ ರದ್ದಾಗುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುವುದು ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತವನ್ನು ಖಾತರಿಪಡಿಸುವುದು ಇದರ ಮುಖ್ಯ ಉದ್ದೇಶ ಎಂದು ಕೇಂದ್ರ ಪ್ರತಿಪಾದಿಸುತ್ತಿದೆ.

ಈ ವಿಧೇಯಕವನ್ನು ಸದ್ಯ ಪರಿಶೀಲಿಸುತ್ತಿರುವ ಬಿಜೆಪಿ ಸಂಸದೆ ಅಪರಾಜಿತಾ ಸಾರಂಗಿ ನೇತೃತ್ವದ 31 ಸದಸ್ಯರ ಜಂಟಿ ಸಂಸದೀಯ ಸಮಿತಿಯು ಜುಲೈ 17ರಂದು ತನ್ನ ಅಂತಿಮ ವರದಿಯನ್ನು ಸಲ್ಲಿಸುವ ಸಾಧ್ಯತೆಯಿದೆ.

ಎಐ ಆಧಾರಿತ ವಿಷಯದಿಂದ ನ್ಯಾಯ ವ್ಯವಸ್ಥೆ ನಾಶ

ಹೊಸದಿಲ್ಲಿ: ಕಾನೂನು ಪ್ರಕ್ರಿಯೆಯಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎಐ) ವಿನಾಶಕಾರಿ ಎಂದಿರುವ ಸುಪ್ರೀಂ ಕೋರ್ಟ್, ''ಕಾನೂನು ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ನಿಯಂತ್ರಿಸದೇ ಹೋದರೆ ನಮ್ಮ ಬೌದ್ಧಿಕ ಶಕ್ತಿಯನ್ನು ನುಂಗುತ್ತದೆ. ಪರಿಸ್ಥಿತಿ ಕೈ ಮೀರಿದರೆ ನ್ಯಾಯಾಂಗ ವ್ಯವಸ್ಥೆಯಡಿ ಬರುವ ಜನರನ್ನು ತಂತ್ರಜ್ಞಾನದ ಪರಾವಲಂಬಿಯಾಗಿ ಮಾಡುತ್ತದೆ. ಎಐ ಆಧಾರಿತ ವಿಷಯದಿಂದ ನ್ಯಾಯ ವ್ಯವಸ್ಥೆ ವಿನಾಶದ ಹಾದಿ ಹಿಡಿಯಬಹುದು,'' ಎಂದು ಆತಂಕ ವ್ಯಕ್ತಪಡಿಸಿದೆ.

- ತಂತ್ರಜ್ಞಾನ ನಿಯಂತ್ರಿಸದಿದ್ದರೆ ನಮ್ಮ ಬೌದ್ಧಿಕ ಶಕ್ತಿಯನ್ನು ನುಂಗುತ್ತದೆ

ಎಐ ಬಳಸಿಕೊಂಡು ತೀರ್ಪು ನೀಡಿದ್ದ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಹಾಗೂ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿ (ಎನ್‌ಸಿಎಲ್‌ಎಟಿ) ಆದೇಶ ರದ್ದುಗೊಳಿಸಿದ ನ್ಯಾ.ಪಿ.ಎಸ್.ನರಸಿಂಹ ಅವರಿದ್ದ ಪೀಠ, ''ಕೋರ್ಟ್‌ಗಳು ಪರಿಶೀಲನೆ ಇಲ್ಲದೇ ಎಐ ಆಧಾರಿತ ಪೂರ್ವನಿದರ್ಶನಗಳನ್ನು ಉಲ್ಲೇಖಿಸುವುದು ಅಥವಾ ಬಳಸುವುದನ್ನು ನಿಗ್ರಹಿಸಬೇಕು. ಎಐ ಆಧಾರಿತ ವಿಷಯದಲ್ಲಿ ನ್ಯಾಯಾಲಯಗಳು ಶೂನ್ಯ ಸಹಿಷ್ಣುತೆಯ ವಿಧಾನ ಅಳವಡಿಸಿಕೊಳ್ಳಬೇಕು,'' ಎಂದು ಸಲಹೆ ನೀಡಿದೆ. ನ್ಯಾಯಾಂಗ ಪ್ರಕ್ರಿಯೆಯಲ್ಲಿ ಎಐ ಆಧಾರಿತ ವಿಷಯಗಳನ್ನು ಕಾನೂನು ನಿದರ್ಶನ ಎಂಬಂತೆ ನಕಲಿ ಅಥವಾ ಕಲ್ಪಿತ ದಾಖಲೆ ಸಲ್ಲಿಸುವ ವಿಷಯದ ಬಗ್ಗೆ ಸಮಗ್ರ ಚರ್ಚೆ ನಡೆಸಲು ಸಮಿತಿ ರಚಿಸುವಂತೆ ಬಾರ್ ಕೌನ್ಸಿಲ್‌ಗೆ ನಿರ್ದೇಶನ ನೀಡಿದ ನ್ಯಾಯಪೀಠ, ''ಎಐ ಆಧಾರಿತ ನಕಲಿ ದಾಖಲೆ ಸಲ್ಲಿಕೆ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಇಂತಹ ಪ್ರವೃತ್ತಿ ತಡೆಗಟ್ಟಲು ತ್ವರಿತಗತಿಯಲ್ಲಿ ಮಾರ್ಗದರ್ಶಿ ತತ್ವ ರೂಪಿಸಬೇಕು. ನಿಯಮಗಳನ್ನು ಉಲ್ಲಂಘನೆ ಕಂಡು ಬಂದಲ್ಲಿ ಶಿಸ್ತು ಕ್ರಮ ಜರುಗಿಸಬೇಕು,'' ಎಂದು ಸೂಚನೆ ನೀಡಿದೆ.

ಸೋನಮ್ ವಾಂಗ್ಚುಕ್ ಆರೋಗ್ಯ ಕ್ಷೀಣ

ಹೊಸದಿಲ್ಲಿ: ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ, ಸಿಬಿಎಸ್‌ಇ ಹೊಸ ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ 'ಆನ್‌ಸ್ಕ್ರೀನ್ ಮಾರ್ಕಿಂಗ್ ಸಿಸ್ಟಮ್' ಎಡವಟ್ಟಿನ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ದಿಲ್ಲಿಯಲ್ಲಿ ನಡೆಸುತ್ತಿರುವ ಪ್ರತಿಭಟನೆ ಗುರುವಾರ 13ನೇ ದಿನಕ್ಕೆ ಕಾಲಿಟ್ಟಿದೆ.

ಕಾಕ್ರೋಚ್ ಪಕ್ಷದ ಜತೆಗೂಡಿ 5 ದಿನಗಳಿಂದ ಉಪವಾಸ ಸತ್ಯಾಗ್ರಹ

ಸಿಜೆಪಿ ಹೋರಾಟಕ್ಕೆ ಬೆಂಬಲ ಸೂಚಿಸಿ ಇಲ್ಲಿನ ಜಂತರ್ ಮಂತರ್‌ನಲ್ಲಿ ಪರಿಸರ ಕಾರ್ಯಕರ್ತ ಸೋನಮ್ ವಾಂಗ್ಚುಕ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಗುರುವಾರ 5ನೇ ದಿನಕ್ಕೆ ಕಾಲಿರಿಸಿದೆ. ಅವರ ಆರೋಗ್ಯ ಸ್ಥಿತಿ ಹದಗೆಡುತ್ತಿದೆ. ''ಸೋನಮ್ ವಾಂಗ್ಚುಕ್ ಅವರ ಆರೋಗ್ಯ ಸ್ಥಿತಿ ಕ್ಷೀಣಿಸುತ್ತಿದೆ. ಅವರ ರಕ್ತದ ಸಕ್ಕರೆ ಮಟ್ಟ (ಬ್ಲಡ್ ಶುಗರ್ ಲೆವೆಲ್) 60ಕ್ಕೆ ಕುಸಿದಿದೆ. ರಕ್ತದೊತ್ತಡವೂ ಇಳಿಕೆಯಾಗಿದೆ. ಅವರ ಜೀವಕ್ಕೆ ಏನಾದರೂ ಅಪಾಯ ಸಂಭವಿಸಿದರೆ ಸರಕಾರವೇ ಹೊಣೆಯಾಗಬೇಕಾಗುತ್ತದೆ,'' ಎಂದು ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ 'ಎಕ್ಸ್'ನಲ್ಲಿ ಎಚ್ಚರಿಸಿದ್ದಾರೆ. ಸಚಿವ ಪ್ರಧಾನ್ ರಾಜೀನಾಮೆ ನೀಡುವವರೆಗೂ ನಮ್ಮ ಹೋರಾಟ ನಿಲ್ಲದು ಎಂದು ಪುನರುಚ್ಚರಿಸಿದ್ದಾರೆ. ಈ ಮಧ್ಯೆ, ಪ್ರತಿಭಟನೆ ಮುಂದುವರಿಸುವ ಕುರಿತು 'ಜಿರಳೆಗಳೊಂದಿಗೆ ಚಾಯ್ ಪೇ ಚರ್ಚಾ' ಅಭಿಯಾನ ಪ್ರಾರಂಭಿಸಿದ್ದಾರೆ.

ಪಾಕ್ ಪ್ರೇರಿತ ನಾಲ್ವರು ಉಗ್ರರ ಬಂಧನ

ಹೊಸದಿಲ್ಲಿ: ನಗರದಲ್ಲಿ ಭಾರಿ ಪ್ರಮಾಣದ ಭಯೋತ್ಪಾದನಾ ದಾಳಿ ನಡೆಸಲು ಸಂಚು ರೂಪಿಸುತ್ತಿದ್ದ ನಾಲ್ವರು ಶಂಕಿತ ಉಗ್ರರನ್ನು ಪೊಲೀಸರ ವಿಶೇಷ ದಳ (ಸ್ಪೆಷಲ್ ಸೆಲ್) ಬಂಧಿಸಿದೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಪ್ರೇರಿತ ಹ್ಯಾಂಡ್ಲರ್ ಶಹಜಾದ್ ಭಟ್ಟಿ ಎಂಬಾತನ ಸೂಚನೆಯ ಮೇರೆಗೆ ಈ ತಂಡ ದಿಲ್ಲಿಯಲ್ಲಿ ವಿಧ್ವಂಸಕ ಕೃತ್ಯ ಎಸಗಲು ಹೊಂಚು ಹಾಕಿತ್ತು ಎಂಬ ವಿಷಯ ತನಿಖೆಯಿಂದ ಬೆಳಕಿಗೆ ಬಂದಿದೆ. ಬಂಧಿತರಲ್ಲಿ ಮೂವರು ಪಂಜಾಬ್ ಮೂಲದವರಾಗಿದ್ದರೆ, ಮತ್ತೊಬ್ಬನನ್ನು ದಿಲ್ಲಿಯಲ್ಲಿ ಸೆರೆಹಿಡಿಯಲಾಗಿದೆ. ಬಂಧಿತ ಆರೋಪಿಗಳನ್ನು ಶುಭದೀಪ್ ಸಿಂಗ್ (23), ಗುರ್ಜಾಂತ್ ಸಿಂಗ್ (22), ಸಜ್ಜನ್ ಸಿಂಗ್ (28) ಮತ್ತು ಗಗನ್ ಪ್ರೀತ್ (24) ಎಂದು ಗುರುತಿಸಲಾಗಿದೆ. ಬಂಧಿತರಿಂದ ವಿದೇಶಿ ನಿರ್ಮಿತ ಎರಡು ಪಿಸ್ತೂಲ್‌ಗಳು, ಒಂಬತ್ತು ಸಜೀವ ಗುಂಡುಗಳು ಹಾಗೂ ಐದು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಐಎಸ್‌ಐ ಜತೆಗೆ ನಿಕಟ ಸಂಪರ್ಕ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತಿ ವಿಜಯಪುರ
ತಾಲೂಕ ಪಂಚಾಯತ ಕಾರ್ಯಾಲಯ ದೇವರ ಹಿಪ್ಪರಗಿ
ದೂರವಾಣಿ ಸಂಖ್ಯೆ: 08424-200114, E-mail: eotpdhp@gmail.com,
ಸಂಖ್ಯೆ:ತಾಪಂ/ಆಡಳಿತ/ಕ.ನಿ.ಅ/ನಾ.ವಾ.ಬ/ಟೆಂಡರ್/2026-27 ದಿನಾಂಕ:01.07.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (Notice Inviting Tender Through E-Procurement)

2026-2027 ನೇ ಸಾಲಿನ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ದೇವರ ಹಿಪ್ಪರಗಿ ರವರಿಗೆ ತಾ.ಪಂ. ಕಚೇರಿ ನಿರ್ವಹಣಾ ಅನುದಾನದಲ್ಲಿ ಬಾಡಿಗೆ ಆಧಾರದ ಮೇಲೆ ವಾಹನ ಮತ್ತು ಹೊರಮೂಲ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರಸಂ	ವಿವರ	ದಿನಾಂಕ ಮತ್ತು ಸಮಯ
1	ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಅರ್ಜಿ ಸ್ವೀಕರಿಸುವ ದಿನಾಂಕ	RDPR/2026-27/SE3961CALL-2 ವೆಬ್‌ಸೈಟ್:www.https://kppp.karnataka.gov.in ಅರ್ಜಿ ಸ್ವೀಕರಿಸುವ ದಿನಾಂಕ: 01.07.2026
2	ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ	08.07.2026 ಸಮಯ ಸಂಜೆ 5.30 ಗಂಟೆ
3	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸ್ಥಳ	10.07.2026 ಸಮಯ ಮುಂಜಾನೆ 11.00 ಗಂಟೆ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ದೇವಹ ಹಿಪ್ಪರಗಿ ಅವರ ಕಚೇರಿಯಲ್ಲಿ ಅಥವಾ ಅವರ ನಿರ್ದೇಶನದ ಮೇರೆಗೆ ಮುಂದೂಡಬಹುದಾಗಿದೆ.
4	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸ್ಥಳ	10.07.2026 ಸಮಯ ಮುಂಜಾನೆ 11.00 ಗಂಟೆ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ದೇವರ ಹಿಪ್ಪರಗಿ ಅವರ ಕಚೇರಿಯಲ್ಲಿ.

ಟೆಂಡರ್ ಫಾರಂ, ಟೆಂಡರ್ ದಾಸ್ತಾವೇಜು (ಟೆಂಡರ್ ಡಾಕ್ಯುಮೆಂಟ್) ಹಾಗೂ ಇನ್ನೂ ಹೆಚ್ಚಿನ ಮಾಹಿತಿಗಾಗಿ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ದೇವರ ಹಿಪ್ಪರಗಿ ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 08424-200114 ಹೆಚ್ಚಿನ ಮಾಹಿತಿಗಾಗಿ ಈ ವೆಬ್‌ಸೈಟ್ : www.https://kppp.karnataka.gov.in ಲ್ಲಿ ಪರಿಶೀಲಿಸುವುದು

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲೂಕ ಪಂಚಾಯತ, ದೇವರ ಹಿಪ್ಪರಗಿ
ವಾಸಾಸಂಇ/ವಿಜಯಪುರ/185/ಕೆಎಸ್‌ಎಂಸಿಎ/2026-27

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi,
Bangalore - 560 072. India

Applications are invited from interested reputable Car Hiring Agencies / Companies for Empanelment to render vehicles on rate contract for a period of one year from July 21, 2026. The Technical and Commercial Bid Formats may be downloaded from ISEC **website: www.isec.ac.in.** The Technical Bid and the Financial Bid needs to be submitted in SEPARATE COVERS. The Tender Document, duly filled and signed on all pages may be submitted in sealed cover on or before **July 16, 2026 to The Registrar, Institute for Social and Economic Change, Dr. V.K.R.V. Rao Road, Nagarabhavi P.O. Bengaluru – 560 072,** OR dropped in Tender Box in the Office of the Registrar. Any tenders received after this date shall not be entertained. Selection / Cancellation will be at the sole discretion of ISEC authority. The Tenders shall be opened on **July 17, 2026 at 3.30 p.m.** in the Institute Premises.

DIPR/CP/1447/Shirdi Sai/2026-27 Sd/- REGISTRAR

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಕೆಇಡಿಸಿ/2026-27/2219 ದಿನಾಂಕ: 02-07-2026

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು-ಕರ್ನಾಟಕ ವಿದ್ಯುಚ್ಛಕ್ತಿ ವಿತರಣಾ ಸಂಹಿತೆ (ಒಂದನೇ ತಿದ್ದುಪಡಿ) 2026.
ಉಲ್ಲೇಖ: ಕವಿನಿಆ/ಕೆಇಡಿಸಿ/2026-27/2080, ದಿನಾಂಕ: 04.06.2026.
ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 11-06-2026ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ https://kerc.karnataka.gov.in ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.
ಆಯೋಗವು **ದಿನಾಂಕ: 14-07-2026ರಂದು ಮಧ್ಯಾಹ್ನ 2.30ಕ್ಕೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ** ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/- ಕಾರ್ಯದರ್ಶಿ
DIPR/CP/YC/1436/2026-27 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ದೊಡ್ಡತೋಗೂರು
ದೂ.ಸಂ: 080-22111177
ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560 100
e-Mail:ka.doddathoguru.tp@gmail.com | Web: www.doddathoguru.mrc.gov.in
ಸಂ.ದೊಪಪಂ/ತಾ.ಶಾ/ಟೆ.ಪ್ರ/09/2026-27 ದಿನಾಂಕ: 02.07.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ದೊಡ್ಡತೋಗೂರು ಮತ್ತು ಬೆಟ್ಟದಾಸನಪುರ ಪ್ರದೇಶದ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಪಟ್ಟಣ ಪಂಚಾಯಿತಿಯ ಸ್ವಂತ ನಿಧಿಯಡಿಯ ಈ ಕೆಳಕಂಡ ಇಂಡೆಂಟ್ ಸಂಖ್ಯೆಗಳ ಕಾಮಗಾರಿಗಳ ಟೆಂಡರ್ ಆಹ್ವಾನಿಸಲು ಉದ್ದೇಶಿಸಲಾಗಿದ್ದು, ಅದರಂತೆ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸಬಹುದಾಗಿರುತ್ತದೆ.

Sl No	Indent No.
01	DMA/2026-27/OW/WORK_INDENT 60054
02	DMA/2026-27/OW/WORK_INDENT 60065
03	DMA/2026-27/OW/WORK_INDENT 60066
04	DMA/2026-27/OW/WORK_INDENT 60109
05	DMA/2026-27/OW/WORK_INDENT 60110
06	DMA/2026-27/OW/WORK_INDENT 60111
07	DMA/2026-27/OW/WORK_INDENT 60119
08	DMA/2026-27/OW/WORK_INDENT 60120
09	DMA/2026-27/OW/WORK_INDENT 60122
10	DMA/2026-27/OW/WORK_INDENT 60053
11	DMA/2026-27/OW/WORK_INDENT 60051
12	DMA/2026-27/OW/WORK_INDENT 59993
13	DMA/2026-27/OW/WORK_INDENT 60112

1. ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 20.07.2026ರ ಸಂಜೆ 4.00 ಗಂಟೆಯವರೆಗೆ.** 2. ಟೆಂಡರ್‌ನ್ನು ತೆರೆಯುವ **ದಿನಾಂಕ: 22.07.2026ರ ಬೆಳಿಗ್ಗೆ 11.30 ಗಂಟೆ ನಂತರ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. 3. ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿಯ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯ ಬಹುದಾಗಿರುತ್ತದೆ. 4. ದೂರವಾಣಿ ಸಂಖ್ಯೆ: 080-22111177. ಇ-ಮೇಲ್: ka.doddathoguru.tp@gmail.com

ಸಹಿ/- ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.
ಸಹಿ/- ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ದೊಡ್ಡತೋಗೂರು.
ವಾಸಾಸಂಇ/ವಾಪ್ರ/ಜಿಎ/1449/2026-27

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152-200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ-1/ಟೆಂಡರ್ ಪ್ರಕಟಣೆ/744/2026-27/ ದಿನಾಂಕ:25.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:07/2026-27/ ದಿನಾಂಕ: 25.06.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ-4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 01 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ಹಾಗೂ ಕನಿಷ್ಠ ಮೊತ್ತ ರೂ. 150.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ: 25.06.2026 ರ ಸಂಜೆ 04:30 ಗಂಟೆಯಿಂದ** ಪಡೆಯಬಹುದು **(Download).** ಪ್ರೀ ಬಿಡ್ ಮೀಟಿಂಗ್ ನಡೆಯುವ **ದಿನಾಂಕ: 01.07.2026 ಪೂರ್ವಾಹ್ನ 11:30 ಗಂಟೆಗೆ** ಸ್ಥಳ: ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ಎನ್.ಹೆಚ್-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ಕೊನೆಯ ದಿನಾಂಕ: 09.07.2026 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.07.2026ರ ಸಂಜೆ 04:31 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:142/ಕೆಎಸ್‌ಎಂಸಿಎ/2026-27

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ.16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು - 560 052. ದೂರವಾಣಿ : 080-22268677/78/79
ಫ್ಯಾಕ್ಸ್: 080-22268667 ಇ-ಮೇಲ್: kerc-ka@nic.in
ವೆಬ್‌ಸೈಟ್ : https://kerc.karnataka.gov.in
ಸಂಖ್ಯೆ:ಕವಿನಿಆ/ಎಫ್-32/ವಾ-29/2026-27/2218 ದಿನಾಂಕ:02.07.2026

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಸೌರಶಕ್ತಿ ಯೋಜನೆಗಳಿಗೆ (ವಿವಿಧ ಮೀಟರಿಂಗ್ ವ್ಯವಸ್ಥೆ ಹೊಂದಿರುವ ವಿತರಣಾ ಸೌರ ಫೋಟೊವೋಲ್ಟಾಯಿಕ್ (DSPV) ಸ್ಥಾವರಗಳನ್ನು ಒಳಗೊಂಡಂತೆ) ಜುಲೈ 1, 2026 ರಿಂದ ಜೂನ್ 30, 2029ರವರೆಗಿನ ಅವಧಿಗೆ ದರ ಮತ್ತು ಮಾನದಂಡಗಳ ನಿಗದಿಪಡಿಸುವ ಚರ್ಚಾಪತ್ರ ಕುರಿತು, ಸಾರ್ವಜನಿಕ ವಿಚಾರಣೆ ಬಗ್ಗೆ.
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಚರ್ಚಾಪತ್ರ ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ಯಲ್ಲಿ ಲಭ್ಯವಿರುತ್ತದೆ.
ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು ಮಂಗಳವಾರ ದಿನಾಂಕ: **14.07.2026ರಂದು ಮಧ್ಯಾಹ್ನ 3.00 ಗಂಟೆಗೆ, ಆಯೋಗದ ಕೋರ್ಟ್‌ಹಾಲ್‌ನ ಒಂದನೆಯ ಮಹಡಿ, ನಂ.16ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ. ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.
ವಾಸಾಸಂಇ/ಉನಿ-ಸಿ.ಪಿ/1444/ಕೆಎಸ್‌ಎಂಸಿಎ/2026-27 ಸಹಿ/- ಕಾರ್ಯದರ್ಶಿ, ಕ.ವಿ.ನಿ.ಆ.

ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ
(An Autonomous Institute, Government of Karnataka)
Reg. No. SOR/BLU/DR/671/09-10 dated: 23-09-2009
(Super speciality Referral Hospital & Post Graduate Institute)
ಸಂಖ್ಯೆ: ಎಸ್‌ಡಿಎಸ್/ಟಿಎನ್‌ಡಿ/12/2026-27 ದಿನಾಂಕ : 02-07-2026

ಟೆಂಡರ್ ಪ್ರಕಟಣೆ

ಈ ಸಂಸ್ಥೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳಾದ 1. Portable NIV/BIPAP Machine With Humidifier 2. HD Camera System 3. Rigid Bronchoscope 4. Basic Anesthesia Ventilator with Multi Para Monitor for Pulmonary Medicine 5. Integrated Advance Electro Surgical Unit with Ultrasonic Energy System 6. Standalone Portable ETCO2 Monitor 7. Multipara / Patient Monitor with ETCO2 8. OT Table (Electro hydraulic) 9. Defibrillator with External Paddles 10. Spiro Meter 11. Autoclave Machine 12. Table Top Portable Autoclave Machine 13. Defibrillator with Internal and External Paddles 14. High End Anesthesia Ventilator With ETCO2 Gas Modules and Multi Para Monitor ನ್ನು ಅರ್ಹ ಸಂಸ್ಥೆಗಳ ಮುಖಾಂತರ ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಿಗೆ ಭಾಗವಹಿಸಲು ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಾಗುವ ದಿನಾಂಕ **04-07-2026.** ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ವೀಕ್ಷಿಸಬಹುದು.

ಸಹಿ/- ನಿರ್ದೇಶಕರು
ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ
ಬೆಂಗಳೂರು-560029
ವಾಸಾಸಂಇ/ವಾ.ಪ್ರ/1451/ಶ್ರೇಷ್ಠ/2026-27

ರಾಷ್ಟ್ರೀಯ ಐಸ್ ಸ್ಕೇಟಿಂಗ್: ಡ್ಯಾಶಿಯಲ್‌ಗೆ 4 ಪದಕ

ಮಂಗಳೂರು: ಭಾರತೀಯ ಐಸ್ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಡೆಹ್ರಾಡೂನ್‌ನಲ್ಲಿ ನಡೆದ 21ನೇ ರಾಷ್ಟ್ರೀಯ ಐಸ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳೂರಿನ ಡ್ಯಾಶಿಯಲ್ ಕಾನ್ಸೆಸ್ಸೊ ವಿಶಿಷ್ಟ ಸಾಧನೆ ಮೆರೆದಿದ್ದಾರೆ. ಹಿರಿಯರ ವಿಭಾಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಡ್ಯಾಶಿಯಲ್ ಮಿಶ್ರ ರಿಲೇ ವಿಭಾಗದಲ್ಲಿ 1 ಚಿನ್ನ, 500 ಮೀ., 1,000 ಮೀ. ಮತ್ತು 1,500 ಮೀ.ನಲ್ಲಿ 3 ಬೆಳ್ಳಿ ಪದಕಗಳನ್ನು ಪಡೆದಿದ್ದಾರೆ. ಪ್ರಸ್ತುತ ಮಂಗಳೂರಿನ ಎಸ್‌ಡಿಎಂ ಸಂಸ್ಥೆಯಲ್ಲಿ ಪದವಿ ವ್ಯಾಸಂಗ ಪಡೆಯುತ್ತಿರುವ ಡ್ಯಾಶಿಯಲ್ ಮಂಗಳೂರಿನ ದೇರೆಬೈಲ್ ನಿವಾಸಿ ಫ್ರಾನ್ಸಿಸ್ ಮತ್ತು ಡೋರಿಸ್ ಕಾನ್ಸೆಸ್ಸೊ ಅವರ ಪುತ್ರಿ.

2 ಟೆಸ್ಟ್‌ಗಾಗಿ ಆಗಸ್ಟ್‌ನಲ್ಲಿ ಭಾರತ ಶ್ರೀಲಂಕಾ ಪ್ರವಾಸ

ಕೊಲಂಬೊ: ಆಗಸ್ಟ್ 15ರಿಂದ 27ರವರೆಗೆ ಕ್ರಮವಾಗಿ ಗಾಲೆ ಮತ್ತು ಕೊಲಂಬೊದಲ್ಲಿ ನಡೆಯಲಿರುವ ಆತಿಥೇಯ ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳಿಗಾಗಿ ಭಾರತವು ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದೆ ಎಂದು ಎಸ್‌ಎಲ್‌ಸಿ ಗುರುವಾರ ಘೋಷಿಸಿದೆ.

ಇದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಸರಣಿಯ ಭಾಗವಾಗಿದೆ. ಮೊದಲ ಟೆಸ್ಟ್ ಆ.15ರಿಂದ ಆರಂಭವಾದರೆ, ದ್ವಿತೀಯ ಟೆಸ್ಟ್ ಆ.23ರಂದು ಶುರುವಾಗಲಿದೆ ಎಂದು ಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ. ಡಬ್ಲ್ಯುಟಿಸಿಯಲ್ಲಿ ಎರಡು ಬಾರಿ ಫೈನಲ್ ತಲುಪಿಯೂ ಪ್ರಶಸ್ತಿ ಗೆಲ್ಲಲು ವಿಫಲವಾಗಿರುವ ಭಾರತ, ಸದ್ಯ ಅಂಕಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದೆ. ಲಂಕಾ 6ನೇ ಸ್ಥಾನ ಹೊಂದಿದೆ.

2ನೇ ಸುತ್ತಿಗೆ ಆಕರ್ಷಿ, ತಾನ್ಯ

ಮರ್ಖಾಮ್ (ಕೆನಡಾ): ಫಿಟ್ನೆಸ್ ಸಮಸ್ಯೆ ಎದುರಿಸಿದ ಕಿಡಂಬಿ ಶ್ರೀಕಾಂತ್ ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಆರಂಭಿಕ ಸುತ್ತಿನ ಅರ್ಧದಲ್ಲೇ ನಿರ್ಗಮಿಸಿದರು. ಆದರೆ ತಾನ್ಯಾ ಹೇಮಂತ್ ಮತ್ತು ಆಕರ್ಷಿ ಕಶ್ಯಪ್ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಎರಡನೇ ಸುತ್ತಿಗೆ ಪ್ರಗತಿ ಸಾಧಿಸಿದರು.

ಕಳೆದ ಭಾನುವಾರವಷ್ಟೇ ಯುಎಸ್ ಓಪನ್ ಸೂಪರ್ 300 ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ 33 ವರ್ಷದ ಶ್ರೀಕಾಂತ್, ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 10-11ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ ಮಲೇಷ್ಯಾದ ಲೀ ಜಿ ಜಿಯಾ ಎದುರು ಹಿನ್ನಡೆಯಲ್ಲಿದ್ದಾಗ ಫಿಟ್ನೆಸ್ ಸಮಸ್ಯೆ ಎದುರಿಸಿದರು. ಚೇತರಿಸಿಕೊಳ್ಳಲಾಗದ ಕಾರಣ ಅಂತಿಮವಾಗಿ ಪಂದ್ಯದಿಂದ ಹಿಂದೆ ಸರಿದರು.

ಫ್ರಾನ್ಸ್‌ನ ಅನಾ ಟಟ್ರಾನೋವಾ ಎದುರು 21-14, 21-12ರ ನೇರ ಗೇಮ್‌ಗಳಿಂದ ಗೆದ್ದ ಆಕರ್ಷಿ, ಅಮೆರಿಕದ ಬೀವೆನ್ ಝಾಂಗ್ ಎದುರಿನ ಪಂದ್ಯಕ್ಕೆ ವೇದಿಕೆ ಸಜ್ಜುಗೊಳಿಸಿಕೊಂಡರು. ಈ ಮಧ್ಯೆ, ತಾನ್ಯ ಕೂಡ 21-16, 21-18 ಗೇಮ್‌ಗಳಿಂದ ಅಮೆರಿಕದ ದಿಶಾ ಗುಪ್ತಾ ಎದುರು ಜಯ ಗಳಿಸಿದರು.

ಭಾರತ-ಇಂಗ್ಲೆಂಡ್ ಪಂದ್ಯ ರದ್ದು

ಚೆಸ್ಟರ್ ಲೀ ಸ್ಟ್ರೀಟ್: ಭಾರತ ಮತ್ತು ಇಂಗ್ಲೆಂಡ್ ನಡುವಿನ ಐದು ಪಂದ್ಯಗಳ ಸರಣಿಯ ಮೊದಲ ಟಿ20 ಪಂದ್ಯ ಮಳೆಯಿಂದಾಗಿ ರದ್ದುಗೊಂಡಿತು. ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ, 20 ಓವರ್‌ಗಳಲ್ಲಿ 7 ವಿಕೆಟ್‌ಗೆ 189 ರನ್ ಕಲೆಹಾಕಿತು. ಅಭಿಷೇಕ್ ಶರ್ಮ(59), ಶ್ರೇಯಸ್ ಅಯ್ಯರ್(68) ಅರ್ಧ ಶತಕ ಗಳಿಸಿದರು. ಆದರೆ ಇಂಗ್ಲೆಂಡ್ ಇನಿಂಗ್ಸ್‌ಗೆ ಮಳೆ ಅಡ್ಡಿಪಡಿಸಿತು. ಹೀಗಾಗಿ ಪಂದ್ಯವನ್ನು ರದ್ದುಗೊಳಿಸಲಾಯಿತು. ಇತ್ತಂಡಗಳ 2ನೇ ಪಂದ್ಯ ಜುಲೈ. 4ರಂದು ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿದೆ.

ಹೆಚ್ಚುವರಿ ಸಮಯದಲ್ಲಿ ಗೋಲ್ ಗಳಿಸಿ ಮಿಂಚಿದ ಯೂರಿ ಟೈಲೆಮಾನ್ಸ್

ಸೆನೆಗಲ್‌ಗೆ ಬೆಲ್ಜಿಯಂ ಪೆನಾಲ್ಟಿ ಕಿಕ್

ಸಿಯಾಟೆಲ್: ಎರಡು ಗೋಲ್‌ಗಳ ಕೊರತೆಯ ಹೊರತಾಗಿಯೂ ಚೇತೋಹಾರಿ ಪ್ರದರ್ಶನ ನೀಡಿದ ಬೆಲ್ಜಿಯಂ ತಂಡ, ಪಂದ್ಯದ ಹೆಚ್ಚುವರಿ ಸಮಯದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಿಂದ ಸೆನೆಗಲ್ ತಂಡವನ್ನು 3-2 ಗೋಲ್‌ಗಳ ಅಂತರದಿಂದ ಬಗ್ಗುಬಡಿಯಿತು. ಈ ಗೆಲುವಿನೊಂದಿಗೆ ಬೆಲ್ಜಿಯಂ ತಂಡ ಫಿಫಾ ವಿಶ್ವಕಪ್‌ನಲ್ಲಿ ಅಂತಿಮ 16ರ ಘಟ್ಟಕ್ಕೆ ಲಗ್ಗೆ ಹಾಕಿತು.

ಸಿಯಾಟೆಲ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ 32ನೇ ಸುತ್ತಿನ ನಾಕೌಟ್ ಪಂದ್ಯದಲ್ಲಿ ಹಬೀಬ್(24ನೇ ನಿಮಿಷ) ಇಸ್ಮಾಯಿಲ್(51ನೇ ನಿ.) ಅವರ ಸಾಹಸದಿಂದ ಸೆನೆಗಲ್ 2-0 ಅಂತರದಲ್ಲಿ ಮುನ್ನಡೆ ಸಾಧಿಸಿತ್ತು. ಆದರೆ ರೊಮೆಲು ಲುಕಾಕು (86ನೇ ನಿ.) ಮತ್ತು ಯೂರಿ ಟೈಲೆಮಾನ್ಸ್ (89ನೇ ನಿ.) ಆಕರ್ಷಕ ಎರಡು ಗೋಲ್ ಸಿಡಿಸಿ ಪಂದ್ಯವನ್ನು ಹೆಚ್ಚುವರಿ ಸಮಯಕ್ಕೆ ಕೊಂಡೊಯ್ದರು.

ಸೆನೆಗಲ್‌ನ ರಕ್ಷಣಾ ಆಟಗಾರರು ಮಾಡಿದ ಎಡವಟ್ಟಿನಿಂದ ಬೆಲ್ಜಿಯಂ ತಂಡಕ್ಕೆ 120+5ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಟೈಲೆಮಾನ್ಸ್, ಬೆಲ್ಜಿಯಂ ತಂಡವನ್ನು ಪ್ರಿ ಕ್ವಾರ್ಟರ್ ಫೈನಲ್ಸ್‌ಗೆ ಮುನ್ನಡೆಸುವಲ್ಲಿ ನಿರ್ಣಾಯಕ ಪಾತ್ರವಹಿಸಿದರು. ವಿಶ್ವಕಪ್ ಇತಿಹಾಸದಲ್ಲಿ ಹೆಚ್ಚುವರಿ ಸಮಯದ ಕೊನೆಯಲ್ಲಿ ದಾಖಲಾದ ಅಪರೂಪದ ಗೋಲು ಇದು.

ಪಂದ್ಯದ ಗೆಲುವಿನ ನಂತರ ಪ್ರತಿಕ್ರಿಯಿಸಿದ ಟೈಲೆಮಾನ್ಸ್, ''ಈ ಪುನರಾಗಮನದ ಭಾಗವಾಗಿರುವುದು ಹೆಮ್ಮೆಯ ಕ್ಷಣ. ಏಕೆಂದರೆ ನಾನು ತಂಡಕ್ಕೆ ಗೆಲುವು ತಂದುಕೊಟ್ಟ ಕೊನೆಯ ಎರಡು ಗೋಲುಗಳನ್ನು ಗಳಿಸಿದೆ. ತಂಡವು ಗೋಲು ಗಳಿಸಲು ಮತ್ತು ನಮ್ಮನ್ನು ಗೆಲುವಿನ ಗೆರೆ ದಾಟಿಸಲು ಸಹಾಯ ಮಾಡಲು ಸಾಧ್ಯವಾಗಿದ್ದಕ್ಕೆ ನನಗೆ ತುಂಬಾ ಹೆಮ್ಮೆಯಿದೆ,'' ಎಂದು ಹೇಳಿದರು.

ಕೊನೆಯ 11 ವಿಶ್ವಕಪ್‌ಗಳಲ್ಲಿ ಎರಡನೇ ಬಾರಿ ಬೆಲ್ಜಿಯಂ ತಂಡ ನಾಕೌಟ್ ಪಂದ್ಯವನ್ನು ಎರಡು ಅಥವಾ ಅದಕ್ಕಿಂತ ಹೆಚ್ಚು ಗೋಲ್‌ಗಳಿಂದ ಗೆದ್ದ ಸಾಧನೆ ಮಾಡಿತು. ಬೆಲ್ಜಿಯಂ ತಂಡ 2018ರ ಅಂತಿಮ 16ರ ಘಟ್ಟದಲ್ಲಿ 3-2 ಗೋಲ್‌ಗಳಿಂದ ಜಪಾನ್ ತಂಡವನ್ನು ಮಣಿಸಿತ್ತು. ''ಸೆನೆಗಲ್ ಗೆಲುವಿಗೆ ಅರ್ಹವಾಗಿತ್ತು. ಆದರೆ, ಅದೃಷ್ಟವಶಾತ್ ನಮಗೆ ಸಂತಸ ಲಭಿಸಿತು,'' ಎಂದು ಬೆಲ್ಜಿಯಂ ತಡದ ಕೋಚ್ ರುಡಿ ಗಾರ್ಸಿಯಾ ಪಂದ್ಯದ ನಂತರ ಎದುರಾಳಿ ತಂಡದ ಹೋರಾಟವನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಬೆಲ್ಜಿಯಂ ಪರ ಲುಕಾಕು ಗೋಲ್ ಗಳಿಸಿದ 3 ನಿಮಿಷಗಳ ಅಂತರದಲ್ಲಿ ಕಾಲ್ಚಳಕ ತೋರಿದ ಯೂರಿ ತಂಡದ ಸಮಬಲದ ಹೋರಾಟಕ್ಕೆ ಸಾಕ್ಷಿಯಾದರು. ನಾಲ್ಕು ಟೂರ್ನಿಗಳಲ್ಲಿ ಮೂರನೇ ಬಾರಿ ಅಂತಿಮ 16ರ ಘಟ್ಟ ತಲುಪಿದ ಬೆಲ್ಜಿಯಂ, ಪ್ರಶಸ್ತಿ ಫೇವರಿಟ್‌ಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. 2014ರಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದ ಬೆಲ್ಜಿಯಂ, 2018ರಲ್ಲಿ ಉಪಾಂತ್ಯ ಪ್ರವೇಶಿಸಿತ್ತು.

ನಾಕೌಟ್ ಪಂದ್ಯಗಳು

ಅರ್ಜೆಂಟೀನಾ vs ಕೇಪ್ ವರ್ಡೆ
ಪಂದ್ಯ ಆರಂಭ: ಮುಂಜಾನೆ 3:30 (ಶನಿವಾರ)
ಸ್ಥಳ: ಮಯಾಮಿ

ಕೊಲಂಬಿಯಾ vs ಘಾನಾ
ಪಂದ್ಯ ಆರಂಭ: ಬೆಳಗ್ಗೆ 7.00 (ಶನಿವಾರ)
ಸ್ಥಳ: ಕೆನ್ಸಾಸ್ ಸಿಟಿ

ಕೆನಡಾ vs ಮೊರಾಕ್ಕೊ
ಪಂದ್ಯ ಆರಂಭ: ರಾತ್ರಿ 10:30 (ಶನಿವಾರ)
ಸ್ಥಳ: ಹ್ಯೂಸ್ಟನ್

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಬೋಸ್ನಿಯಾ ಹೊರಗಟ್ಟಿದ ಯುಎಸ್ 16ರ ಘಟ್ಟಕ್ಕೆ

ಸ್ಯಾನ್ ಫ್ರಾನ್ಸಿಸ್ಕೊ: ಹತ್ತು ಆಟಗಾರರ ಅಮೆರಿಕ ತಂಡವು 2-0 ಗೋಲ್‌ಗಳ ಅಂತರದಿಂದ ಬೋಸ್ನಿಯಾ ಹರ್ಜೆಗೊವಿನಾ ತಂಡವನ್ನು ಮಣಿಸಿ ಫಿಫಾ ವಿಶ್ವಕಪ್‌ನಲ್ಲಿ ಅಂತಿಮ 16ರ ಘಟ್ಟಕ್ಕೆ ಲಗ್ಗೆ ಹಾಕಿದೆ. ಇದರೊಂದಿಗೆ ಆತಿಥ್ಯ ವಹಿಸಿರುವ ಎಲ್ಲ ಮೂರು ರಾಷ್ಟ್ರಗಳು ಪ್ರಿಕ್ವಾರ್ಟರ್‌ಫೈನಲ್ಸ್ ಮುನ್ನಡೆದಂತಾಗಿದೆ. ಈಗಾಗಲೇ ಮೆಕ್ಸಿಕೊ ಮತ್ತು ಕೆನಡಾ ತಂಡಗಳು ಈ ಸಾಧನೆ ಮಾಡಿವೆ.

ಗುರುವಾರ ಬೆಳಗ್ಗಿನ ಜಾವ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಫೋಲಾರಿನ್ ಬಾಲೋಗುನ್ (45ನೇ ನಿ.) ಮತ್ತು ಮಲಿಕ್ ಟಿಲ್ಮನ್ (82ನೇ ನಿ.)ತಲಾ ಒಂದು ಗೋಲ್ ಬಾರಿಸಿ ಜಯದ ರೂವಾರಿಯೆನಿಸಿದರು. ಪ್ರಥಮಾರ್ಧದ ಕೊನೆಯಲ್ಲಿ ಗೋಲಿನ ಫೋಲಾರಿನ್ ಅವರಿಂದ ಖಾತೆ ತೆರೆದ ಅಮೆರಿಕ, ದ್ವಿತೀಯಾರ್ಧದಲ್ಲೂ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿತು. ಈ ವೇಳೆ ಪ್ರಮಾದಗಳನ್ನು ಮಾಡಿದ ಫೋಲಾರಿನ್ 64ನೇ ನಿಮಿಷದಲ್ಲಿ ರೆಡ್‌ಕಾರ್ಡ್‌ಗೆ ಗುರಿಯಾದರು. ಹೀಗಾಗಿ ಹತ್ತು ಆಟಗಾರರೇ ಅಮೆರಿಕ ತಂಡವನ್ನು ಗೆಲುವಿನ ದಡ ಸೇರಿಸಿದರು.

ಹ್ಯಾರಿ ಕೇನ್ ಕಾಲ್ಚಳಕ, 16ರ ಹಂತಕ್ಕೆ ಇಂಗ್ಲೆಂಡ್

ಅಟ್ಲಾಂಟಾ: ಸ್ಟಾರ್ ಆಟಗಾರ ಹ್ಯಾರಿ ಕೇನ್ ಗಳಿಸಿದ ಜೋಡಿ ಗೋಲ್‌ಗಳ ಸಾಹಸದಿಂದ ಇಂಗ್ಲೆಂಡ್ ತಂಡ 2-1 ಗೋಲ್‌ಗಳಿಂದ ಕಾಂಗೊ ತಂಡವನ್ನು ಮಣಿಸಿ ಪ್ರಿ ಕ್ವಾರ್ಟರ್‌ಫೈನಲ್ಸ್ ಪ್ರವೇಶಿಸಿದೆ. ಇಂಗ್ಲೆಂಡ್ ಸೆಮಿಫೈನಲ್ಸ್ ಪ್ರವೇಶಕ್ಕಾಗಿ ಜುಲೈ 6ರಂದು ಸಹ ಆತಿಥೇಯ ಮೆಕ್ಸಿಕೊ ತಂಡದ ಕಠಿಣ ಸವಾಲು ಎದುರಿಸಲಿದೆ.

ಹ್ಯಾರಿ ಕೇನ್

ಬುಧವಾರ ರಾತ್ರಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಹ್ಯಾರಿಕೇನ್ ಎರಡು ಗೋಲ್ ಗಳಿಸಿದ ಪರಿಣಾಮ ಇಂಗ್ಲೆಂಡ್ 48 ತಂಡಗಳ ವಿಶ್ವಕಪ್‌ನ ಎರಡನೇ ಹಂತದ ಆರಂಭದಲ್ಲೇ ಹೊರಬೀಳುವುದರಿಂದ ಪಾರಾಯಿತು. ಪಂದ್ಯ ಆರಂಭವಾಗುತ್ತಿದ್ದಂತೆಯೇ ಬ್ರಿಯಾನ್ 7ನೇ ನಿಮಿಷದಲ್ಲಿ ಗೋಲ್ ಗಳಿಸಿ ಕಾಂಗೊಗೆ ಮುನ್ನಡೆ ಕಲ್ಪಿಸಿದರು. ಹಿನ್ನಡೆಯೊಂದಿಗೆ ವಿರಾಮ ಪಡೆದ ಇಂಗ್ಲೆಂಡ್, ದ್ವಿತೀಯಾರ್ಧದ 75 ಮತ್ತು 86ನೇ ನಿಮಿಷದಲ್ಲಿ ಕೇನ್ ಎರಡು ಗೋಲ್ ಗಳಿಸಿ ಗೆಲುವಿನ ರೂವಾರಿಯೆನಿಸಿದರು.

1996ರ ಫೈನಲ್‌ನಲ್ಲಿ ಪಶ್ಚಿಮ ಜರ್ಮನಿ ವಿರುದ್ಧ 1-0 ಹಿನ್ನಡೆಯ ನಂತರ ಗೆದ್ದು ಬೀಗಿದ್ದ ಬಳಿಕ ಇಂಗ್ಲೆಂಡ್ ಇದೇ ಮೊದಲ ಸಲ 1-0 ಹಿನ್ನಡೆ ಅನುಭವಿಸಿ ಕಾಂಗೊ ವಿರುದ್ಧ ಗೆಲುವಿನ ನಗಾರಿ ಬಾರಿಸಿತು.

3ನೇ ಸುತ್ತಿಗೆ ಜೊಕೊವಿಕ್

ಲಂಡನ್: ಮಾಜಿ ನಂ.1 ಆಟಗಾರ ನೊವಾಕ್ ಜೊಕೊವಿಕ್ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ಸುತ್ತು ಪ್ರವೇಶಿಸಿದ್ದಾರೆ. ಇದರೊಂದಿಗೆ 25ನೇ ಗ್ರ್ಯಾನ್ ಸ್ಲಾಮ್ ಟ್ರೋಫಿ ಗೆಲ್ಲುವ ಹಾದಿಯಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ.

ಪುರುಷರ ಸಿಂಗಲ್ಸ್‌ನ 2ನೇ ಸುತ್ತಿನಲ್ಲಿ ಅವರು 6-3, 6-4, 6-2 ಸೆಟ್‌ಗಳಿಂದ ಶ್ರೇಯಾಂಕ ರಹಿತ ಸಿಸಿಪಾಸ್ ವಿರುದ್ಧ ಜಯ ಗಳಿಸಿದರು. 6ನೇ ಶ್ರೇಯಾಂಕಿತ ಆಟಗಾರ ಟೇಲರ್ ಫ್ರಿಟ್ಜ್ ಸಹ 2ನೇ ಸುತ್ತಿನಲ್ಲಿ ಕಿಪ್ಸನ್ ವಿರುದ್ಧ 6-2, 6-2, 7-5 ಸೆಟ್‌ಗಳಿಂದ ಜಯ ಗಳಿಸಿ ಮುಂದಿನ ಸುತ್ತಿಗೆ ತೇರ್ಗಡೆ ಹೊಂದಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ 3ನೇ ಶ್ರೇಯಾಂಕಿತೆ ಇಗಾ ಸ್ವಿಯಾಟೆಕ್, ಮ್ಯಾಡಿಸನ್ ಕೀಸ್, ಹಾಗೂ ಕೋಸ್ಟ್ಯುಕ್ ಅವರು ತಮ್ಮ ಎದುರಾಳಿಗಳನ್ನು ಸೋಲಿಸಿ 3ನೇ ಸುತ್ತಿಗೆ ಅರ್ಹತೆ ಗಳಿಸಿದ್ದಾರೆ.

ಟೈಗರ್ಸ್-ವಾರಿಯರ್ಸ್ ಪಂದ್ಯ ಮಳೆಯ ಪಾಲು

■ **ವಿಜಯಕುಮಾರ ಪೂಜಾರಿ** ಹುಬ್ಬಳ್ಳಿ
vijaykumarvijji@gmail.com

ಉಭಯ ತಂಡಗಳಿಗೆ ತಲಾ 1 ಅಂಕ ಹಂಚಿಕೆ

ಮಳೆಯಿಂದಾಗಿ ಹುಬ್ಬಳ್ಳಿ ಟೈಗರ್ಸ್ ಮತ್ತು ಮೈಸೂರು ವಾರಿಯರ್ಸ್ ನಡುವಿನ ಲೀಗ್ ಪಂದ್ಯ ರದ್ದುಗೊಂಡಿತು. ಪರಿಣಾಮ ಉಭಯ ತಂಡಗಳಿಗೆ ತಲಾ ಒಂದು ಅಂಕ ಹಂಚಿಕೆ ಮಾಡಲಾಯಿತು.

ಈಗಾಗಲೇ ನಾಲ್ಕು ಪಂದ್ಯಗಳಲ್ಲಿ ಸೋಲನುಭವಿಸಿದ್ದ ವಾರಿಯರ್ಸ್ ತಂಡಕ್ಕೆ ಈ ಫಲಿತಾಂಶ ಮತ್ತೊಂದು ಆಘಾತ ನೀಡಿದಂತಾಯಿತು. ಮೂರು ಸೋಲುಗಳ ಜತೆಗೆ ತನ್ನ ಆರಂಭಿಕ ಪಂದ್ಯದಲ್ಲಿ ಅಂಕ ಹಂಚಿಕೊಂಡಿದ್ದ ಹುಬ್ಬಳ್ಳಿ ತಂಡ ಕೂಡ ಮತ್ತೊಮ್ಮೆ ಕೇವಲ 1 ಅಂಕಕ್ಕೆ ಸೀಮಿತಗೊಳ್ಳಬೇಕಾಯಿತು. ಪಂದ್ಯ ರದ್ದಾದ ಕಾರಣ ಉಭಯ ತಂಡಗಳ ಮುಂದಿನ ಹಾದಿ ಇನ್ನಷ್ಟು ಕಠಿಣಗೊಂಡಿದೆ. ಮಳೆ ಬರುವ ಮುನ್ನ ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿ 8 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 91 ರನ್ ಗಳಿಸಿತು. ರಿತೇಶ್ ಭಟ್ಕಳ್(10ಕ್ಕೆ2) ಅವರ ದಾಳಿಗೆ ತತ್ತರಿಸಿದ ಹೊರತಾಗಿಯೂ ಹುಬ್ಬಳ್ಳಿ ಅಭಿನವ್ (46) ಅವರಿಂದ ಚೇತರಿಸಿಕೊಂಡಿತು.

ಹೆಚ್ಚು ಪಂದ್ಯ ಆಡಿದಷ್ಟೂ ತಂಡದ ಕಾರ್ಯತಂತ್ರ ವೃದ್ಧಿ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಶ್ವ ಕ್ರೀಡಾ ಪತ್ರಕರ್ತ ದಿನದಂದು ಸೋಮಯ್ಯ, ಮರಿನ್ ಅಭಿಮತ

ತಂಡದ ಕಾರ್ಯತಂತ್ರಗಳನ್ನು ವೃದ್ಧಿಸಿಕೊಳ್ಳಲು ಹೆಚ್ಚು ಹೆಚ್ಚು ಪಂದ್ಯಗಳನ್ನಾಡುವುದು ಅಗತ್ಯವಿದೆ ಎಂದು ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಶಾರ್ಡ್ ಮರಿನ್ ಅಭಿಪ್ರಾಯಪಟ್ಟರು.

ಕರ್ನಾಟಕ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಗುರುವಾರ ವಿಶ್ವಕ್ರೀಡಾ ಪತ್ರಕರ್ತರ ದಿನದ ಅಂಗವಾಗಿ ಬೆಂಗಳೂರು ಕ್ರೀಡಾ ಪತ್ರಕರ್ತರ ಸಂಘ ಆಯೋಜಿಸಿದ್ದ 'ಭಾರತೀಯ ಹಾಕಿಗೆ ದೊಡ್ಡ ವರ್ಷ, ಇನ್ನೂ ದೊಡ್ಡ ನಿರೀಕ್ಷೆಗಳು' ಎಂಬ ವಿಷಯದ ಕುರಿತು ಸಂವಾದ ನಡೆಸಿದ ಭಾರತ ಹಾಕಿ ತಂಡದ ಮಾಜಿ ಆಟಗಾರ ಎಂ.ಎಂ. ಸೋಮಯ್ಯ ಮತ್ತು ಮರಿನ್, ಮುಂಬರುವ ಎಫ್‌ಐಎಚ್ ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್ ಭಾರತೀಯ ಹಾಕಿ ತಂಡಗಳ ಪಾಲಿಗೆ ಎಷ್ಟು ಮುಖ್ಯ ಎಂಬುದನ್ನು ವಿವರಿಸಿದರು. ಸಂವಾದದಲ್ಲಿ ಹಿರಿಯ ಹಾಗೂ ಕಿರಿಯ ಕ್ರೀಡಾ ಪತ್ರಕರ್ತರು ಉಪಸ್ಥಿತರಿದ್ದರು.

ದೇಣಿಗೆ ಕದ್ದು ಫಾರ್ಮ್‌ಹೌಸ್ ಕಟ್ಟಿದರು!

ಆರೋಪಿಗಳಿಂದ ಬಂಗಲೆ, ಎಸ್‌ಯುವಿ ಖರೀದಿ | ರಾಮ ಮಂದಿರ ಕಾಣಿಕೆ ಹಗರಣ ಬಗೆದಷ್ಟೂ ಬಯಲಿಗೆ

ಅಯೋಧ್ಯೆ: ರಾಮ ಮಂದಿರ ದೇಣಿಗೆ ಅಕ್ರಮ ಬಗೆದಷ್ಟೂ ಹೊರಬರುತ್ತಿದ್ದು, ಆರೋಪಿಗಳಾದ ಅನುಕಲ್ಪ್ ಮಿಶ್ರಾ ಮತ್ತು ಲವಕುಶ್ ಮಿಶ್ರಾ ಅಯೋಧ್ಯೆ ಹೊರವಲಯದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಮನೆ, ಫಾರ್ಮ್‌ಹೌಸ್ ಹೊಂದಿರುವುದು ಎಸ್‌ಐಟಿ ತನಿಖೆ ವೇಳೆ ಬಯಲಿಗೆ ಬಂದಿದೆ.

ಈ ಇಬ್ಬರೂ ಆರೋಪಿಗಳು ಐಷಾರಾಮಿ ಎಸ್‌ಯುವಿ ವಾಹನ, ಬೈಕ್ ಖರೀದಿಸಿರುವುದೂ ತಿಳಿದುಬಂದಿದೆ. ತನಿಖಾ ತಂಡವು ಇದುವರೆಗೂ ಬಂಧಿತ ಆರೋಪಿಗಳಿಂದ 79.85 ಲಕ್ಷ ರೂ. ವಶಪಡಿಸಿಕೊಂಡಿದ್ದು, ಯಾರು ಎಷ್ಟು ನಗದು ಲೂಟಿ ಹೊಡೆದಿದ್ದರು ಎಂಬ ಮಾಹಿತಿ ಹೊರಹಾಕಿದೆ. ಎಂಟು ಆರೋಪಿಗಳ ಪೈಕಿ ಒಬ್ಬಾತನ ಮನೆಯಿಂದ ಶೋಧದ ವೇಳೆ ಯಾವುದೇ ಹಣ ಪತ್ತೆಯಾಗಿಲ್ಲ.

ಆರೋಪಿ ಹೆಸರು	ವಶಪಡಿಸಿಕೊಂಡ ನಗದು (ಲಕ್ಷರೂ.ಗಳಲ್ಲಿ)
ಅವಿನಾಶ್ ಶುಕ್ಲಾ	20.40
ಕರುಣೇಶ್ ಪಾಂಡೆ	18.07
ಅನುಕಲ್ಪ್ ಮಿಶ್ರಾ	16.82
ಲವಕುಶ್ ಮಿಶ್ರಾ	14.25
ರಾಮ್‌ಶಂಕರ್ ಮಿಶ್ರಾ	7.32
ಮನೀಶ್	2
ರಾಮ್ ಶಂಕರ್ 'ಟಿನ್ನು' ಯಾದವ್	1

ದೇಣಿಗೆ ಅಕ್ರಮ ಪ್ರಕರಣ ಸಂಬಂಧ ಎಸ್‌ಐಟಿ ಈಗಾಗಲೇ ಎಂಟು ಆರೋಪಿಗಳ ನಿವಾಸಗಳ ಮೇಲೆ ದಾಳಿ ನಡೆಸಿ, ನಗದು ಹಾಗೂ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದೆ.

ಚಂಪತ್ ವಿರುದ್ಧ ದೂರು: ದೇಣಿಗೆ ಲೂಟಿ ಪ್ರಕರಣ ಸಂಬಂಧ ಫೈಜಾಬಾದ್ ವಕೀಲರ ಸಂಘವು ಗುರುವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿ, ಬಳಿಕ ಪೊಲೀಸರಿಗೆ ದೂರು ಸಲ್ಲಿಸಿದೆ.

ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಮಾಜಿ ಸದಸ್ಯ ಅನಿಲ್ ಮಿಶ್ರಾ, ಮಂದಿರ ನಿರ್ಮಾಣದ ಉಸ್ತುವಾರಿ ಗೋಪಾಲ್ ರಾವ್, ಟ್ರಸ್ಟ್‌ನ ಮತ್ತೊಬ್ಬ ಸದಸ್ಯ ಕೃಷ್ಣ ಮೋಹನ್ ವಿರುದ್ಧ ದೇಣಿಗೆ ಹಣ ದುರುಪಯೋಗ ಆರೋಪದ ಮೇರೆಗೆ ಎಫ್‌ಐಆರ್ ದಾಖಲಿಸುವಂತೆ ವಕೀಲರ ಸಂಘವು ದೂರಿನಲ್ಲಿ ಆಗ್ರಹಿಸಿದೆ.

ದೂರು ಸಲ್ಲಿಸುವ ಮುನ್ನ ವಕೀಲರು ನ್ಯಾಯಾಲಯದ ಆವರಣದಿಂದ ರಾಮ ಜನ್ಮಭೂಮಿ ಪೊಲೀಸ್ ಠಾಣೆವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು, ಆರೋಪಗಳ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು. ''ಲಿಖಿತ ದೂರು ಸಲ್ಲಿಸಲಾಗಿದೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ. ಒಂದೊಮ್ಮೆ ಪೊಲೀಸರು ಹಿಂದೇಟು ಹಾಕಿದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು,'' ಎಂದು ವಕೀಲರ ಸಂಘದ ಅಧ್ಯಕ್ಷ ಕಾಳಿಕಾ ಪ್ರಸಾದ್ ಮಿಶ್ರಾ ಮಾಧ್ಯಮಗಳಿಗೆ ತಿಳಿಸಿದರು.

ಈ ಪ್ರಕರಣದಲ್ಲಿ ಆರೋಪಿಗಳ ಪರವಾಗಿ ವಾದ ಮಂಡಿಸುವುದಿಲ್ಲ ಎಂದು ವಕೀಲರ ಸಂಘವು ಹಿಂದೆಯೇ ನಿರ್ಣಯ ಕೈಗೊಂಡಿದೆ. ಅಲ್ಲದೇ ಇದನ್ನು ಉಲ್ಲಂಘಿಸಿ ಆರೋಪಿಗಳ ಪರ ವಾದಿಸಲು ಮುಂದಾಗುವ ಯಾವುದೇ ವಕೀಲರಿಗೆ ತಲಾ 5 ಲಕ್ಷ ರೂ. ದಂಡ ವಿಧಿಸುವುದಾಗಿ ಎಚ್ಚರಿಸಿತ್ತು.

'ಕಳಂಕಿತನಾಗಿ ಅಯೋಧ್ಯೆಗೆ ಸೇವೆ ಸಲ್ಲಿಸಲ್ಲ'

ಅಯೋಧ್ಯೆಯಲ್ಲಿ ತಮ್ಮ ಸೇವೆ ಪೂರ್ಣಗೊಂಡಿದೆ ಮತ್ತು ದೇಣಿಗೆ ಲೂಟಿ 'ಕಳಂಕ'ದೊಂದಿಗೆ ಮುಂದುವರಿಯುವುದಿಲ್ಲ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.



ತಮ್ಮ ವಿಶ್ವಾಸಕ್ಕೆ ದ್ರೋಹ ಬಗೆಯಲಾಗಿದೆ ಎಂದೂ ಅವರು ಆಪ್ತರ ಬಳಿ ಬೇಸರ ಹೊರಹಾಕಿದ್ದಾರೆ. ಜುಲೈ 6ರಂದು ನಡೆಯುವ ಟ್ರಸ್ಟ್ ಸಭೆಯಲ್ಲಿ ಚಂಪತ್ ರಾಯ್ ಮತ್ತು ಟ್ರಸ್ಟ್‌ನ ಮಾಜಿ ಸದಸ್ಯ ಅನಿಲ್ ಮಿಶ್ರಾ ಭವಿಷ್ಯ ನಿರ್ಧಾರವಾಗಲಿರುವ ಹೊತ್ತಲ್ಲೇ ರಾಯ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

ಬಯಲಿಗೆಳೆದಿದ್ದೇ ನಾನು!: ''ದೇಣಿಗೆ ಕಳವನ್ನು ಪತ್ತೆಹಚ್ಚಲು ಮುಂದಾಗಿದ್ದೇ ನಾನು. ನನ್ನ ಸೂಚನೆ ಮೇರೆಗೆ ಮಂದಿರದ ಆವರಣದಲ್ಲಿ ರಹಸ್ಯ ಕಣ್ಗಾವಲು ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಆ ಕ್ಯಾಮೆರಾಗಳೇ ಅಪಾದಿತರನ್ನು ಪತ್ತೆಹಚ್ಚಲು ಸಹಾಯ ಮಾಡಿದವು,'' ಎಂದು ಸಮರ್ಥಿಸಿಕೊಂಡಿದ್ದಾರೆ.

ಸುಪ್ರೀಂ ನೇತೃತ್ವದಲ್ಲಿ ತನಿಖೆಗೆ ಆಗ್ರಹ

ದೇಣಿಗೆ ಲೂಟಿಯು ಹಿಂದೂಗಳ ಧಾರ್ಮಿಕ ನಂಬಿಕೆಗೆ ಬಗೆದಿರುವ ಅತಿದೊಡ್ಡ ದ್ರೋಹ ಎಂದು ಕಿಡಿಕಾರಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ರಾಮ ಮಂದಿರ ದೇಣಿಗೆ ಅಕ್ರಮ ಪ್ರಕರಣ ಸಂಬಂಧ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿದ ಫೈಜಾಬಾದ್ ವಕೀಲರ ಸಂಘವು ಗುರುವಾರ ಅಯೋಧ್ಯೆಯಲ್ಲಿ ದೂರು ಸಲ್ಲಿಸಿತು.

ಲೂಟಿಕೋರರ ವಿರುದ್ಧ 'ಬುಲ್ಡೋಜರ್' ಅಸ್ತ್ರ

ರಾಮ ಮಂದಿರದಲ್ಲಿ ದೇಣಿಗೆ ಲೂಟಿ ಮಾಡಿದ ಆರೋಪಿಗಳ ವಿರುದ್ಧ ಬುಲ್ಡೋಜರ್ ಅಸ್ತ್ರಪ್ರಯೋಗಕ್ಕೆ ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮುಂದಾಗಿದ್ದಾರೆ. ಮಂದಿರದ ಹಣ ಲೂಟಿ ಮಾಡಿರುವ ಆರೋಪಿ ಲವಕುಶ್ ಮಿಶ್ರಾ ಹಾಗೂ ಅನುಕಲ್ಪ್ ಮಿಶ್ರಾ ಮನೆ ಧ್ವಂಸಕ್ಕೆ ಅಯೋಧ್ಯಾ ಡೆವಲಪ್‌ಮೆಂಟ್ ಅಥಾರಿಟಿ ನೋಟಿಸ್ ಕೊಟ್ಟಿದೆ. ಲವಕುಶ್ ಮಿಶ್ರಾ 1000 ಚ.ಅಡಿ ವಿಸ್ತೀರ್ಣದಲ್ಲಿ ಬೃಹತ್ ಮನೆ ನಿರ್ಮಿಸುತ್ತಿದ್ದಾನೆ. ಇದಕ್ಕಾಗಿ 25 ಲಕ್ಷ ರೂ. ಕೊಟ್ಟು ಭೂಮಿ ಖರೀದಿಸಿದ್ದಾನೆ. 80-90 ಲಕ್ಷ ರೂ. ವೆಚ್ಚದಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದಾನೆ. ಈ ಮನೆಯು ಮುಂದಿನ 4 ತಿಂಗಳ ಒಳಗೆ ಪೂರ್ಣಗೊಳ್ಳಬೇಕಿತ್ತು. ಬೇನಾಮಿ ಹೆಸರಿನಲ್ಲಿ ಆಸ್ತಿ ಮಾಡಿರುವ ಶಂಕೆಯಲ್ಲಿ ಟ್ರಸ್ಟ್‌ನ ಎಲ್ಲಾ ಸದಸ್ಯರು, ಬಂಧಿತ ಆರೋಪಿಗಳ ಆಸ್ತಿ, ನೋಂದಣಿ ದಾಖಲೆಗಳನ್ನು ಪರಿಶೀಲಿಸಲು ಎಸ್‌ಐಟಿ ಮುಂದಾಗಿದೆ.

ರಾಮನ ಹೆಸರಲ್ಲಿ ಮತ ಕೇಳುವ ಹಾಗೂ ರಾಜಕೀಯ ನಡೆಸುವ ಬಿಜೆಪಿ, ವಿಎಚ್‌ಪಿ, ಬಜರಂಗದಳದವರು ರಾಮನ ದೇಣಿಗೆಯನ್ನೇ ಲೂಟಿ ಮಾಡುವವರು. ಅಸಲಿ ಹಿಂದೂಗಳ ಬಗ್ಗೆ ಇವರಿಗೇನೂ ಗೊತ್ತು? ಇವರೆಲ್ಲರೂ ನಕಲಿ ಹಿಂದೂಗಳು.

- ಕಪಿಲ್ ಸಿಬಲ್
ರಾಜ್ಯಸಭೆ ಸದಸ್ಯ

ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ: ವಿಶ್ವ ಹಿಂದೂ ಪರಿಷತ್

''ರಾಮಮಂದಿರ ದೇಣಿಗೆ ಲೂಟಿ ಪ್ರಕರಣಕ್ಕೂ ವಿಶ್ವಹಿಂದೂ ಪರಿಷತ್‌ಗೂ (ವಿಎಚ್‌ಪಿ) ಸಂಬಂಧವಿಲ್ಲ, ಟ್ರಸ್ಟ್ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ 'ನಿರ್ಲಕ್ಷ್ಯದ ಅಪರಾಧ' ಎಸಗಿರಬಹುದು. ಇಲ್ಲಿ ಯಾರನ್ನೂ ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ,'' ಎಂದು ವಿಎಚ್‌ಪಿ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಹೇಳಿದ್ದಾರೆ.

ಇಂಗ್ಲಿಷ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ''ಎಸ್‌ಐಟಿ ಅಂತಿಮ ವರದಿ ನಂತರ ವಿಎಚ್‌ಪಿ ಅಂತಾರಾಷ್ಟ್ರೀಯ ಉಪಾಧ್ಯಕ್ಷರೂ ಆಗಿರುವ ಚಂಪತ್ ರಾಯ್ ವಿರುದ್ಧ ನಾವು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ನಿರ್ಧರಿಸಬಹುದಾಗಿದೆ,'' ಎಂದು ಸ್ಪಷ್ಟಪಡಿಸಿದ್ದಾರೆ.

''ದೇಣಿಗೆ ಲೂಟಿ ಅತ್ಯಂತ ದುರದೃಷ್ಟಕರ. ಇದು ವಿಶ್ವದಾದ್ಯಂತ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿದೆ. ಇದಕ್ಕೆ ಯಾವುದೇ ನೆಪಗಳನ್ನು ಹುಡುಕುವ ಅಥವಾ ಸಮರ್ಥಿಸಿಕೊಳ್ಳುವ ಪ್ರಶ್ನೆಯೇ ಇಲ್ಲ, ಯಾರದೇ ವಿರುದ್ಧ ಆರೋಪಗಳಿದ್ದರೂ, ಅವರು ಎಷ್ಟೇ ಪ್ರಭಾವಿಯಾಗಿದ್ದರೂ ಎಸ್‌ಐಟಿ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಬೇಕು ಎಂಬುದಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ,'' ಎಂದಿದ್ದಾರೆ.

''ರಾಮ ಜನ್ಮಭೂಮಿ ಚಳವಳಿಯಲ್ಲಿ ವಿಎಚ್‌ಪಿಯ ಪಾತ್ರ ಮಂದಿರ ನಿರ್ಮಾಣ ಖಚಿತಪಡಿಸಿಕೊಳ್ಳುವುದಾಗಿತ್ತು. ಮಂದಿರ ನಿರ್ಮಾಣ ಹಾಗೂ ನಂತರ ಅದರ ಆಡಳಿತ ನಿರ್ವಹಣೆ ಟ್ರಸ್ಟ್‌ನ ಜವಾಬ್ದಾರಿಯಾಗಿದೆ. ಮಂದಿರದ ನಿರ್ವಹಣೆ ನಮ್ಮ ಕೆಲಸವಲ್ಲ,'' ಎಂದೂ ಅಲೋಕ್ ಸ್ಪಷ್ಟಪಡಿಸಿದ್ದಾರೆ.

ಕೀವ್ ಮೇಲೆ ರಷ್ಯಾ ದಾಳಿ: 21 ಸಾವು

ಕೀವ್/ಡಮಾಸ್ಕಸ್: ಉಕ್ರೇನ್‌ನ ಕೀವ್ ನಗರದ ಮೇಲೆ ರಷ್ಯಾ ನಡೆಸಿದ ವೈಮಾನಿಕ ದಾಳಿಯಲ್ಲಿ 21 ನಾಗರಿಕರು ಬಲಿಯಾಗಿದ್ದು, 70 ಮಂದಿ ಗಾಯಗೊಂಡಿದ್ದಾರೆ.

ಇತ್ತೀಚೆಗೆ ಮಾಸ್ಕೊ ಸಮೀಪದ ತೈಲ ಸಂಸ್ಕರಣಾ ಘಟಕಗಳ ಮೇಲೆ ಉಕ್ರೇನ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ಗುರುವಾರ ಮುಂಜಾನೆ ರಷ್ಯಾ ಭೀಕರ ವೈಮಾನಿಕ ದಾಳಿ ನಡೆಸಿದೆ.

500 ಡ್ರೋನ್‌ಗಳು, 70 ಕ್ಷಿಪಣಿಗಳನ್ನು ಬಳಸಿಕೊಂಡು, ಕೀವ್ ನಗರ ಸೇರಿದಂತೆ ಹಲವು ಪ್ರದೇಶಗಳ ಮೇಲೆ ದಾಳಿ ನಡೆಸಿದೆ. ಹಲವು ಗಂಟೆಗಳ ಕಾಲ ನಡೆದ ದಾಳಿಯಲ್ಲಿ ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಭಾರಿ ಸ್ಫೋಟದ ಸದ್ದುಗಳು ಕೇಳಿ ಬಂದಿವೆ. ಹಲವು ಡ್ರೋನ್, ಕ್ಷಿಪಣಿಗಳನ್ನು ಉಕ್ರೇನ್ ರಕ್ಷಣಾ ಪಡೆ ಹೊಡೆದುರುಳಿಸಿದೆ ಎಂದು ವರದಿಯಾಗಿದೆ.

ರಷ್ಯಾ ವೈಮಾನಿಕ ದಾಳಿಗೆ ಹಲವು ಕಟ್ಟಡಗಳು ಹಾನಿಗೀಡಾಗಿವೆ. ಹೋಟೆಲ್‌ಗಳು, ವಸತಿ ಗೃಹಗಳು, ಅಪಾರ್ಟ್‌ಮೆಂಟ್‌ಗಳಿಗೆ ಡ್ರೋನ್, ಕ್ಷಿಪಣಿಗಳು ಅಪ್ಪಳಿಸಿವೆ. 9 ಅಂತಸ್ತಿನ ಕಟ್ಟಡವೊಂದು ಧರೆಗುರುಳಿದೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ.

ಸಿರಿಯಾ ಕೆಫೆಯಲ್ಲಿ ಬಾಂಬ್ ಸ್ಫೋಟ: ಸಿರಿಯಾದ ಡಮಾಸ್ಕಸ್ ನಗರದ ಕೆಫೆಯೊಂದರಲ್ಲಿ ಗುರುವಾರ ಬಾಂಬ್ ಸ್ಫೋಟ ಸಂಭವಿಸಿದೆ. ಸ್ಫೋಟದಲ್ಲಿ ಐವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಸಿರಿಯಾದ ಸರಕಾರಿ ಸುದ್ದಿಸಂಸ್ಥೆ ಸನಾ ವರದಿ ಮಾಡಿದೆ.

ದುರಂತ ಸ್ಥಳದ ಸ್ವಲ್ಪ ದೂರದಲ್ಲಿ ನ್ಯಾಯಮೂರ್ತಿಗಳ ನಿವಾಸವಿದೆ. ಸದ್ಯಕ್ಕೆ ಯಾವುದೇ ಉಗ್ರ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿಲ್ಲ.

'ವಿಭಜನೆ ವೇಳೆ ಪಾಕ್‌ನಿಂದ ಬಂದವರು ಯೋಧರು'

ನಾಗಪುರ: ಭಾರತ ವಿಭಜನೆಗೊಂಡ ವೇಳೆ ಪಾಕಿಸ್ತಾನದಿಂದ ಭಾರತಕ್ಕೆ ಬಂದವರು ನಿರಾಶ್ರಿತರಲ್ಲ, ನಮ್ಮ ದೇಶ ಮತ್ತು ನೆಲದ ಧರ್ಮದ ಮೇಲಿನ ಪ್ರೀತಿಯಿಂದ ಎಲ್ಲವನ್ನೂ ತ್ಯಾಗ ಮಾಡಿ ಬಂಧ 'ಹೋರಾಟದ ಯೋಧರು' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.



ನಾಗಪುರದಲ್ಲಿ ಸಿಂಧು ಶಿಕ್ಷಣ ಸಂಸ್ಥೆಯ 75ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಭಾಗವತ್, ''ಅವಿಭಜಿತ ಭಾರತದ ಕಾಲದಲ್ಲಿ ಪಾಕಿಸ್ತಾನ ಭಾಗದಲ್ಲಿದ್ದ ನಮ್ಮ ಜನರು ಹಲವು ತಲೆಮಾರುಗಳಿಂದ ಸಂಪಾದಿಸಿದ್ದ ತಮ್ಮ ಮನೆ, ಆಸ್ತಿ, ವ್ಯಾಪಾರ ಹಾಗೂ ಸಂಪತ್ತನ್ನು ಬಿಟ್ಟು ಭಾರತವನ್ನು ಆಯ್ಕೆ ಮಾಡಿಕೊಂಡಿದ್ದರು. ಎಲ್ಲವನ್ನೂ ತ್ಯಾಗ ಮಾಡಿ ಬಂದವರು ನಿರಾಶ್ರಿತರಲ್ಲ, ಬದಲಾಗಿ ಹೋರಾಟ ಮನೋಭಾವದ ನೈಜ ಯೋಧರು. ಆ ಕಾಲ ಘಟ್ಟದಲ್ಲಿ ನಿರಾಶ್ರಿತರು ಎಂಬ ತಪ್ಪು ಪದ ಬಳಸಲಾಗಿದೆ,'' ಎಂದು ಹೇಳಿದರು.

ಕೇವಲ ಉದ್ಯೋಗಕ್ಕೆ ಶಿಕ್ಷಣವಲ್ಲ: ''ಶಿಕ್ಷಣದ ಉದ್ದೇಶ ಕೇವಲ ಉದ್ಯೋಗ ಪಡೆಯುವುದಲ್ಲ, ಉತ್ತಮ ವ್ಯಕ್ತಿತ್ವ ಮತ್ತು ಮೌಲ್ಯಗಳನ್ನು ಬೆಳೆಸುವುದಾಗಿದೆ. ಮೌಲ್ಯಾಧಾರಿತ ಶಿಕ್ಷಣವು ಸರಿ ಮತ್ತು ತಪ್ಪುಗಳ ನಡುವಿನ ವ್ಯತ್ಯಾಸವನ್ನು ಅರಿಯಲು ಸಹಾಯ ಮಾಡುತ್ತದೆ,'' ಎಂದು ಭಾಗವತ್ ಪ್ರತಿಪಾದಿಸಿದರು.

ಮಳೆ ನೀರಿನಲ್ಲಿ ತೇಲಿದ ಪ್ರಶ್ನೆಪತ್ರಿಕೆಗಳ ಕಟ್ಟುಗಳು!

ಪಟನಾ: 9, 10 ಮತ್ತು 12ನೇ ತರಗತಿಗಳ ತ್ರೈಮಾಸಿಕ ಪರೀಕ್ಷೆಗಳಿಗೆ ಬಿಹಾರ ಶಿಕ್ಷಣ ಮಂಡಳಿಯು ಬಕ್ಸಾರ್‌ನ ಕೇಂದ್ರವೊಂದಕ್ಕೆ ಕಳುಹಿಸಿಕೊಟ್ಟಿದ್ದ ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳ (ಆನ್ಸರ್ ಶೀಟ್ ಬುಕ್‌ಲೆಟ್) ಕಟ್ಟುಗಳು ಮಳೆ ನೀರಿನಲ್ಲಿ ತೇಲುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ವಿಡಿಯೊ ವೈರಲ್ ಆದ ಬೆನ್ನಲ್ಲೇ ಬಿಹಾರ ಶಿಕ್ಷಣ ಇಲಾಖೆ ಕಾರ್ಯವೈಖರಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಪರೀಕ್ಷಾ ಸಾಮಗ್ರಿಗಳ ನಿರ್ವಹಣೆಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಕೆಲವರು ಕಿಡಿಕಾರಿದ್ದಾರೆ. ಇನ್ನೂ ಕೆಲವರು, ಈ ಘಟನೆಯು ರಾಜ್ಯದ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳ ಸಂಕೇತವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಇಂಥ ನಿರ್ಲಕ್ಷ್ಯದ ನಡುವೆಯೂ ಶಿಕ್ಷಣ ಇಲಾಖೆ ಅಧಿಕಾರಿಗಳು ಪರೀಕ್ಷಾ ಸರಕುಗಳಿಗೆ ಯಾವುದೇ ಹಾನಿಯಾಗಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ. ''ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳ ಕಟ್ಟುಗಳನ್ನು ಕಟ್ಟಡದ ಆವರಣದಲ್ಲಿ ಇರಿಸಿದ್ದ ವೇಳೆ ಹಠಾತ್ ಮಳೆ ಸುರಿದಿದೆ. ತಕ್ಷಣವೇ ಅವುಗಳನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಲಾಗಿದೆ. ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ,'' ಎಂದು ಅಧಿಕಾರಿಗಳು ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಯಲ್ಲಿ ಸಿಎಗಳ ಪಾತ್ರ ಹಿರಿದು

ಹೊಸದಿಲ್ಲಿ: ಹೊಸದಿಲ್ಲಿಯ ವಿಜ್ಞಾನ ಭವನದಲ್ಲಿ ಬುಧವಾರ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ತನ್ನ 78ನೇ ಸಿಎ ದಿನವನ್ನು ಬುಧವಾರ ಆಚರಿಸಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿದ್ದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ''ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಲೆಕ್ಕ ಪರಿಶೋಧಕರ ಪಾತ್ರ ಹೆಚ್ಚಿದೆ. ಲೆಕ್ಕಪರಿಶೋಧಕರು ಜಿಎಸ್‌ಟಿ ಪ್ರಕ್ರಿಯೆಗಳನ್ನು ಸರಳೀಕರಿಸಿ ಹೆಚ್ಚು ಜನಮುಖಿಯಾಗಿಸಿದ್ದಾರೆ. ಇದರಿಂದ ಹೂಡಿಕೆದಾರರ ವಿಶ್ವಾಸಾರ್ಹತೆ ಹೆಚ್ಚಿದೆ. ಐಸಿಎಐ ಕಟ್ಟುನಿಟ್ಟಿನ ಮಾನದಂಡಗಳನ್ನು ಕಾಯ್ದುಕೊಂಡಿದೆ,'' ಎಂದು ಶ್ಲಾಘಿಸಿದರು. ಐಸಿಎಐ ಅಧ್ಯಕ್ಷ ಸಿಎ. ಪ್ರಸನ್ನ ಕುಮಾರ್ ಮತ್ತು ಐಸಿಎಐ ಉಪಾಧ್ಯಕ್ಷ ಸಿಎ.ಮಂಗೇಶ್ ಕಿನಾರೆ , ಐಸಿಎಐ ಕಾರ್ಯದರ್ಶಿ ಸಿಎ. ಡಾ. ಜೈ ಕುಮಾರ್ ಬಾತ್ರಾ ಮತ್ತು ಐಸಿಎಐನ ಹಲವು ಮಾಜಿ ಅಧ್ಯಕ್ಷರು ಉಪಸ್ಥಿತರಿದ್ದರು.